Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-17 ಸಂಚಿಕೆ-3 ಜನವರಿ 16-22, 2023 ಪುಟ 16 ರೂ. 10/-
Volume-17 Issue-3 January 16-22, 2023 Pages:16 Price: 10/-



ಜನವಾದಿ ಸಮ್ಮೇಳನ:

ಸಮತೆ, ಮಮತೆಗಳ ಒಡಲ ಕಿಡಿಗಳ ದಿಟ್ಟ ಹೆಜ್ಜೆ, ಗಟ್ಟಿ ದನಿ

STRUGGLE IN UNITY FOR EQUALITY

AIDWA
13th NATIONAL CONFERENCE
2023 JANUARY 6-9
THIRUVANANTHAPURAM



- ಅರ್ಥ ವ್ಯವಸ್ಥೆಯ ಮೇಲೆ ವಿದೇಶ ವ್ಯಾಪಾರದ ಕೊರತೆಯ ಕಾರ್ಮೋಡಗಳು
- ಖಾತೆಗೆ ಬೀಳಲಿಲ್ಲ 15 ಲಕ್ಷ ರೂ. ಹೆಗಲು ಏರಿತು 1.4 ಲಕ್ಷದ ಹೊರೆ

ಮೋದಿಮಯವಾದ ಯುವಜನೋತ್ಸವ

ಸಾಹಿತ್ಯದಲ್ಲಿನ ಮಹಿಳಾ ಧ್ವನಿ ಸಾರಾ ಅಬೂಬಕರ್ ಇನ್ನಿಲ್ಲ



ಇದುವರೆಗೆ...

ಮಿಥ್ಯೆ 1 –'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ., ಅವರು ಅಸಾಧಾರಣ ಧೈರ್ಯ ಪ್ರದರ್ಶಿಸಿದರು, ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎಂಬುದು ಹಿಂದುತ್ವ ಪ್ರಚಾರಕರು ಹರಡುತ್ತಿರುವ ಮಿಥ್ಯೆ. ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ ಗೂಡಿನಂತಿರುವ ಸಣ್ಣ ಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಅಲ್ಲ. ಅಲ್ಲದೆ ಸಾವರ್ಕರ್ ತಮ್ಮ ರಾಜಕೀಯ ಜೀವನದ ಆ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿದ ಅವರು, ನಂತರ ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿ ಉಳಿಯಲಿಲ್ಲ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯಿಂದ ಆತಂಕಿತರಾಗಿದ್ದ ಬ್ರಿಟಿಷ್ ದೊರೆಗಳಿಗೆ ಕ್ಷಮಾಯಾಚನೆಯ ಅರ್ಜಿ ಸಲ್ಲಿಸುವುದರೊಂದಿಗೆ ತಮ್ಮ ರಾಜಕೀಯ ಬದುಕಿನ ಎರಡನೇ ಘಟ್ಟ ಆರಂಭಿಸಿದ ಸಾವರ್ಕರ್‌ರಂತವರ ಸಹಾಯ ಆ ದೊರೆಗಳಿಗೆ ಬೇಕಿತ್ತು, ಅದಕ್ಕಾಗಿ ಅವರನ್ನು ಬಿಡುಗಡೆಮಾಡಿದರು ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು. ಸಾವರ್ಕರ್ ಅವರ ಆವಶ್ಯಕತೆಯನ್ನು ಈಡೇರಿಸಿದರು.

1929ರಲ್ಲಿ ವಿದೇಶಿ ದೊರೆಗಳು ಅವರಿಗೆ ನಿವೃತ್ತಿ ವೇತನ ಮಂಜೂರು ಮಾಡಿರುವುದು ಸಾವರ್ಕರ್ ಮತ್ತು ಹಿಂದೂ ಮಹಾಸಭಾ ಎಷ್ಟು ಪ್ರಬಲವಾಗಿ ಬ್ರಿಟಿಷರ ಬಾಲಬಡುಕರಾಗಿದ್ದರು ಎನ್ನುವುದನ್ನು ಮತ್ತು ಅವರ ಒಡೆದು ಆಳುವ ಯೋಜನೆಯಲ್ಲಿ ಅವರು ಎಷ್ಟು ಮುಖ್ಯವಾಗಿದ್ದರು ಎಂಬುದನ್ನೂ ತೋರಿಸುತ್ತದೆ. ಇಷ್ಟೇ ಅಲ್ಲ, ಹಿಂದುತ್ವದ ಮಂದಿ ಅಲ್ಪಸಂಖ್ಯಾತರದ್ದು 'ದೇಶಾತೀತ ಸ್ವಾಮಿನಿಷ್ಠೆ'ಎಂದು ದೂಷಿಸಿದ್ದ ಅವರೇ ಸ್ವತಃ ಭಾರತವನ್ನು ನೇಪಾಳದ ರಾಜ ಆಳಬೇಕೆಂದು ಬಯಸಿದ್ದವರು, ಈ ಮೂಲಕ ಅದಕ್ಕೆ ತಮ್ಮದೇ 'ಮಾದರಿ'ಯನ್ನು ಪ್ರಸ್ತುತ ಪಡಿಸಿದ್ದರು!

ಮುಂದೆ ಓದಿ...

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–12

ಡಾ.ಶಮ್ಸುಲ್ ಇಸ್ಲಾಂ
ಅನು: ಟಿ.ಸುರೇಂದ್ರರಾವ್

ತ್ರಿವರ್ಣಧ್ವಜದ ಕಡುವಿರೋಧಿ ಮತ್ತು ಬ್ರಿಟಿಷರ ಬಂಟರಾಗಿದ್ದ ಹಿಂದೂ ರಾಜರುಗಳ ಮಹಾ ಸಮರ್ಥಕ

ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತೀಯರು ನಡೆಸಿದ ಐಕ್ಯ ಹೋರಾಟಗಳ ಪ್ರತಿಯೊಂದು ಸಂಕೇತಗಳನ್ನು ಆರ್.ಎಸ್.ಎಸ್. ನಂತೆ ಸಾವರ್ಕರ್ ಕೂಡ ಸಹಿಸುತ್ತಿರಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಬಾವುಟ ಅಥವಾ ರಾಷ್ಟ್ರೀಯ ಬಾವುಟವಾಗಿ ತ್ರಿವರ್ಣ (ಆಗ ಅದರ ಮಧ್ಯೆ ಚರಕ ಅಥವಾ ನೂಲುವ ಚಕ್ರ ಇತ್ತು) ಧ್ವಜವನ್ನು ಒಪ್ಪಲು ಅವರು ನಿರಾಕರಿಸಿದರು. ಸೆಪ್ಟೆಂಬರ್ 22, 1941 ರಂದು ಹಿಂದೂ ಮಹಾಸಭಾ ಕಾರ್ಯಕರ್ತರಿಗಾಗಿ ನೀಡಿದ ಹೇಳಿಕೆಯಲ್ಲಿ ಅವರು ಹೀಗೆ ಹೇಳಿದ್ದರು:

ಬಾವುಟಕ್ಕೆ ಸಂಬಂಧಪಟ್ಟಂತೆ ಹಿಂದೂಗಳಿಗೆ ತಿಳಿದಿರುವುದು ಒಟ್ಟಾಗಿ ಹಿಂದುತ್ವವನ್ನು ಪ್ರತಿನಿಧಿಸುವ 'ಓಂ ಮತ್ತು ಸ್ವಸ್ತಿಕ್' ಚಿತ್ರವನ್ನು ಹೊಂದಿರುವ 'ಕುಂಡಲಿನಿ ಕೃಪಾಂಕಿತ' ಹಿಂದೂ ಮಹಾಸಭಾ ಬಾವುಟವಲ್ಲದೇ ಬೇರಾವುದೂ ಅಲ್ಲ. ತಲೆತಲಾಂತರದಿಂದ ಹಿಂದೂಸ್ತಾನದಾದ್ಯಂತ ಗೌರವಿಸಲ್ಪಟ್ಟ ಹಿಂದೂ ಜನಾಂಗ ಮತ್ತು ರಾಜ್ಯನೀತಿಯ ಅತ್ಯಂತ ಪ್ರಾಚೀನ ಲಾಂಛನವದು. ಇವತ್ತು ಹರಿದ್ವಾರದಿಂದ ರಾಮೇಶ್ವರದವರೆಗೆ ಇರುವ ಮಿಲಿಯಾಂತರ ಹಿಂದೂಗಳ ಅನುಮೋದನೆ ಪಡೆದ ಮತ್ತು ಅಂಗೀಕರಿಸಲ್ಪಟ್ಟ ಮತ್ತು ಪ್ರತಿಯೊಂದೂ ಹಿಂದೂ ಮಹಾಸಭಾದ ಸಾವಿರ ಸಾವಿರಗಟ್ಟಲೆ ಶಾಖೆಗಳ ಮೇಲೆ ಹಾರಾಡುತ್ತಿರುವ ಬಾವುಟವದು. ಆದ್ದರಿಂದ, ಸರ್ವ ಹಿಂದೂಗಳ ಬಾವುಟವನ್ನು ಗೌರವಿಸದ ಮತ್ತು ಹಾರಿಸದ ಯಾವುದೇ ಸ್ಥಳ ಅಥವಾ ಸಮಾರಂಭವನ್ನು ಏನೇ ಆಗಲಿ ಹಿಂದೂ ಸಂಘಟನೆಯ ಕಾರ್ಯಕರ್ತರು ಬಹಿಷ್ಕರಿಸಬೇಕು. . . ಬಹಳ ಹೆಚ್ಚೆಂದರೆ ಚರಕ ಬಾವುಟವು ಖಾದಿ–ಭಂಡಾರವನ್ನು ಪ್ರತಿನಿಧಿಸಬಹುದಷ್ಟೆ, ಚರಕವು ಎಂದಿಗೂ ಹಿಂದೂಗಳಂತಹ ಹೆಮ್ಮೆಯ ಹಾಗೂ ಪ್ರಾಚೀನ ರಾಷ್ಟ್ರದ ಚೇತನವನ್ನು ಪ್ರತಿನಿಧಿಸಲಾರದು. ಆದಾಗ್ಯೂ, ಅದನ್ನು ಇಷ್ಟಪಡುವವರು ಅದರ ಪರವಾಗಿ ನಿಲ್ಲಬಹುದು. ಆದರೆ ಹಿಂದೂ ಸಂಘಟನೆಯವರಾದ ನಾವು ಮಾತ್ರ ಪ್ರಾಚೀನ ಹಿಂದೂ ಬಾವುಟವಲ್ಲದೇ ಬೇರಾವುದೇ ಬಾವುಟವನ್ನು ಸಮರ್ಥಿಸಲು ಮತ್ತು ಗೌರವಿಸಲು ಸಾಧ್ಯವಿಲ್ಲ.

1938 ರಲ್ಲಿ ಒಮ್ಮೆ ಹಿಂದುತ್ವ ಕಾರ್ಯಕರ್ತರು ತ್ರಿವರ್ಣಧ್ವಜವನ್ನು ಹರಿದು ಹಾಕಿದ ಘಟನೆಗೆ ಪ್ರಸಿದ್ಧ ಸಮಾಜವಾದಿ ಮುಖಂಡ ಎನ್.ಜಿ.ಗೋರೆಯವರು ಸಾಕ್ಷಿಯಾಗಿದ್ದರು. ಆ ದುರ್ಘಟನೆಗೆ ಸಾವರ್ಕರ್ ಮತ್ತು ಹೆಡ್ಗೆವಾರ್ ಅವರೇ ನೇರ ಹೊಣೆಗಾರರು ಎಂದು ಹೇಳಿದ್ದರು. ಮೇ ದಿನಾಚರಣೆಯ ಮೆರವಣಿಗೆಯ ಮೇಲೆ ದಾಳಿಮಾಡಿದ್ದರು, ಸೇನಾಪತಿ ಬಾಪಟ್ ಹಾಗೂ ಗಜಾನನ ಕಾನಿಟ್ಕರ್ ಅವರ ಮೇಲೆ ಹಲ್ಲೆ ಮಾಡಿದ್ದರು, ಅಷ್ಟೇ ಅಲ್ಲ, ರಾಷ್ಟ್ರಧ್ವಜವನ್ನು ಹರಿದು ಬಿಸಾಕಿದ್ದರು. ಹಿಂದೂ ಮಹಾಸಭಾದ ಹಾಗೂ ಹೆಡ್ಗೆವಾರ್ ಅವರ ಹುಡುಗರು ಅದನ್ನೆಲ್ಲಾ ಮಾಡಿದ್ದರು. ಮುಸ್ಲಿಮರನ್ನು, ಕಾಂಗ್ರೆಸ್ಸನ್ನು ಮತ್ತು ಅದರ ಬಾವುಟವನ್ನು ದ್ವೇಷಿಸಲು ಆ ಹುಡುಗರಿಗೆ ಕಲಿಸಲಾಗಿದೆ. ಅವರಿಗೆ ಅವರದೇ ಆದ ಒಂದು ಬಾವುಟವಿದೆ, ಅದೇ 'ಭಗವಾಧ್ವಜ', ಅದು ಮರಾಠಿಗರ ಶ್ರೇಷ್ಠತೆಯ ಸಂಕೇತ.

ಹಿಂದೂ ರಾಜರುಗಳ ಸಮರ್ಥಕರಾಗಿ ಸಾವರ್ಕರ್

ಭಾರತವನ್ನು ಆಳುತ್ತಿದ್ದ ಹಿಂದೂ ರಾಜರುಗಳ ಮಹಾನ್ ಸಮರ್ಥಕರಾಗಿದ್ದರು ಸಾವರ್ಕರ್. ಅವರ ಪ್ರಕಾರ, ಹಿಂದೂ ರಾಜರುಗಳು ಸಹಧರ್ಮೀಯರು ಮಾತ್ರವಲ್ಲ, ಅವರು ನಮ್ಮ ಹಿಂದಿನ ವೀರ ಹಿಂದೂ ರಾಜರುಗಳ ವಂಶಸ್ಥರು ಮತ್ತು ಅವರ 'ಆಪತ್ಕಾಲದ ಶಕ್ತಿ'. ನಿಜ ಹೇಳಬೇಕೆಂದರೆ, ಬ್ರಿಟಿಷ್ ದೊರೆಗಳ ಜತೆ ಶಾಮೀಲಾಗಿದ್ದ ಭಾರತದಲ್ಲಿ ಆಳುತ್ತಿದ್ದ ರಾಜರುಗಳು ಹಿಂದೂವಾದದ 'ಶಕ್ತಿ–ಸ್ಥಾನ' (ಶಕ್ತಿಕೇಂದ್ರ) ಎಂದು ಹಿಂದೂ ಮಹಾಸಭಾ ಮತ್ತು ಆರ್.ಎಸ್.ಎಸ್. ಎರಡೂ ಹೆಮ್ಮೆಯಿಂದ ಬಣ್ಣಿಸುತ್ತವೆ. ನಾವು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ 1857 ರಲ್ಲಿ 'ದಂಗೆ'ಯನ್ನು ಬಗ್ಗುಬಡಿಯುವಲ್ಲಿ ವಿದೇಶಿ ದೊರೆಗಳಿಗೆ ಜನರನ್ನು ಮತ್ತು ಸಾಮಗ್ರಿಯನ್ನು ನಿಷ್ಠೆಯಿಂದ ಒದಗಿಸುತ್ತಿದ್ದ ರಾಜರುಗಳನ್ನು (ಹಿಂದೂ ಹಾಗೂ ಮುಸ್ಲಿಂ ಇಬ್ಬರೂ) ಮಾತ್ರವೇ ದೇಶೀಯ ರಾಜರುಗಳು ಎಂದು ವಸಾಹತುಶಾಹಿ ಧಣಿಗಳು ಉಳಿಸಿಕೊಂಡಿದ್ದರು.

ಬಿಳಿ ದೊರೆಗಳ ನಂಬುಗೆಯ ಬಂಟರಾಗಿದ್ದ ಈ ಹಿಂದೂ ರಾಜರುಗಳು ತಮ್ಮ ಸಂಸ್ಥಾನಗಳಲ್ಲಿ ಯಾವುದೇ ಪ್ರಜಾಸತ್ತಾತ್ಮಕ ಚಟುವಟಿಕೆಗಳಿಗೆ ಅವಕಾಶ ನೀಡಲಿಲ್ಲ. ಈ ಸಂಸ್ಥಾನಗಳಲ್ಲಿ ಮೂಲಭೂತ ಮಾನವ ಹಕ್ಕುಗಳನ್ನು ಕೇಳಿದ ಸಕ್ರಿಯ ರಾಜಕೀಯ ಕಾರ್ಯಕರ್ತರ ಮೇಲೆ ಅತ್ಯಾಚಾರ, ಕೊಲೆ, ಕಿರುಕುಳಗಳ ಅನಂತ ಉದಾಹರಣೆಗಳಿವೆ. ಮೈಸೂರು ಸಂಸ್ಥಾನದಲ್ಲಿ ತ್ರಿವರ್ಣಧ್ವಜಕ್ಕೆ ಸಾರ್ವಜನಿಕವಾಗಿ ಗೌರವ ಸಲ್ಲಿಸಿದ ಕಾರಣಕ್ಕಾಗಿ 26 ಜನರು ಅಲ್ಲಿಯ ಹಿಂದೂ ದೊರೆಗಳ ಸಶಸ್ತ್ರ ಸೇನೆಯಿಂದ ಕಗ್ಗೊಲೆಗೆ ಒಳಗಾದರು ಮತ್ತು ಅಸಂಖ್ಯಾತ ಜನರು ಗಾಯಗೊಂಡರು. ಈ ಕಗ್ಗೊಲೆಗೆ ಸಂಬಂಧಪಟ್ಟಂತೆ ಸಾವರ್ಕರ್ ಏಪ್ರಿಲ್ 17, 1941 ರಂದು ಶಿವಮೊಗ್ಗದಲ್ಲಿ ನಡೆಯುತ್ತಿದ್ದ ಹಿಂದೂ ಮಹಾಸಭಾದ ಅಧಿವೇಶನಕ್ಕೆ ಈ ಕೆಳಗಿನಂತೆ ಸಂದೇಶ ಕಳಿಸಿರುವುದನ್ನು ಗಮನಿಸಿದರೆ, ಸ್ವಾತಂತ್ರ್ಯ ಚಳುವಳಿಗಾರರ ಕಗ್ಗೊಲೆಯನ್ನು ಸಮರ್ಥಿಸಿರುವುದು ಸ್ವಾತಂತ್ರ್ಯ ಚಳುವಳಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಅವರ ಪಾಶವೀ ಧೋರಣೆಯನ್ನು ಬಯಲುಮಾಡುತ್ತದೆ:

'ಹಿಂದೂ ಸಂಸ್ಥಾನದ ಹಿಂದೂ ಶಕ್ತಿಯನ್ನು ಕ್ರೋಢೀಕರಿಸುವುದು ಹಾಗೂ ಬಲಪಡಿಸುವುದು ಮತ್ತು ಮಹಾರಾಜರು ಹಾಗೂ ಹಿಂದೂ ಸಂಸ್ಥಾನದ ಶ್ರೇಯಸ್ಸಿಗಾಗಿ ಅವರ ಪರವಾಗಿ ನಿಲ್ಲುವುದು ಮೈಸೂರು ಸಂಸ್ಥಾನದ ಹಿಂದೂ ಸಭಾದ ಮುಖ್ಯಗುರಿಯಾಗಿರಬೇಕು. ಹಿಂದೂಯೇತರ ಶಕ್ತಿಗಳು ಅಥವಾ ಖೋಟಾ ರಾಷ್ಟ್ರೀಯತೆಯ ಸಂಘಟನೆಗಳ ವಂಚಕ ಹಿಂದೂಗಳ ಯಾವುದೇ ವಿಧ್ವಂಸಕ ಚಟುವಟಿಕೆಗಳ ವಿರುದ್ಧ ಅವರಿಗೆ ಅತ್ಯಂತ ನಿಷ್ಠಾವಂತ ಹಾಗೂ ದೇಶಪ್ರೇಮದ ಬೆಂಬಲವನ್ನು ನೀಡುವ ಮೂಲಕ ರಾಜರು ಹಾಗೂ ಸಂಸ್ಥಾನವನ್ನು ಸಮರ್ಥಿಸಬೇಕು.'

ಈ ರಾಜರುಗಳ ಅಮಾನುಷ ಆಳ್ವಿಕೆಗಳ ಬಗ್ಗೆ ಸರ್ದಾರ್ ವಲ್ಲಭಬಾಯ್ ಪಟೇಲರಿಗೆ ಬಹಳ ಚೆನ್ನಾಗಿ ಗೊತ್ತಿತ್ತು. ಅವರು ಬಿಕಾನೆರ್ ಆಳರಸನಿಗೆ ಜುಲೈ 24, 1946 ರಂದು ಬರೆದ ಪತ್ರ ಹೀಗಿದೆ: "ರಾಜರುಗಳು ಮತ್ತು ಅವರ ಪ್ರಜೆಗಳ ನಡುವಿನ ಅನ್ಯೋನ್ಯ ಸಂಬಂಧಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಬರುವ ಪ್ರಮುಖ ಸಮಸ್ಯೆಯೆಂದರೆ, ಜನರ ಮೂಲಭೂತ ಹಕ್ಕುಗಳನ್ನು ಹಾಗೂ ನಾಗರಿಕ ಸ್ವಾತಂತ್ರ್ಯಗಳನ್ನು ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿನ ಜನರ ಸಹಜ ಬೇಡಿಕೆಗಳನ್ನು ಮಾನ್ಯ ಮಾಡುವಲ್ಲಿ ಬಹುತೇಕ ರಾಜ್ಯಗಳಲ್ಲಿ ಇಷ್ಟವಿಲ್ಲದಿರುವುದು."

ನವಾನಗರದ ಮಹಾರಾಜ (ಚಾನ್ಸಲರ್ ಆಫ್ ಚೇಂಬರ್ ಆಫ್ ಪ್ರಿನ್ಸೆಸ್–ದೇಶೀ ರಾಜರುಗಳ ಸಂಸ್ಥೆಯ ಮುಖ್ಯಸ್ಥ) 1947 ರಲ್ಲಿ ದೇಶೀಯ ರಾಜರುಗಳು ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳುವ ಬಗ್ಗೆ ಮುಸ್ಲಿಂಲೀಗಿನೊಂದಿಗೆ ಸಂಧಾನ ನಡೆಸಿದ್ದರು ಎಂಬ ಸಂಗತಿಯಿಂದ ಐಕ್ಯ ಭಾರತಕ್ಕೆ ಬದ್ಧತೆಯ ಕುರಿತು ಈ ಹಿಂದೂ ರಾಜರುಗಳ ಬದ್ಧತೆ ಏನೆಂಬುದನ್ನು ತಿಳಿಯಬಹುದು.

"ನಾನು ಲೀಗನ್ನು ಏಕೆ ಬೆಂಬಲಿಸಬಾರದು? ಜಿನ್ನಾರವರು ನಮ್ಮ ಅಸ್ತಿತ್ವವನ್ನು ಸಹಿಸಲು ಸಿದ್ಧರಾಗಿದ್ದಾರೆ, ಆದರೆ ನೆಹರೂರವರು ರಾಜರುಗಳ ಅಳಿವನ್ನು ಬಯಸುತ್ತಿದ್ದಾರೆ.." ಎಂದು ಈ ರಾಜರುಗಳ ಮುಖಂಡ ವಾದ ಮಾಡಿದ್ದರು.

ಒಂದುಕಡೆ ಹಿಂದೂ ಮಹಾಸಭಾ ಮತ್ತು ಆರ್.ಎಸ್.ಎಸ್., ಮತ್ತೊಂದೆಡೆ ಹಿಂದೂ ರಾಜರುಗಳು, ಇವರ ನಡುವಿನ ಅಕ್ರಮ ಹಾಗೂ ದುರುದ್ದೇಶಪೂರಿತ ನಂಟು 1948 ರಲ್ಲಿ ಗಾಂಧಿಯವರ ಹತ್ಯೆಯ ನಂತರ ಮತ್ತೊಮ್ಮೆ ಬಯಲಾಯಿತು. ಆರ್.ಎಸ್.ಎಸ್. ಜತೆ ಸ್ನೇಹಪರ ಸಂಬಂಧ ಹೊಂದಿದ್ದ ಗ್ವಾಲಿಯರ್, ಭರತ್ ಪುರ್ ಮತ್ತು ಅಲ್ವಾರ್ ಸಂಸ್ಥಾನಗಳಲ್ಲಿ ಗಾಂಧಿಯವರ ಹತ್ಯೆಯನ್ನು ಸಿಹಿ ಹಂಚುವುದರ ಮೂಲಕ ಸಂಭ್ರಮಿಸಿದರು. ಈ ವಿಷಯವನ್ನು ಸ್ವತಃ ಜವಾಹರ್‌ಲಾಲ್ ನೆಹರೂರವರು ಗೃಹ ಸಚಿವ ಸರ್ದಾರ್ ಪಟೇಲ್ ಅವರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದರು.

ಪ್ರಧಾನವಾಗಿ ಹಿಂದೂಗಳನ್ನೇ ಹೊಂದಿರುವ ಭಾರತೀಯರ ಅಭಿವೃದ್ಧಿ ಮತ್ತು ದೇಶದ ಸ್ವಾತಂತ್ರ್ಯ ಎರಡೂ ವಸಾಹತುಶಾಹಿ ಹಾಗೂ ಅದರ ಬಾಲಬಡುಕರ ನಾಶದ ಮೇಲೆ ಅವಲಂಬಿತವಾಗಿತ್ತು. ಆದರೆ ಸಾವರ್ಕರ್ ಮತ್ತು ಆರ್.ಎಸ್.ಎಸ್, ಈ ನಿರಂಕುಶ ಪಾಳೇಗಾರಿ ವಿಭಾಗಗಳೊಂದಿಗೆ ಸೇರಿಕೊಂಡು ಅವರ ಸಾರ್ವಭೌಮತ್ವವನ್ನು ಮರುಸ್ಥಾಪಿಸಬೇಕೆಂದು ಒತ್ತಾಯಿಸುತ್ತ, ವಾಸ್ತವವಾಗಿ ಈ ರಾಜರುಗಳ ನಿಜವಾದ ಪೋಷಕರಾಗಿದ್ದ ಬ್ರಿಟಿಷ್ ದೊರೆಗಳ ಪರವಾಗಿ ಅವರು ನಿಂತಿದ್ದರು. ಹಿಂದೂ ಮಹಾಸಭಾ ಮತ್ತು ಸ್ಥಳೀಯ ದೊರೆಗಳ ನಡುವಿನ ನಂಟು ಮತ್ತೊಮ್ಮೆ ಸ್ವಾತಂತ್ರ್ಯ ಚಳುವಳಿಗೆ ಕೇಂಡುಂಟುಮಾಡುವ ಸಾವರ್ಕರ್ ಧೋರಣೆಯನ್ನು ಸಾಬೀತುಮಾಡುತ್ತಿದೆ.

ಹಿಂದೂ ಮಹಾಸಭಾ ಕುರಿತ ಭಿಡೆಯವರ ಅಧಿಕೃತ ದಾಖಲಾತಿಗಳಲ್ಲಿ ಸಾವರ್ಕರ್ ಅವರ ಆ ಕಾಲದ ಬರಹಗಳು ಹಾಗೂ ಅಧಿಕೃತ ಸಂದೇಶಗಳು ಈ ಕೆಟ್ಟ ನಿರಂಕುಶಾಧಿಪತಿಗಳ ಜತೆ ಅವರಿಗಿರುವ ಅನ್ಯೋನ್ಯ ಸಂಬಂಧಗಳನ್ನು ಬಹಿರಂಗಪಡಿಸುತ್ತವೆ. 'ಎಲ್ಲಾ ಹಿಂದೂ ಸಂಸ್ಥಾನಗಳು ಮತ್ತು ಅಲ್ಲಿರುವ ಜನರ ಒಳಿತು ಹಾಗೂ ದೇಶಭಕ್ತಿಯಿಂದ ಕೂಡಿದ ಪ್ರಗತಿಯೊಂದಿಗೆ ಯಾವಾಗಲೂ ಸದಾಶಯಗಳನ್ನು ಹೊಂದಿರುವುದು ಮತ್ತು ಅವರ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡದಿರುವುದು ಹಿಂದೂ ಮಹಾಸಭಾದ ಕಾರ್ಯನೀತಿಯಾಗಿದೆ' ಎಂದು ಜುಲೈ 19, 1938 ರಂದು ಸಾವರ್ಕರ್ ಅವರೇ ಸಹಿ ಮಾಡಿದ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ರಾಜ ಸಂಸ್ಥಾನಗಳಲ್ಲಿದ್ದ ಜನರ ನಾಗರಿಕ ಹಕ್ಕುಗಳನ್ನು ಮರುಸ್ಥಾಪಿಸುವ ಚಳುವಳಿಯನ್ನು ಕಾಂಗ್ರೆಸ್ ಆರಂಭಿಸಿದಾಗ ದೇಶೀಯ ಹಿಂದೂ ನಿರಂಕುಶ ದೊರೆಗಳ ಪರವಾಗಿ ನಿಂತ ಸಾವರ್ಕರ್ ಕೋಪದಿಂದ ಹೀಗೆ ಪ್ರತಿಕ್ರಿಯಿಸುತ್ತಾರೆ: 'ರಾಜ್‌ಕೋಟ್, ಜೈಪುರ್, ತಿರುವಾಂಕೂರ್ ಮತ್ತು ಇತರ ಕೆಲವು ಹಿಂದೂ ಸಂಸ್ಥಾನಗಳಲ್ಲಿ ಕಾಂಗ್ರೆಸ್ಸಿನ ನಾಗರಿಕ ಪ್ರತಿರೋಧ ಚಳುವಳಿ ಕುರಿತು ನನ್ನ ಅಭಿಪ್ರಾಯಗಳ ಬಗ್ಗೆ ಕೆಲವು ಪತ್ರಿಕೆಗಳು ತಪ್ಪು ವರದಿಗಳನ್ನು ನೀಡುತ್ತಿರುವ ಕಾರಣ ನಾನು ಹೀಗೆ ಹೇಳಿಕೆ ಕೊಡಬೇಕಾದ ಅನಿವಾರ್ಯತೆ ಬಂದಿದೆ. ನಾನು ಹಿಂದೂ ಮಹಾಸಭಾದ ಅಧ್ಯಕ್ಷನಾಗಿ ಹಿಂದೂ ಮಹಾಸಭಾವು ಹಿಂದೂ ಸಂಸ್ಥಾನಗಳಿಗೆ ಸಂಬಂಧಪಟ್ಟಂತೆ ಅಂಗೀಕರಿಸಿದ ನಿರ್ಣಯದ ಪರವಾಗಿ ನಿಲುವು ತಳೆಯಬೇಕಾದ ಪರಿಮಿತಿಗೆ ಒಳಪಟ್ಟಿದ್ದೇನೆ. ಹಿಂದೂ ಸಂಸ್ಥಾನಗಳ ಬಗ್ಗೆ ಹಿಂದೂ ಮಹಾಸಭಾದ ನೀತಿಯು ಉಪಕಾರ ಬುದ್ಧಿಯ ತಟಸ್ಥ ನಿಲುವಾಗಿದೆ. ಆದ್ದರಿಂದ ಹಿಂದೂ ರಾಜರುಗಳನ್ನು ಗುರಿಯಾಗಿಸಿ ಮತ್ತು ಅವರ ಅಸ್ತಿತ್ವಕ್ಕೇ ಅಥವಾ ಸಾಮರ್ಥ್ಯಕ್ಕೇ ಗಂಡಾಂತರ ಉಂಟುಮಾಡುವ ಮತ್ತು ಒಟ್ಟಾರೆಯಾಗಿ ಆ ಸಂಸ್ಥಾನಗಳಲ್ಲಿರುವ ಹಿಂದೂಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ಪರಿಣಾಮ

ಪುಟ 7 ಕ್ಕೆ

ಸಂಪಾದಕೀಯ

ಕಾರ್ಯಸೂಚಿ ಜಾರಿಯ ಕಸರತ್ತು

ಕರ್ನಾಟಕದಲ್ಲಿನ ಶಿಕ್ಷಣ ವ್ಯವಸ್ಥೆ, ಶೈಕ್ಷಣಿಕ ವಾತಾವರಣವನ್ನು ಬಿಜೆಪಿ ಆಡಳಿತವಿರುವ ಇತರೆ ರಾಜ್ಯಗಳಿಗಿಂತ ಎಷ್ಟು ಬೇಗ ಹಾಳುಗೆಡಹಬಹುದು ಎನ್ನುವ ಸ್ಪರ್ದೆಗೆ ಬಸವರಾಜ ಬೊಮ್ಮಾಯಿಯವರ ಸರ್ಕಾರ ಇಳಿದಂತಿದೆ. ಹಿಜಾಬ್ ವಿವಾದ, ಪಠ್ಯಕ್ರಮದಲ್ಲಿನ ವಿಕೃತತೆ, ಉನ್ನತ ಶಿಕ್ಷಣವನ್ನೂ ಒಳಗೊಂಡು ಮನಬಂದಂತೆ ಖಾಸಗೀಕರಣದ ಸುಲಿಗೆಗೆ ಮುಕ್ತಾವಕಾಶ ಕಲ್ಪಿಸಿರುವ ಸರಕಾರ ನೈತಿಕ ಮೌಲ್ಯವರ್ದನೆಯ ಹೆಸರಿನಲ್ಲಿ ಆಹಾರದಲ್ಲಿ ಮೇಲು ಕೀಳುಗಳ ವಿಭಜನೆ, ಜಾತಿ ತಾರತಮ್ಯ, ಅಂಧಶ್ರದ್ಧೆ ಮತ್ತು ಅವೈಜ್ಞಾನಿಕ ಆಚರಣೆಗಳನ್ನು ರೂಢಿಸಲು ಹೊರಟಿದೆ. ಧಾರ್ಮಿಕ ಪ್ರಮುಖರ ಮೂಲಕ ಆಯಾ ಜಾತಿಗಳ ಜನತೆಯನ್ನು ತನ್ನ ಅಜೆಂಡಕ್ಕೆ ಒಪ್ಪಿಸುವ ಕೆಲಸಕ್ಕೂ ಮುಂದಾಗಿದೆ. ಇತ್ತೀಚೆಗೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಕರೆದ ಮಠಾಧೀಶರ ದುಂಡು ಮೇಜಿನ ಸಭೆ ಶಿಕ್ಷಣದಲ್ಲಿನ ಮೌಲ್ಯವರ್ಧನೆಗಿಂತ ಮೌಲ್ಯ ಹರಣವೇ ಪ್ರಮುಖವಾಗಿರುವುದು ಎದ್ದು ಕಾಣುವ ಅಂಶ. ಇಂತಹ ಪೂರ್ವಭಾವಿ ಸಮಾಲೋಚನೆ ಮತ್ತು ಕಸರತ್ತುಗಳು ಮುಂದೆ ಶಿಕ್ಷಣ ಕ್ಷೇತ್ರವನ್ನು ಫಾಶಿಸ್ಟ್ ಮನೋಭಾವದ ಹಿಂದುತ್ವದ ಅಜೆಂಡಾವನ್ನು ಜಾರಿಗೊಳಿಸುವ ಮೂಲಕ ಮತ್ತಷ್ಟೂ ಹಾಳುಗೆಡಹುವ ಮುನ್ಸೂಚನೆಯಾಗಿದೆ. ಚುನಾವಣೆಗಳು ಹತ್ತಿರ ಇರುವಾಗ ಸರಕಾರ ಅತ್ಯಂತ ವಿವಾದಾತ್ಮಕವಾದ ಹಲವು ಕ್ರಮಗಳನ್ನು ತರಾತುರಿಯಿಂದ ಕೈಗೊಳ್ಳುತ್ತಿದೆ.

ಶಿಕ್ಷಣ ಮತ್ತು ಸಂವಿಧಾನ ತಜ್ಞರು, ಮನೋವಿಜ್ಞಾನಿಗಳಂತಹ ಪರಿಣಿತ ಅನುಭವಿಗಳ ಸಲಹೆ ಸೂಚನೆಗಳನ್ನು ಆಧರಿಸಿ ಶೈಕ್ಷಣಿಕ ಸುಧಾರಣೆಗಳನ್ನು ತರುವುದು ಸಮಂಜಸವಾದುದು. ಆದರೆ ಸರ್ವಸಂಗ ಪರಿತ್ಯಾಗಿಗಳೆಂದು ಬಿಂಬಿಸಿಕೊಂಡ, ಸಾಮಾಜಿಕ, ಸಾಂಸಾರಿಕತೆಗಳಿಂದ ದೂರವೇ ಉಳಿದ ಸನ್ಯಾಸಿಗಳಿಂದ ಸಲಹೆ ಪಡೆಯುವುದು ವಿಚಿತ್ರ. ಮೂಲತಃ ಮತ ಧರ್ಮಗಳ ಗ್ರಂಥಗಳಲ್ಲಿ ಮತ್ತು ಅದರ ವಿಚಾರದಲ್ಲಿ ಸಮಾಜಕ್ಕೆ ಅಗತ್ಯವಿರುವ ನೈತಿಕ ಮೌಲ್ಯಗಳನ್ನು ಹುಡುಕುವುದು ಮತ್ತು ಅದು ಅಲ್ಲಿದೆ ಎಂದು ಭಾವಿಸುವುದು ಸರಿಯಲ್ಲ. ಜಗತ್ತಿನ, ನಮ್ಮ ಸಮಾಜದ ಮತ್ತು ಪ್ರತಿಯೊಬ್ಬರ ಬದುಕಿನ ಎಲ್ಲಾ ಆಗುಹೋಗುಗಳು, ಸಮಸ್ಯೆಗಳಿಗೆ ಮತ ಧರ್ಮದಲ್ಲಿಯೇ ಉತ್ತರವಿದೆ ಎನ್ನುವ ಅತಿಧಾರ್ಮಿಕತೆಯ ಮೂಲಭೂತವಾದೀ ಚಿಂತನೆಯ ಪರಿಣಾಮ ಇದು. ಇಂತಹ ಸಂಘ ಪರಿವಾರದ ತಾತ್ವಿಕತೆಯನ್ನೇ ನಂಬಿ ಹೊರಟಿರುವ ಈ ಸರ್ಕಾರದ ಚಿಂತನೆ ಹಾಗೂ ಕ್ರಮಗಳು ಆಧುನಿಕತೆಗೆ ಎದುರಾಗಿ ಕಾಲಬಾಹೀರ ಸನಾತನೀಯತೆಯನ್ನು, ಚಾತುರ್ವರ್ಣ ವ್ಯವಸ್ಥೆಯ ಗುರುಕುಲ ಶಿಕ್ಷಣವನ್ನು ವಿಶೇಷ ರೀತಿಯಲ್ಲಿ ಮುನ್ನೆಲೆಗೆ ತರಲು ಸತತ ಪ್ರಯತ್ನಿಸುತ್ತದೆ. ಸರ್ಕಾರದ ಈ ಸೈದ್ಧಾಂತಿಕ ಚೌಕಟ್ಟು ಸಂವಿಧಾನಕ್ಕೆ ಮುಖಾಮುಖಿಯಾಗಿ, ಕಡು ವಿರೋಧವಾಗಿ ನಿಲ್ಲುತ್ತದೆ. ಆ ನೆಲೆಯಲ್ಲಿ ಬದಲಾವಣೆಗಳನ್ನು ತರಲು ಬಯಸುತ್ತಿರುವುದು ಸ್ಪಷ್ಟ. ಇಂದು ಅನೇಕ ಧಾರ್ಮಿಕ ಪ್ರಮುಖರು ಮಠಾಧೀಶರುಗಳು ಒಂದಿಲ್ಲೊಂದು ರೀತಿಯಲ್ಲಿ ನೈತಿಕ ಆಧಃಪತನದ ಮತ್ತು ಹಲವು ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿರುವ ಪ್ರಕರಣಗಳು ದೇಶದಾದ್ಯಂತ ಹೊರಬರುತ್ತಿರುವ ಸನ್ನಿವೇಶದಲ್ಲಿ ಎಂತಹ ನೈತಿಕತೆಯನ್ನು ನಿರೀಕ್ಷಿಸಬಹುದು ಎನ್ನುವ ಪ್ರಶ್ನೆ ಇದ್ದೇ ಇದೆ. ಅಂತಹ ಅವರ ಸದ್ಭಕ್ತರಾಗಿರುವ ಆಳುವ ರಾಜಕಾರಣಿಗಳು ಅನುಸರಿಸುತ್ತಿರುವ ಹಾದಿಯಾದರೂ ಯಾವುದು? ಮೂಲತಃ ನೀತಿ ನಿರೂಪಿಸುವ ಸರಕಾರವೇ ಭ್ರಷ್ಟತೆ, ಜಾತಿಯತೆ, ಮತೀಯವಾದದ ಅಮಾನವೀಯ ಮೌಲ್ಯಗಳ ಪ್ರತಿಪಾದಕರಾಗಿ ಇರುವಾಗ ಮಕ್ಕಳಿಗೆ ನೈತಿಕತೆಯ ಪಾಠವನ್ನು ಹೇಳುವ ನೈತಿಕತೆಯನ್ನೇ ಉಳಿಸಿಕೊಂಡಿದೆಯೇ? ಮೊದಲು ಅಲ್ಲಿ ಅಂತರ್ ವಿಮರ್ಶೆ ನಡೆಯಬೇಕು, ಶುದ್ಧೀಕರಣ ಆಗಬೇಕು.

ಆ ದುಂಡು ಮೇಜಿನ ಸಭೆಯಲ್ಲಿ ಬಂದಿರುವ ಸಲಹೆ ಸೂಚನೆಗಳು ಅತ್ಯಂತ ಪ್ರಶ್ನಾರ್ಹವಾಗಿವೆ. ಧಾರ್ಮಿಕ ಪಠ್ಯಗಳ ಅಳವಡಿಕೆ, ಸಾತ್ವಿಕ ಆಹಾರ ನೀಡುವಿಕೆ, ಪುನರ್ಜನ್ಮದ ಕುರಿತಾಗಿ ಬೋಧನೆ ಇತ್ಯಾದಿ ಸಲಹೆಗಳು ಏನನ್ನು ಪ್ರತಿಪಾದಿಸುತ್ತವೆ? ಸರಕಾರ ಈಗಾಗಲೇ ಚಾತುರ್ವರ್ಣ ವ್ಯವಸ್ಥೆಯನ್ನು ಪ್ರತಿಪಾದಿಸುವ, ವ್ಯವಸ್ಥೆಯನ್ನು ಪ್ರಶ್ನಿಸದೇ ಒಪ್ಪುವ ಭಗವದ್ಗೀತೆಯನ್ನು ಪಠ್ಯಕ್ರಮದಲ್ಲಿ ಕಡ್ಡಾಯಗೊಳಿಸುವುದು, ಅಪೌಷ್ಟಿಕತೆಯಿಂದ ಮಕ್ಕಳು ನರಳುತ್ತಿರುವಾಗ ನೀಡಲಾಗುವ ಮೊಟ್ಟೆಯನ್ನು ಕಸಿಯುವುದು ಮತ್ತು ಆಹಾರದ ಮೂಲಕ ಮೇಲು ಕೀಳಿನ ಭೇದಭಾವ ಹುಟ್ಟಿಸುವುದು ನಡೆದಿದೆ. ಸಾತ್ವಿಕ ಮತ್ತು ತಾಮಸ ಎಂದು ಆಹಾರವನ್ನೇ ವಿಂಗಡಿಸುವುದು ಅಸಂಬದ್ಧವಾಗಿದೆ. ಆಹಾರದಲ್ಲಿ ಸತ್ವಯುತತೆ ಒಂದನ್ನು ಬಿಟ್ಟರೆ ಇನ್ನೇನು ಇರುವುದಿಲ್ಲ. ಮಾಂಸಾಹಾರವನ್ನು ತಾಮಸ ಎಂದು ಕರೆಯುವುದರ ಮೂಲಕ ಮಾಂಸಾಹಾರಿಗಳನ್ನು ತುಚ್ಚೀಕರಿಸುವ ಪ್ರಯತ್ನವಿರುವುದು ನಿಚ್ಚಳ. ಮೌಲ್ಯಗಳು ಆಹಾರ ಜನ್ಯವಲ್ಲ. ಹಾಗಿದ್ದಲ್ಲಿ ಸಸ್ಯಹಾರಿಗಳಾಗಿದ್ದ ಹಿಟ್ಲರ್, ನಾಥುರಾಮ್ ಗೋಡ್ಸೆ ಯಂತಹವರಲ್ಲಿ ರೂಢಿಯಾಗಿದ್ದ ಮೌಲ್ಯಗಳಾವುವು? ಜನಾಂಗೀಯ ದ್ವೇಷ ಅಮಾನವೀಯತೆ ಯಂತಹ ಮಾನವ ವಿರೋಧಿ ಮೌಲ್ಯಗಳು ಮೈದಳದದ್ದು ಹೇಗೆ ಎನ್ನುವುದಕ್ಕೆ ಪರಿವಾರದಲ್ಲಿ ಉತ್ತರವಿದೆಯೇ?

ನೈತಿಕ ಮೌಲ್ಯಗಳು ಬರೀ ಭೋದನೆಯಿಂದ ಬರುವುದಿಲ್ಲ. ಸಾಮಾಜಿಕ ವ್ಯವಸ್ಥೆ ಮತ್ತು ಬದುಕುವ ಪರಿಸರ ಅಂತಹ ಮೌಲ್ಯಗಳನ್ನು ರೂಪಿಸುತ್ತದೆ, ಪ್ರಭಾವಿಸುತ್ತದೆ. ಸಮಾಜದ ಸ್ವಾಸ್ತ್ಯಕ್ಕೆ ಮತ್ತು ಪ್ರಗತಿಗೆ ಕಂಟಕವಾಗಿರುವ ಅನ್ಯಾಯ, ಅಸಮಾನತೆ, ಭ್ರಷ್ಟಾಚಾರ, ಮತಾಂಧತೆ, ಹಿಂಸಾಚಾರ, ಕೋಮುವಾದ, ಭಯೋತ್ಪಾದನೆ, ನೈತಿಕ ಅದಃಪತನದಂತಹ ಮೌಲ್ಯಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಶಿಕ್ಷಣ ತುಂಬಬೇಕು. ಇಂಥವುಗಳ ಹುಟ್ಟಿಗೆ ಕಾರಣವಾದ ವ್ಯವಸ್ಥೆಯನ್ನು ಪ್ರಶ್ನಿಸುವ ಮನೋಭಾವ ವೈಜ್ಞಾನಿಕ ಚಿಂತನೆಗಳು ಗಟ್ಟಿಗೊಳ್ಳಬೇಕು. ಸಾರ್ವತ್ರಿಕ ಶಿಕ್ಷಣ ರಂಗದಲ್ಲಿ ಸಂವಿಧಾನಬದ್ಧ ಮೌಲ್ಯಗಳು ಆಧಾರವಾಗಬೇಕಿದೆ ಹೊರತು ಸಂಘ ಪರಿವಾರದ ಅಜೆಂಡಗಳಲ್ಲ. ಅಂತಹ ಅಜೆಂಡಗಳನ್ನು ಶಿಕ್ಷಣ ರಂಗದಲ್ಲಿ ಜಾರಿಗೊಳಿಸುವ ಪ್ರಯತ್ನಗಳನ್ನು ಸರಕಾರ ಕೈಬಿಡಬೇಕು.

ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಮಾಡಿ ಶಿಕ್ಷಕರ ಕೊರತೆ ನೀಗಿಸಲು, ಮೂಲ ಸೌಕರ್ಯ ಕಲ್ಪಿಸಲು, ಶಿಕ್ಷಣದ ಖಾಸಗಿಕರಣ ಮತ್ತು ವ್ಯಾಪಾರಿಕರಣವನ್ನು ತಡೆದು ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಮೊದಲ ಆದ್ಯತೆಯಾಗಬೇಕು. ದ್ವೇಷ ಹುಟ್ಟಿಸುವ, ತಾರತಮ್ಯ ಹೆಚ್ಚಿಸುವ ಯಾವ ಪ್ರಯತ್ನಗಳು ನೈತಿಕತೆಯನ್ನು ತರುವುದಿಲ್ಲ.

ಜನಾರ್ಧನ ರೆಡ್ಡಿ ಅವರ ಹೊಸ ಪಕ್ಷ ಯಾಕಾಗಿ?

ಈ ವಾರ

ಎಸ್.ವೈ. ಗುರುಶಾಂತ್

ಗಣಿಗಳ್ಳತನದ ಆರೋಪದಲ್ಲಿ ಜೈಲು ಸೇರಿ ಹೊರ ಬಂದ ಮಾಜಿಸಚಿವ ಜನಾರ್ಧನರೆಡ್ಡಿ ಹೊಸ ರಾಜಕೀಯ ಪಕ್ಷವನ್ನು ಆರಂಭಿಸಿದ್ದಾರೆ. ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಎನ್ನುವುದು ಅದರ ಹೆಸರು. ರೆಡ್ಡಿಯವರೇ ಅಧ್ಯಕ್ಷರು. ಅದರ ಉದ್ಘಾಟನೆ ಬಳ್ಳಾರಿಯಲ್ಲಿಆದಾಗ ಅವರು ಅಲ್ಲಿರಲಿಲ್ಲ.ಕಾರಣ ಬಳ್ಳಾರಿಗೆ ಪ್ರವೇಶಿಸದಂತೆ ನ್ಯಾಯಾಲಯದ ನಿರ್ಭಂಧ. ಹೀಗಾಗಿ ಅವರ ಪತ್ನಿ ಅರುಣ ರವರು ಬಳ್ಳಾರಿ ದುರುಗಮ್ಮನಿಗೆ ಪೂಜೆ ಮಾಡಿ ವಿಧ್ಯುಕ್ತವಾಗಿ ಉದ್ಘಾಟಿಸಿದ್ದಾರೆ. ಗಣಿ ಹಗರಣ, ಆದಾಯ ಮೀರಿ ಅಕ್ರಮ ಆಸ್ತಿ ಹೊಂದಿರುವ ಗಂಭೀರ ಮೊಕದ್ದಮೆಗಳನ್ನು ಎದುರಿಸುತ್ತಿರುವ ರೆಡ್ಡಿಯವರು ಆರೋಪ ಮುಕ್ತರಾಗಿ ಹೊರ ಬರಬೇಕಾದರೆ ಇನ್ನೂ ಹಲವು ವರ್ಷಗಳೇ ಬೇಕಾಗಬಹುದು. 'ಕಾಣದ ಕೈ' ಗಳ ಕೃಪೆ ಇದ್ದರೆ ಜೀವಮಾನವೂ ಅದರಲ್ಲೇ ಕಳೆಯಬಹುದು! ಬ್ಯಾಂಕ್ ಗಳಿಗೆ ನಾಮ ಹಾಕಿದ ಸುಮಾರು 5000 ಕೋಟಿ ರೂ.ಗಳ (1992ರಲ್ಲಿ) ಶೇರು ಹಗರಣದ ಆರೋಪಿ ಹರ್ಷದ್ ಮೆಹ್ತಾನ ಪ್ರಾಣ ಪಕ್ಷಿ ಹಾರಿ ಹೋದರೂ ಮೊಕದ್ದಮೆ ಇತ್ಯರ್ಥ ಆಗಲಿಲ್ಲ. ಶಿಕ್ಷೆ ಅನುಭವಿಸಲಿಲ್ಲ! ಆದರೆ ಅವರ ಆಸ್ತಿ ಅನುಭವಿಸುವುದಕ್ಕೆ ಅಷ್ಟೇನೂ ಕಷ್ಟ ಇರಲಿಲ್ಲ. 1991 ರಲ್ಲಿ ಕಾಶ್ಮೀರಿ ಭಯೋತ್ಪಾದಕರ ಮೇಲಿನ ಧಾಳಿಯಲ್ಲಿ ಸ್ಪೋಟಕವಾಗಿ ಬಯಲಾದ ಜೈನ್ ಡೈರಿಯಲ್ಲಿನ ಹವಾಲಾ ಹಗರಣದ ಕೇಸ್ ಯಾವ ಆರೋಪಗಳು ಸಾಬೀತಾಗದೆ ಆರೋಪಿತ ರಾಜಕಾರಣಿಗಳು (ಎಲ್.ಕೆ.ಅದ್ವಾನಿ ಒಳಗೊಂಡಂತೆ) ಖುಲಾಸೆಯಾದರಲ್ಲವೇ? ಇಲ್ಲಿಯವರೆಗೂ ಕೇಸ್ ಗೆ ಹೊರತಾಗಿ ಉಳಿದಂತಹ ರೆಡ್ಡಿಯವರ ಪಾಲಿನ ಆಸ್ತಿ ಅನುಭವಿಸಲು ಅಂತಹ ಅಡ್ಡಿಯೇನೂ ಇಲ್ಲ. ಅವರೇ ಹೇಳಿಕೊಂಡಂತೆ ಮಗಳು ಭ್ರಾಹ್ಮಿಣಿಯ ಮದುವೆಗೆ ಸುಮಾರು 500 ಕೋಟಿ ರೂ.ಗಳು ಖರ್ಚಾಗಿರಬಹುದು! ನಂತರ ರಾಜಕಾರಣಕ್ಕೆ, ನ್ಯಾಯಾಲಯ, ನಿತ್ಯದ ವ್ಯವಹಾರಗಳ ನಿರ್ವಹಣೆಗೆ ಆದ ಖರ್ಚುಗಳು ಮತ್ತು ಅದು ಎಲ್ಲಿಂದ ಬಂದಿದೆ ಎನ್ನುವುದನ್ನು ಕೇಳುವವರು ಇಲ್ಲದಿರುವುದರಿಂದ ಅವರೇ ಹೇಳಬೇಕು. ಆದೇಶ ನೀಡಿ 7 ವರ್ಷಗಳೇ ಕಳೆದರೂ ಅವರ ಆಸ್ತಿಯನ್ನೇಕೆ ಮುಟ್ಟುಗೋಲು ಹಾಕಿಲ್ಲ ಎಂಬ ನ್ಯಾಯಾಲಯದ ಪ್ರಶ್ನೆಗೆ ರಾಜ್ಯ ಸರಕಾರ ಉತ್ತರಿಸುವ ಮೊದಲೇ ರೆಡ್ಡಿಯವರು ಹೇಳಿದ ಮಾತುಗಳು ಆಸಕ್ತಿಕರವಾಗಿವೆ. 'ತನ್ನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸಿ.ಬಿ.ಐ. ಅಥವಾ ಯಾರಿಂದಲೂ ಸಾಧ್ಯವಿಲ್ಲ. ಮೇಲಾಗಿ ಬಂಧನವಾದಾಗ ಇದ್ದ 1,200 ಕೋಟಿ ರೂ.ಗಳ ಆಸ್ತಿ ಈಗ 4000 ಕೋಟಿಗೂ ಮೀರಿ ಬೆಳೆದಿದೆ. ಚುನಾವಣೆಯ ಖರ್ಚುಗಳಿಗೆ ಹಣದ ತೊಂದರೆ ಇಲ್ಲ' ಎನ್ನುತ್ತಾರೆ ರೆಡ್ಡಿ ಅವರು. ಅವರಿಗೆ ಸಿ.ಬಿ.ಐ, ಈ.ಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯಾವ ಭಯವು ಇಲ್ಲ ಎಂದಾಯಿತು. ಈ ಅಭಯ ಸಿಕ್ಕಿರುವುದಾದರೂ ಹೇಗೆ, ಎಲ್ಲಿಂದ? ಈ ಪ್ರಶ್ನೆಗೆ ಬಹಳ ಕುತೂಹಲದಾಯಕ ಹುಡುಕಾಟದ ಅಗತ್ಯವೂ ಇಲ್ಲ.

ಜನಾರ್ಧನ ರೆಡ್ಡಿ ಅವರು ಕಲ್ಯಾಣ ರಾಜ್ಯ ಪಕ್ಷ ಸ್ಥಾಪಿಸುವವರೆಗೆ ಅಧಿಕೃತವಾಗಿ ಅಧಿಕಾರ ರೂಢ ಬಿಜೆಪಿಯಲ್ಲಿಯೇ ಇದ್ದವರು. ಪಕ್ಷ ಸ್ಥಾಪನೆಗೂ ಮುನ್ನ 'ಬಿಜೆಪಿ ಪಕ್ಷವನ್ನು ಕರ್ನಾಟಕ ರಾಜ್ಯದಲ್ಲಿ ಕಟ್ಟಿ ಬೆಳೆಸುವುದರಲ್ಲಿ, ಅಧಿಕಾರಕ್ಕೆ ತರುವುದರಲ್ಲಿ, ಅಧಿಕಾರದಲ್ಲಿದ್ದ ಸರ್ಕಾರವನ್ನು ಉಳಿಸಿಕೊಳ್ಳುವಲ್ಲಿ ತನ್ನದು ಬಹುದೊಡ್ಡ ಕೊಡುಗೆ ಇದೆ ಎನ್ನುವ ಮಾತುಗಳನ್ನು ಆಡುತ್ತಿದ್ದರು. ಚುನಾವಣೆ ಬರುತ್ತಿರುವಾಗ ಬಿಜೆಪಿ ಪಕ್ಷ ಮತ್ತು ಸರ್ಕಾರದ ಒಳಗೆ ತಮ್ಮದೊಂದು ಪ್ರಭಾವ ಮತ್ತು ಶಕ್ತಿ ಕೇಂದ್ರವನ್ನು ಸ್ಥಾಪಿಸುವ ಪ್ರಯತ್ನವನ್ನು ಆರಂಭಿಸಿದ್ದರು. ಹೀಗಿರುವಾಗಲೇ ಒಂದು ದಿನ ಇದ್ದಕ್ಕಿದ್ದಂತೆ ಹಾಗೆ ಜನಾರ್ದನ ರೆಡ್ಡಿಯವರು ಬಳ್ಳಾರಿ ಹೊರ ವಲಯದಿಂದ ಗಂಗಾವತಿಗೆ ಶಿಫ್ಟ್ ಆಗಿದ್ದು, ಮನೆ ಹುಡುಕಿ ಪ್ರವೇಶದ ಪೂಜೆ ಮಾಡಿದ್ದು, ಖಾವಿ ಉಟ್ಟು ಹನುಮಮಾಲೆ ಹಾಕಿ ಅಂಜನಾದ್ರಿ ಬೆಟ್ಟ ಏರಿದ್ದು ಮತ್ತು ಇಳಿದಿದ್ದು ಸ್ವಲ್ಪ ಆಶ್ಚರ್ಯ ಹುಟ್ಟಿಸಿತ್ತು. ಹಾಗಿದ್ದಾಗಲೂ ಬಿಜೆಪಿ ಅಭ್ಯರ್ಥಿಯಾಗಿ ಗಂಗಾವತಿಯಿಂದಲೇ ಸ್ಪರ್ಧಿಸುತ್ತಾರೆ ಎನ್ನುವ ಊಹೆ ಇತ್ತಾದರೂ ಹೊಸ ಪಕ್ಷವನ್ನು ಕಟ್ಟುವುದು ಮತ್ತು ಕಲ್ಯಾಣ ರಾಜ್ಯಕ್ಕಾಗಿ ಹೋರಾಡುವುದು ಅನಿರೀಕ್ಷಿತವಾಗಿತ್ತು. ಜನಾರ್ಧನ ರೆಡ್ಡಿ ಅವರ ಈ ದಿಢೀರ್ ನಡಿಗೆ ಹಿಂದಿನ ಉದ್ದೇಶವಾದರೂ ಏನು? ಮೇಲ್ ನೋಟದಲ್ಲಿ ಕಂಡಂತೆ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕದಲ್ಲಿ ಸ್ಪರ್ಧಿಸಿ ಒಂದಿಷ್ಟು ಗಣನೀಯ ಸ್ಥಾನಗಳನ್ನು ಗೆದ್ದು ರಾಜ್ಯದ ರಾಜಕಾರಣದಲ್ಲಿ ಚೌಕಾಶಿ ಶಕ್ತಿಯಾಗಿ ಹೊರಹೊಮ್ಮಬಹುದೇ ಅಥವಾ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗೆ ಡ್ಯಾಮೇಜ್ ಮಾಡುವಂತೆ ಬಿಜೆಪಿ ವಿರೋಧಿ ಜಾತ್ಯಾತೀತ ಮತಗಳ ವಿಭಜನೆಗೆ ಕಾರಣವಾಗಿ ಸೋಲುವ ಭೀತಿಯಲ್ಲಿರುವ ಬಿಜೆಪಿಯೇ ಅಲ್ಲಿ ಗೆದ್ದು ಬರುವಂತೆ ನೋಡಿಕೊಳ್ಳುವ ಚುನಾವಣಾ 'ಚಾಣಕ್ಯ'ನ ರಾಜಕೀಯ ತಂತ್ರದ ಭಾಗವೇ?

ಹೀಗೆ ಪ್ರಶ್ನೆಗಳು ಉದ್ಭವಿಸಲು ಕಾರಣಗಳು ಇಲ್ಲದಿಲ್ಲಾ. ಜನಾರ್ಧನ 'ರೆಡ್ಡಿ ಬಳಗ' ಇಂಥದೊಂದು ತೀರ್ಮಾನ ಕೈಗೊಳ್ಳುವ ಮೊದಲು ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಚರ್ಚಿಸಿ ಬಂದಿದ್ದರು ಎನ್ನುವುದು ಸರಳವಾದ ಸಂಗತಿ ಎನಿಸುವುದಿಲ್ಲ. ವಿವರಗಳು ಖಚಿತವಾಗಿ ತಿಳಿಯದಿದ್ದರೂ ಸಂಶಯ ಒಂದು ಮಾತ್ರ ಹಾಗೆ ಉಳಿದುಬಿಡುತ್ತದೆ. ಎರಡನೆಯದಾಗಿ ಇಷ್ಟೆಲ್ಲಾ ಭಾರಿ ಹಗರಣಗಳ ಜಾಲದಲ್ಲಿ ಕ್ಕಿಹಾಕಿಕೊಂಡಿರುವ ಜನಾರ್ದನ ರೆಡ್ಡಿ ಬಿಜೆಪಿಗೆ ಅದರಲ್ಲೂ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಹೊಸದೊಂದು ಪಕ್ಷವನ್ನ ಕಟ್ಟಿ ಶೆಡ್ಡು ಹೊಡೆದು ಸವಾಲು ಹಾಕಬಲ್ಲರು ಎನ್ನುವುದನ್ನು ಕೂಡ ಇಂದಿನ ಸ್ಥಿತಿಯಲ್ಲಿ ನಂಬುವುದು ಕಷ್ಟ. ಈ ಹೊಸ ಪಕ್ಷ ಹುಟ್ಟು ಹಾಕುವ ಮೊದಲು ಮತ್ತು ನಂತರದಲ್ಲಿ ಅವರು ತನ್ನತ್ತ ಸೆಳೆಯಲು ಯತ್ನಿಸುತ್ತಿರುವ ಮತದಾರರು ಯಾರು ಎಂದು ನೋಡಿದಾಗ ಅವರ ಉದ್ದೇಶ ಏನಿರಬಹುದು ಎನ್ನುವುದು ಒಂದಿಷ್ಟು ಊಹಿಸಲು ಸಾಧ್ಯವಿದೆ.



ಪಕ್ಷದ ಉದ್ಘಾಟನೆ ಮಾಡಿ ಧ್ವಜ ನಾವರಣಗೊಳಿಸಿದ ಜನಾರ್ಧನ ರೆಡ್ಡಿ ಅವರ ಪತ್ನಿ ಅರುಣ ರವರು ಕುರುಬರ ಸಮ್ಮುಖದಲ್ಲಿ ಮತ್ತು ಕಂಬಳಿ ಹೊದಿಸಿಕೊಂಡು ಆಶೀರ್ವಾದ ಪಡೆದು ಕೊಂಡರು. 'ಎದ್ದ ಕೂಡಲೇ ಕುರುಬರ ಮುಖ ನೋಡಬೇಕು. ವ್ಯಾಪಾರಕ್ಕೆ ಕುರುಬರ ಮೊದಲ ಬೋಣಿಗೆ ಆಗಬೇಕು. ಒಳಿತಾಗುತ್ತದೆ' ಪುಟ 15 ಕ್ಕೆ

ಸಾಹಿತ್ಯದಲ್ಲಿ ಮಹಿಳಾಧ್ವನಿ ಸಾರಾ ಅಬೂಬಕರ್



ಸರಳ ಸಜ್ಜನಿಕೆಯ ಹಿರಿಯ ಸಾಹಿತಿ ಸಾರಾ ಅಬೂಬಕರ್ ಜನವರಿ 10 ರಂದು ಮಂಗಳೂರಿನ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಚಂದ್ರಗಿರಿಯ ತೀರದಲ್ಲಿ, ಸಹನಾ, ವಜ್ರಗಳು ಮೊದಲಾದ ಕಾದಂಬರಿಗಳು, ಚಪ್ಪಲಿಗಳು ಮತ್ತಿತರ ಕಥಾ ಸಂಗ್ರಹಗಳು, ಮಲಯಾಳಂನಿಂದ ಅನುವಾದಿಸಿದ ಐದು ಕೃತಿಗಳು, ಪ್ರವಾಸ ಕಥನ, ಬಾನುಲಿ ನಾಟಕಗಳು ಹಾಗೂ ಸಮಾಜ ಚಿಂತನೆಯ ಪ್ರಬಂಧಗಳನ್ನೊಳಗೊಂಡ ಸಂಕಲನಗಳನ್ನೊಳಗೊಂಡಂತೆ ಸಾರಾ ಅಬೂಬಕರ್ ಅವರು ಬರೆದಿರುವ ಸಾಹಿತ್ಯ ಕೃತಿಗಳು ಅಪಾರ ಜನಮನ್ನಣೆ ಪಡೆದಿವೆ. ಅವರ ಕೃತಿಗಳಿಗೆ ಪುರಸ್ಕಾರಗಳು ದೊರೆತಿರುವಂತೆಯೇ, ಅವರೂ ಕೂಡಾ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ರಾಜ್ಯ ಸರ್ಕಾರದ ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಹಂಪಿ ವಿಶ್ವವಿದ್ಯಾನಿಲಯದ 'ನಾಡೋಜ' ಗೌರವವು ಅವರು ಪಡೆದ ಪ್ರತಿಷ್ಠಿತ ಪ್ರಶಸ್ತಿಗಳಾಗಿವೆ.

ಪ್ರಶಸ್ತಿಗಳ ದೀರ್ಘ ಪಟ್ಟಿ ಹೇಳಿದರೆ ಸಾರಾ ಅಬೂಬಕರ್ ಬಗ್ಗೆ ಏನೂ ಹೇಳಿದಂತಾಗುವುದಿಲ್ಲ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅವರ ಕೃತಿಗಳು ಹಾಗೂ ಅವರ ಬದುಕು ಯಾಕೆ ಮುಖ್ಯವಾಗಿದೆ ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಅವರು ಸಾಹಿತ್ಯಕ ಬರವಣಿಗೆಗೆ ತೊಡಗಿದ್ದೇ ತಮಗೆ 40 ವರ್ಷಗಳ ವಯಸ್ಸು ಕಳೆದ ಬಳಿಕ. ಮುಸ್ಲಿಂ ಸಮಾಜದಲ್ಲಿ ಹುಟ್ಟಿದ ಯಾವ ಮಹಿಳೆಯರೂ 1980ಕ್ಕೂ ಮುಂಚಿತವಾಗಿ ಕನ್ನಡ ಭಾಷೆಯಲ್ಲಿ ಬರೆದ ಗಂಭೀರ ಬರಹ ಕಾಣಬರುವುದಿಲ್ಲ. ಹಾಗೆ ನೋಡಿದರೆ ಮುಸ್ಲಿಂ ಪುರುಷ ಬರಹಗಾರರೂ ಬೆರಳೆಣಿಕೆಯ ಸಂಖ್ಯೆಯಲ್ಲಿಯಷ್ಟೇ ಬರೆದಿದ್ದರು. ಕಥೆಗಾರರಾಗಿ ಫಕೀರ್ ಮಹಮದ್ ಕಟ್ಪಾಡಿ, ಬೊಳುವಾರು ಮಹಮದ್ ಕುಂಞ ಪ್ರಸಿದ್ಧಿಗೆ ಬಂದಿದ್ದರು. ಅವರ ಕಥೆಗಳಲ್ಲಿ ಮುಸ್ಲಿಂ ಸಮಾಜದ ಒಳಗೆ ನಡೆಯುತ್ತಿರುವ ಕಷ್ಟ–ಸುಖಗಳ, ತಲ್ಲಣಗಳ ಹಾಗೂ ನೋವು ನಲಿವುಗಳ ಕಲಾತ್ಮಕ ವಿವರಗಳು ಲಭ್ಯವಾಗಿದ್ದವು. ಆದರೆ ಮುಸ್ಲಿಂ ಮಹಿಳೆಯರೇ ವಿಶೇಷವಾಗಿ ಅನುಭವಿಸುವ ಅನಕ್ಷರತೆ, ಬಡತನ, ಪುರುಷರಿಂದ ನಡೆಯುವ ದೌರ್ಜನ್ಯಗಳು, ಬಹುಪತ್ನಿತ್ವ, ತಲಾಖ್‌ನಿಂದ ಆಗಿರಬಹುದಾದ ನಿರ್ಗತಿಕತೆ–ಇವೆಲ್ಲವೂ ವಿವರಗಳಲ್ಲಿ ದಾಖಲಾಗಲು ಆರಂಭವಾದುದು ಸಾರಾ ಅಬೂಬಕರ್ ಅವರು ಕಥೆ, ಕಾದಂಬರಿಗಳನ್ನು ಬರೆಯಲು ಆರಂಭಿಸಿದ ಮೇಲೆಯೇ.

ಅವರ ಮೊದಲ ಕಾದಂಬರಿ 'ಚಂದ್ರಗಿರಿಯ ತೀರದಲ್ಲಿ' 1981ರಲ್ಲಿ 'ಲಂಕೇಶ್ ಪತ್ರಿಕೆ'ಯಲ್ಲಿ ಧಾರಾವಾಹಿಯಾಗಿ ಪ್ರಕಟವಾದಾಗ, ಕನ್ನಡ ಸಾಹಿತ್ಯ ಜಗತ್ತಿನಲ್ಲೂ ಕರ್ನಾಟಕದ ಮುಸ್ಲಿಂ ಸಾಮಾಜಿಕ ಜಗತ್ತಿನಲ್ಲೂ ಒಂದು ಬಗೆಯ ಕಂಪನವನ್ನು ಉಂಟು ಮಾಡಿತು. 1984ರಲ್ಲಿ ಅದು ಪುಸ್ತಕವಾಗಿ ಅಚ್ಚಾಯಿತು. 1985ರಲ್ಲಿ 'ಸಹನಾ' ಮತ್ತು 1988ರಲ್ಲಿ 'ವಜ್ರಗಳು' ಪ್ರಕಟವಾದುವು. ಮುಸ್ಲಿಂ ಸಮಾಜದಲ್ಲಿ ರೂಢಿಯಲ್ಲಿರುವ ಕೆಲವು ನಡೆವಳಿಕೆಗಳು ಮಹಿಳಾ ವಿರೋಧಿಯಾಗಿದ್ದು, ಮಹಿಳೆಯರನ್ನು ತೀವ್ರವಾಗಿ ಶೋಷಿಸುತ್ತಿವೆ ಎಂದು ನಿರೂಪಿಸುವ ಕಥನಗಳು ಅವರ ಹೆಚ್ಚಿನ ಕಥೆ, ಕಾದಂಬರಿಗಳಲ್ಲಿವೆ. ತಲಾಖ್ ನೀಡಲ್ಪಟ್ಟ ಹೆಣ್ಣು ಮತ್ತೆ ಮೊದಲಿನ ಪತಿಯನ್ನೇ ಮದುವೆಯಾಗಲು ಇಬ್ಬರೂ ಸಿದ್ಧರಿರುವ ಸಂದರ್ಭದಲ್ಲಿ, ಹೆಣ್ಣಿಗೆ ಬೇರೊಬ್ಬನೊಡನೆ ಒಂದು ದಿನದ ಮದುವೆಯ ಔಚಿತ್ಯವೇನು ಎಂದು 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಪ್ರಶ್ನಿಸುತ್ತದೆ. ಬಹುಪತ್ನಿತ್ವದಿಂದ ಮಹಿಳೆ ಅನುಭವಿಸುವ ನೋವಿನ ಕುರಿತು 'ಸಹನಾ' ಕಾದಂಬರಿ ದಾಖಲಿಸುತ್ತದೆ. ಶಾಬಾನು ಕೇಸಿನಲ್ಲಿ ತಲಾಖ್ ಪೀಡಿತ ಮಹಿಳೆಗೆ ಜೀವನಾಂಶ ನೀಡಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದಾಗ, ವಿಚ್ಛೇದಿತ ಮಹಿಳೆಯರಿಗೆ ಜೀವನಾಂಶ ನೀಡಬೇಕಿಲ್ಲವೆಂದು ದೇಶಾದ್ಯಂತ ಮುಸ್ಲಿಂ ಪುರುಷರು ವಾದಿಸಿದ್ದರು. ಇದೊಂದು ಪೊಳ್ಳುವಾದವೆಂದು 'ವಜ್ರಗಳು' ಕೃತಿ ಕಾಣಿಸಿದೆ. ಧರ್ಮದ ಹೆಸರಿನಲ್ಲಿ ನಡೆಯುವ ಅಧರ್ಮವನ್ನು, ಮಹಿಳೆಯರ ಶೋಷಣೆಯನ್ನು ಎತ್ತಿ ತೋರಿಸಲಿಕ್ಕಾಗಿ ತಾನು ಸಾಹಿತ್ಯಕೃತಿ ರಚಿಸಿದೆ ಎಂದು ಸಾರಾ ಅವರೇ ಬರೆದು ಕೊಂಡಿದ್ದಾರೆ.

ಸಾಮಾನ್ಯ ಗೃಹಿಣಿಯಾಗಿದ್ದುಕೊಂಡೇ, ಮುಸ್ಲಿಂ ಮಹಿಳೆಯರ ದೀನ ಪರಿಸ್ಥಿತಿಯ ಬಗ್ಗೆ ವಿಮರ್ಶಾತ್ಮಕವಾಗಿ ಬರೆಯತೊಡಗಿದ ಬಳಿಕ, ಮೂಲಭೂತವಾದಿ ಪುರುಷರಿಂದ ಸಾರಾ ಅವರು ಸಾಕಷ್ಟು ಪ್ರತಿರೋಧವನ್ನು ಎದುರಿಸಬೇಕಾಯಿತು. ಕುರಾನ್ ವಿಶ್ವಾಸಿಯಾಗಿರುವ ತಾನು, ಅಲ್ಲಿ ನೀಡಲಾದ ಮಹಿಳಾ ಅವಕಾಶಗಳನ್ನು ವಂಚಿಸುವುದು ಧರ್ಮವಿರೋಧಿಯಾದುದೆಂದು ಭಾವಿಸುವುದಾಗಿ ಅವರು ಹೇಳುತ್ತಿದ್ದರು. ರೂಢಿಯಲ್ಲಿರುವ ಆಚರಣೆಗಳಲ್ಲಿ ಅನೇಕವು ಕುರಾನ್ ಮಾರ್ಗದರ್ಶನದಂತೆ ಇರುವುದಿಲ್ಲ ಎಂದೇ ಅವರು ಅಂಥವನ್ನು ತಮ್ಮ ಕಥೆ ಕಾದಂಬರಿಗಳಲ್ಲಿ ಪರಿಶೀಲನೆಗೆ ಒಡ್ಡಿದರು. ಅವರು ಅತ್ಯಂತ ಮಾನವಪ್ರೀತಿಯವರಾಗಿದ್ದರು. ಆದರೆ ಮೂಲಭೂತವಾದಿಗಳು ತಮ್ಮ ಪತ್ರಿಕೆಯಲ್ಲಿ ಅವರನ್ನು ಮಾನಹಾನಿಯಾಗುವಂತೆ ಟೀಕಿಸುತ್ತಿದ್ದರು. 1985ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಪುತ್ತೂರಿನಲ್ಲಿ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಜಿಲ್ಲೆಯ ವಿವಿಧ ಜನಾಂಗಗಳ ಸ್ಥಿತಿಗತಿ ಬಗ್ಗೆ ವಿಚಾರ ಮಂಡನೆ ನಡೆಯುವುದಿತ್ತು. ಅಲ್ಲಿ ಸಾರಾ ಅವರು ಮಾತನಾಡಲು ಎದ್ದು ನಿಂತೊಡನೆ, ಸಭಿಕನೊಬ್ಬ 'ಬುರ್ಕಾ ಧರಿಸದೆ ನಿಮಗೆ ಮುಸ್ಲಿಂ ಮಹಿಳೆಯರ ಬಗ್ಗೆ ಮಾತನಾಡುವ ಹಕ್ಕಿಲ್ಲ' ಎಂದು ಗಲಭೆ ಎಬ್ಬಿಸಿದ. ಸಭೆಯೊಂದರಲ್ಲಿ ಅವರು ಆ ಮೊದಲು ಭಾಷಣ ಮಾಡಿದವರೇ ಅಲ್ಲ. ಆದರೂ ಉತ್ತರಿಸಲು ಅವರು ಸಿದ್ಧರಾಗಿದ್ದರು. ಅಲ್ಲಿ ಸಭೆಯಲ್ಲಿ ಕುರ್ಚಿ ತೂರಾಟ ಇತ್ಯಾದಿಯನ್ನು ಕೆಲವರು ಗಲಭೆಕೋರರು ಶುರುಮಾಡಿದ್ದರಿಂದ, ಸಾರಾ ಅವರನ್ನು ಜಾಗ್ರತೆಯಾಗಿ ಮಂಗಳೂರಿಗೆ ಮನೆಗೆ ಕಳುಹಿಸಿಕೊಡಬೇಕಾಯಿತು. ಅಂದಿನ ದಿನಪತ್ರಿಕೆಗಳಲ್ಲಿ ಕೆಲವು ದಿನ ಮಹಿಳೆಯರ ಸ್ಥಾನಮಾನದ ಬಗ್ಗೆ ಸಂವಾದಗಳು ಹರಿದಾಡಿದವು.

ಒಂದು ಮೂಲಭೂತವಾದಿ ಸಂಘಟನೆಯೂ, ಅವರು ಪ್ರಕಟಿಸುವ ಪತ್ರಿಕೆಯೂ ಸಾರಾ ಅವರು ಬರವಣಿಗೆಯನ್ನು ನಿಲ್ಲಿಸುವಂತೆ ಒತ್ತಡ ಹಾಕುತ್ತಿತ್ತು. ಜಾತಿಯಿಂದ ಅವರನ್ನು ಬಹಿಷ್ಕರಿಸಬೇಕೆಂದು ಸಂಘವೊಂದು ಸುತ್ತೋಲೆಯೊಂದನ್ನು ಪ್ರಕಟಿಸಿ ಹಂಚಿತು. ಈ ಬಹಿಷ್ಕಾರ ಹಾಗೂ ಅವರ ಮಾನಹಾನಿಕರವಾದ ಲೇಖನಗಳಿಗಾಗಿ ಸಂಘದ ವಿರುದ್ಧ ಸಾರಾ ಅವರು ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದರು. ನಾಲ್ಕು ವರ್ಷಗಳ ಬಳಿಕ ನ್ಯಾಯಾಲಯ ಸಾರಾ ಅವರ ಪರವಾಗಿ ತೀರ್ಪು ನೀಡಿತು. ಅವರು ಮೊಕದ್ದಮೆ ಹೂಡಿದ್ದು ಗೊತ್ತಾದಂದಿನಿಂದ, ಪತ್ರಿಕೆಯಲ್ಲಿ ಅವರ ವಿರುದ್ಧವಾದ ಬರವಣಿಗೆ ನಿಂತು ಹೋಯಿತು.

ಇಷ್ಟೆಲ್ಲ ಆದರೂ ಸಂತ್ರಸ್ತ ಮಹಿಳೆಯರು ತಮ್ಮ ಕಷ್ಟಗಳನ್ನು ಹೇಳಿಕೊಂಡು ಸಾರಾ ಅಬೂಬಕರ್ ಅವರ ಬಳಿಯೇ ಬರುತ್ತಿದ್ದರು. ಅವರಿಂದ ನೇರವಾಗಿ ತಿಳಿದ ಸಂಗತಿಗಳಿಂದಲೇ ಅವರ ಕಥೆಗಳು ರೂಪಿತವಾಗುತ್ತಿದ್ದುದರಿಂದ, ಅವರ ಕಥೆಗಳು ವಾಸ್ತವವಾಗಿ ಗೋಚರಿಸುತ್ತವೆ. 1990ರ ದಶಕದಲ್ಲಿ ದೇಶದಲ್ಲಿ ಮುಸ್ಲಿಂ ವಿರೋಧಿಯಾಗಿ ಹಿಂದುತ್ವವಾದಿಗಳ ದಾಳಿಗಳು ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಅವರ ಬರವಣಿಗೆ ಬೇರೊಂದು ಮಗ್ಗುಲಿಗೆ ತಿರುಗಿಕೊಂಡಿದೆ. ಕೇವಲ ಮಹಿಳೆಯರು ಮಾತ್ರವಲ್ಲ, ಇಡೀ ಮುಸ್ಲಿಂ ಸಮಾಜವೇ ಬಹುಸಂಖ್ಯಾತ ಕೋಮುವಾದಿಗಳ ದಾಳಿಗೆ ತುತ್ತಾಗಿದ್ದಾರೆ. ಮುಸ್ಲಿಂ ಸಮಾಜ ಸಂತ್ರಸ್ತವಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಅವರು ಗಮನಾರ್ಹವಾದ 2 ಪುಸ್ತಕಗಳನ್ನು ಅನುವಾದಿಸಿದ್ದಾರೆ. ಒಂದು ಗುಜರಾತಿನ ಗೋದ್ರಾನಂತರ ನಡೆದ ಕ್ರೂರ ಹಿಂಸೆಯ ಕುರಿತು ಪೊಲೀಸಧಿಕಾರಿ ಆರ್.ಬಿ.ಶ್ರೀಕುಮಾರ್ ಅವರು ಬರೆದಿರುವ 'ಧರ್ಮದ ಹೆಸರಿನಲ್ಲಿ' ಎಂಬ ಪುಸ್ತಕ. ಇನ್ನೊಂದು ರಾಜನ್ ಹತ್ಯೆ ಪ್ರಕರಣವೆಂದು ಖ್ಯಾತವಾಗಿರುವ ಕೇರಳದ ಪ್ರಕರಣದಲ್ಲಿ ಆತನ ತಂದೆ ಈಚರ್ ವಾರಿಯರ್ ಬರೆದ 'ತುರ್ತು ಪರಿಸ್ಥಿತಿಯ ಕರಾಳ ಮುಖ' ಎಂಬುದು.

ಕಾಸರಗೋಡು ಸಾರಾ ಅವರು ಹುಟ್ಟಿ ಬೆಳೆದ ಊರು. ಹೈಸ್ಕೂಲು ಮುಗಿಸಲಷ್ಟೇ ಅಂದು ಮುಸ್ಲಿಂ ಹೆಣ್ಣು ಮಗಳಿಗೆ ಇದ್ದ ಅವಕಾಶ. ವಕೀಲರಾಗಿದ್ದ ತಂದೆಯಿಂದಾಗಿ ಅವರಿಗೆ ಅಲ್ಲಿವರೆಗೆ ಓದಲು ಸಾಧ್ಯವಾಯಿತು. 'ಮುಸ್ಲಿಂ ಹುಡುಗಿ ಶಾಲೆಗೆ ಹೋದದ್ದು' ಎಂಬ ಅವರ ಬರಹ ಕೂಡಾ ಲಂಕೇಶ್ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಸಾರಾ ಅಬೂಬಕರ್ ಅವರ ಆರಂಭದ ಹಲವಾರು ಕೃತಿಗಳನ್ನು ಪಿ.ಲಂಕೇಶ್ ಅವರೇ ಪ್ರಕಟಿಸಿದರು. ಬಳಿಕದ ವರ್ಷಗಳಲ್ಲಿ 'ಚಂದ್ರಗಿರಿ ಪ್ರಕಾಶನ' ಹೆಸರಲ್ಲಿ ಸಾರಾ ಅವರೇ ತಮ್ಮ ಕೃತಿಗಳನ್ನು ಪ್ರಕಟಿಸುತ್ತಿದ್ದರು. ಮಧ್ಯ ವಯಸ್ಸಿನಿಂದ ಬರವಣಿಗೆ ತೊಡಗಿದ ಅವರು ಪ್ರಕಾಶಕರಾಗಿ ತೋರಿದ ಧೈರ್ಯವೂ ಮೆಚ್ಚತಕ್ಕದ್ದೇ.

ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರಕಬೇಕೆಂಬುದು ಸಾರಾ ಅವರ ಆಗ್ರಹವಾಗಿತ್ತು. ಧರ್ಮದ ಹೆಸರಲ್ಲಿ ನಡೆಯುತ್ತಿರುವ ಮುಸ್ಲಿಂ ಮಹಿಳೆಯರ ಶೋಷಣೆ ಕೊನೆಗೊಳ್ಳಬೇಕು ಮತ್ತು ಬಾಲ್ಯದಲ್ಲಿ ತನ್ನ ಪರಿಸರದಲ್ಲಿ ನೋಡಿದಂಥ ಕೋಮುಸೌಹಾರ್ದ ಮತ್ತೆ ನೆಲೆಗೊಳ್ಳಬೇಕೆಂಬುದು ಅವರ ಕಾಳಜಿಯಾಗಿತ್ತು. ಅದನ್ನು ಅವರ ಬರಹಗಳಲ್ಲಿ ಕಾಣಿಸಿದ್ದಲ್ಲದೆ, ಬಹಿರಂಗ ಚಟುವಟಿಕೆಗಳಲ್ಲೂ ವ್ಯಕ್ತಪಡಿಸಿದರು. ಕೋಮುವಾದದ ವಿರುದ್ಧ ಹೋರಾಟಗಳಲ್ಲಿ ಭಾಗವಹಿಸಲು ಅವರಿಗೆ ಕರೆ ಬಂದಲ್ಲೆಲ್ಲ ಭಾಗವಹಿಸಿ ಮಾತನಾಡಿದರು. ಕುಟುಂಬದೊಳಗಿನ ದೌರ್ಜನ್ಯಗಳಲ್ಲೂ, ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಮೇಲೆ ನಡೆಸುವ ದೌರ್ಜನ್ಯಗಳಲ್ಲೂ ಬಳಲುವವರು ಮಹಿಳೆಯರೇ ಎಂಬುದು ಅವರ ಕೃತಿಗಳಲ್ಲಿ ನಿರೂಪಿತವಾಗುತ್ತದೆ.

ತಮ್ಮ ಸಾಹಿತ್ಯ ಕೃತಿಗಳು ಕೃತಿಚೌರ್ಯಕ್ಕೊಳಗಾದಾಗ, ಸಾರಾ ಅವರು ಅವನ್ನು ಕಾನೂನಾತ್ಮಕವಾಗಿಯೂ ಎದುರಿಸಿದ್ದಾರೆ. ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ಕೊನೆಯ ಭಾಗದಲ್ಲಿ ಕಥಾಂತ್ಯವನ್ನು ಬದಲಾಯಿಸಿ ಒಬ್ಬರು ಮಲಯಾಳ ಭಾಷೆಗೆ ಅನುವಾದಿಸಿದ್ದನ್ನು ಅವರು ಗಮನಿಸಿ, ತಾನು ಬಲ್ಲ ಬೇರೊಬ್ಬ ಲೇಖಕರಿಂದ ಸಮರ್ಪಕವಾಗಿ ಅನುವಾದವಾಗುವಂತೆ ನೋಡಿದರು. ಅದೇ ಕೃತಿಯನ್ನು ಬ್ಯಾರಿ ಭಾಷೆಯಲ್ಲಿ 'ಬ್ಯಾರಿ' ಎಂಬ ಶೀರ್ಷಿಕೆ ಕೊಟ್ಟು, ತನ್ನ ಅನುಮತಿ ಪಡೆಯದೇ ಸಿನಿಮಾವಾಗಿ ರೂಪಾಂತರಿಸಿ, ರಾಷ್ಟ್ರೀಯ ಮಟ್ಟದ ಪ್ರಶಸ್ತಿಯೊಂದನ್ನು ನಿರ್ದೇಶಕರೊಬ್ಬರು ಪಡೆದಿದ್ದರು. ಇದನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಸಾರಾ ಅವರು ವ್ಯಾಜ್ಯ ದಾಖಲಿಸಿ, ಪರಿಹಾರವನ್ನೂ ಪಡೆದರು. ಅವರು ಸತ್ಯ ನಿಷ್ಠರಾದ ದಿಟ್ಟ ಮಹಿಳೆ ಎಂಬುದನ್ನು ಹಲವು ಸಂದರ್ಭಗಳಲ್ಲಿ ಸಾಧಿಸಿ ತೋರಿಸಿದ್ದಾರೆ.

ಸಾರಾ ಅಬೂಬಕರ್ ಅವರ ಹಲವಾರು ಕೃತಿಗಳು ಮಲಯಾಳಂ ಭಾಷೆಗೆ ಅನುವಾದಿತವಾಗಿದೆ. 'ಚಂದ್ರಗಿರಿಯ ತೀರದಲ್ಲಿ' ಇಂಗ್ಲಿಷ್, ತಮಿಳು ಹಾಗೂ ಇತರ ಭಾಷೆಗಳಿಗೂ ಅನುವಾದಿತವಾಗಿದೆ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ 'ಜಮೀಲಾ' ಶೀರ್ಷಿಕೆಯೊಂದಿಗೆ ತಮಿಳು ಭಾಷೆಯಲ್ಲೂ, 'ಬ್ಯಾರಿ' ಶೀರ್ಷಿಕೆಯೊಂದಿಗೆ ಬ್ಯಾರಿ ಭಾಷೆಯಲ್ಲೂ ಸಿನಿಮಾಗಳಾಗಿ, ಪ್ರಶಸ್ತಿಗಳನ್ನೂ ಪಡೆದುಕೊಂಡಿವೆ. ಅವರು ಆರ್ಥಿಕವಾಗಿ ನೆರವು ಕೊಡಿಸಿದ, ಅಲ್ಲದೆ ಕೌಟುಂಬಿಕ ಮಾರ್ಗದರ್ಶನ ನೀಡಿದ ಮಹಿಳೆಯರ ಸಂಖ್ಯೆಗೆ ಲೆಕ್ಕವಿಲ್ಲ. ನೇರ ಮಾತುಗಳು ಅವರ ಬರವಣಿಗೆಯಂತೆಯೇ ಅವರ ನಡೆನುಡಿಯಲ್ಲೂ ಇದ್ದಿತ್ತು. ನಮ್ಮ ಕಾಲದ ಪ್ರಗತಿಪರ ಚಳುವಳಿಗೆ ಅವರೊಂದು ಸ್ಫೂರ್ತಿಯಾಗಿದ್ದರು.

–ವಾಸುದೇವ ಉಚ್ಚಿಲ

ಎಡ ಚಳವಳಿಗಾರರಿಂದ ಮಾನಸಿಕ ಸ್ಥೈರ್ಯ:

ಎಡ ಸಂಘಟನೆಯಲ್ಲಿ ಯುವ ಕಾರ್ಮಿಕರ ಮತ್ತು ಯುವ ಕಾರ್ಯಕರ್ತರ ದೊಡ್ಡ ವಿಭಾಗ ಚಟುವಟಿಕೆಯಲ್ಲಿತ್ತು. ಈ ಕಾಲಾವಧಿಯಲ್ಲಿ ಗಂಡನ ಪೂರ್ಣ ಸಹಕಾರದೊಂದಿಗೆ ತನ್ನ ಮನದಾಳದಲ್ಲಿ ಹುದುಗಿದ್ದ ಅಸಂಪ್ರದಾಯವೆಂದುಕೊಂಡಿದ್ದ ವಿಚಾರಗಳನ್ನು ಬರಹ ರೂಪದಲ್ಲಿ ಬಹಿರಂಗವಾಗಿಸಲು ಪ್ರಯತ್ನಿಸಿದ್ದ ಸಾರಾ ಅಬೂಬಕ್ಕರ್ ಅವರಿಗೆ ಬೆಂಬಲವಾಗಿ ನಿಂತವರು ಪಿ. ಲಂಕೇಶ್. ಅದೇ ಸಂದರ್ಭಗಳಲ್ಲಿ ಸಾರಾ ಅವರಿಗೆ ಮಾನಸಿಕ ಸ್ಥೈರ್ಯ ತುಂಬಿದವರು ಈ ಜಿಲ್ಲೆಯ ಎಡ ಚಳವಳಿಯ ಕಾರ್ಯರ್ತರು. ಓರ್ವ ಮಹಿಳಾ ಬರಹಗಾರಳೆಂಬ ಕಾರಣಕ್ಕೊ ಎಂಬಂತೆ ಸಿಪಿಎಂ ನಾಯಕರಾಗಿದ್ದ ಪಿ. ರಾಮಚಂದ್ರ ರಾವ್ ರವರೂ ಪ್ರೋತ್ಸಾಹಿಸಿದ್ದರು.

ವಿದ್ಯಾರ್ಥಿ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ ಸುನೀಲ್ ನಟೇಕರ್, ಶ್ರೀನಿವಾಸ್, ಉಮೇಶ್, ಕೃಷ್ಣಪ್ಪ ಕೊಂಚಾಡಿ, ರಾಜಕುಮಾರ್ ಇನ್ನೂ ಹಲವರು ಹಾಗೂ ಆಗ ತಾನೇ ಯುವಜನ ಸಂಘಟನೆ ಕಟ್ಟಿಕೊಂಡಿದ್ದ ಶಿವಾನಂದಕೋಡಿ, ಸದಾಶಿವ ಶೆಟ್ಟಿ, ಆರ್. ಜಯಕುಮಾರ್, ನಾಗೇಶ್, ಚಿತ್ತರಂಜನ್ ಭುಜಂಗ ಮಾರ್ಲ, ಸುಕುಮಾರ್, ರಮೇಶ್ ಉಳ್ಳಾಲ್, ಯು.ಬಿ. ನಾರಾಯಣ, ಹುಸೇನ್ ಪಾವೂರು ಇನ್ನೂ ಅನೇಕರು ರಾತ್ರಿಯನ್ನು ಹಗಲನ್ನಾಗಿಸಿ ಸಕ್ರಿಯವಾಗಿ ದುಡಿಯುತ್ತಿದ್ದವರು. ಅಂದು ಜನಪರ ಹೋರಾಟಗಳಿಂದಾಗಿ ಜಿಲ್ಲೆಯು ವ್ಯಾಪಕವಾದ ಪ್ರಚಾರ ಪ್ರಕ್ಷೋಭೆಗೊಳಗೊಂಡಿತ್ತು.

ಸಾರಾ ಅಬೂಬಕ್ಕರ್‌ಗೆ ಅಂತಿಮ ಗೌರವ ಸಲ್ಲಿಸದೆ ಅಸಹಿಷ್ಣುತೆ ತೋರಲಾಗಿದೆ: ಸರಕಾರ, ಜಿಲ್ಲಾಡಳಿತ, ಜನಪ್ರತಿನಿಧಿಗಳ ನಡೆಗೆ ಗಣ್ಯರ ಖಂಡನೆ

ಕನ್ನಡದ ಪ್ರಖ್ಯಾತ ಬರಹಗಾರ್ತಿ ಸಾರಾ ಅಬೂಬಕ್ಕರ್ ಅವರು ನಿಧನ ಹೊಂದಿದ ಸಂದರ್ಭ ಸರಿಯಾದ ಗೌರವ ಸಲ್ಲಿಸದೆ ರಾಜ್ಯ ಸರಕಾರ ಹಾಗೂ ಜಿಲ್ಲಾಡಳಿತ ಕಡೆಗಣಿಸಿರುವುದು ಖೇದಕರ ಎಂದಿರುವ ಹಲವು ಗಣ್ಯರು ಸರಕಾರದ ಈ ನಡೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಇಂತಹ ಗಣ್ಯ ಬರಹಗಾರ್ತಿ, ಲೇಖಕಿ ಅಗಲಿದ ಸಂದರ್ಭ ಸಹಜವಾಗಿಯೇ ಅವರಿಗೆ ಸರಕಾರಿ ಗೌರವಗಳು ಸಲ್ಲಬೇಕಿತ್ತು. ಆದರೆ ಸರಕಾರದ ಯಾವುದೇ ಅಂತಿಮ ಗೌರವಗಳು ಅವರಿಗೆ ಸಲ್ಲಲಿಲ್ಲ. ಸರಕಾರದ, ಜಿಲ್ಲಾಡಳಿತ ಪ್ರತಿನಿಧಿಗಳು ಅಧಿಕೃತ ಗೌರವ ಸಲ್ಲಿಸಲಿಲ್ಲ. ಉಸ್ತುವಾರಿ ಸಚಿವರು, ಶಾಸಕರುಗಳು ನಗರದಲ್ಲೇ ಇದ್ದರೂ ಸಾರಾ ಅಬೂಬಕ್ಕರ್ ಅವರ ಅಂತಿಮ ದರ್ಶನ ಪಡೆಯಲಿಲ್ಲ. ಇದು ನಮಗೆಲ್ಲಾ ಅಪಾರ ನೋವು ತಂದಿದೆ. ಈ ಕಡೆಗಣನೆ ಆಕಸ್ಮಿಕ ಆಗಿರಲಾರದು ಎಂಬುದು ನಮ್ಮ ಅಂದಾಜು. ಇದು ಸರಕಾರ ಪ್ರಗತಿಪರ ವಿಚಾರಗಳು, ಸಾಹಿತಿ, ಬುದ್ಧಿಜೀವಿಗಳ ಕುರಿತು ಇತ್ತೀಚೆಗೆ ಹೊಂದಿರುವ ಅಸಹಿಷ್ಣುತೆ ಧೋರಣೆಗಳು, ಕೋಮುವಾದಿ ದೃಷ್ಟಿಕೋನದ ಭಾಗವಾದ ನಿಲುವೇ ಆಗಿದೆ ಎಂಬಂತೆ ತೋರುತ್ತದೆ. ಸರಕಾರ, ಜಿಲ್ಲಾಡಳಿತ, ಜನಪ್ರತಿನಿಧಿಗಳ ಈ ಧೋರಣೆ ಆಘಾತಕಾರಿಯಾಗಿದ್ದು, ಕನ್ನಡ ನಾಡಿನ ವಿಶಾಲ ಉದಾರ ಪ್ರಜ್ಞೆಗೆ ವಿರುದ್ಧವಾಗಿದೆ ಎಂದು ಜಂಟಿ ಹೇಳಿಕೆಯ ಮೂಲಕ ಬಲವಾಗಿ ಖಂಡಿಸಿದ್ದಾರೆ.



ಮೋದಿಮಯವಾದ ಯುವಜನೋತ್ಸವ

ನಿತ್ಯಾನಂದಸ್ವಾಮಿ

ಸ್ವಾಮಿ ವಿವೇಕಾನಂದರ 160ನೇ ಜನ್ಮದಿನದ ಅಂಗವಾಗಿ ಹುಬ್ಬಳ್ಳಿ–ಧಾರವಾಡದಲ್ಲಿ ಆಯೋಜಿಸಿದ್ದ 26ನೇ ರಾಷ್ಟ್ರೀಯ ಯುವಜನೋತ್ಸವ ಅದ್ದೂರಿಯಾಗಿ ನಡೆಯಿತು. ಆದರೆ ಇಲ್ಲಿ ನಡೆದ ಸಡಗರ ಸಂಭ್ರಮ ನೀಡಿದ ಸಂದೇಶ ಬೇರೆಯೇ ಆಗಿತ್ತು. ಪ್ರಧಾನಿ ನರೇಂದ್ರ ಮೋದಿಯವರು ಈ ಸಂಭ್ರಮದಲ್ಲಿ ಭಾಗವಹಿಸುವ ಮೂಲಕ ಇಡೀ ಸಮಾರಂಭ ಮೋದಿಮಯವಾಯಿತು.

2021ರಲ್ಲಿ ಮಂಗಳೂರಿನಲ್ಲಿ ಯುವಜನೋತ್ಸವವನ್ನು ಆಯೋಜಿಸಲಾಗಿತ್ತು. ಈಗ 2023ರಲ್ಲಿ ರಾಜ್ಯವು ಎರಡನೇ ಬಾರಿಗೆ ಯುವಜನರಲ್ಲಿ ಧರ್ಮದ್ವೇಷದ ಬೀಜ ಬಿತ್ತುವ ಕೆಲಸ ವ್ಯವಸ್ಥಿತವಾಗಿ ನಡೆಸಲಾಗಿದೆ. ಕೇಂದ್ರ ಕ್ರೀಡೆ ಹಾಗೂ ಯುವಜನ ಮಂತ್ರಾಲಯ ಮತ್ತು ರಾಜ್ಯ ಸರ್ಕಾರದ ಕ್ರೀಡಾ ಇಲಾಖೆ ಸೇರಿ ಒಟ್ಟು ರೂ. 20 ಕೋಟಿಗಳನ್ನು ಈ ಉತ್ಸವಕ್ಕೆ ನೀಡಿವೆ. ಸ್ಥಳೀಯವಾಗಿಯೂ ಕೋಟಿಗಟ್ಟಲೆ ರೂಪಾಯಿಗಳ ದೇಣಿಗೆ ಸಂಗ್ರಹವಾಗಿದೆ.

ಉತ್ಸವದಲ್ಲಿ ಮೋದಿಯವರೇ ಕೇಂದ್ರಬಿಂದು. ವಿವೇಕಾನಂದರ ಹೆಸರು ನೆಪಮಾತ್ರಕ್ಕೆ ಮಾತ್ರ. ಅವರ ರಾಜಕೀಯ ಮುಖಂಡರ ಪ್ಲೆಕ್ಸ್‌ಗಳು ಮಾತ್ರ ರಾರಾಜಿಸುತ್ತಿದ್ದವು. ಪ್ರತಿ ಕಾಲೇಜಿನಿಂದ ತಲಾ ನೂರು ವಿದ್ಯಾರ್ಥಿಗಳನ್ನು ಕಳುಹಿಸುವುದು ಕಡ್ಡಾಯಗೊಳಿಸಲಾಗಿತ್ತು. ಪ್ರಧಾನಿ ಮೋದಿಯವರು ದೆಹಲಿಯಿಂದ ವಿಶೇಶ ವಿಮಾನದಲ್ಲಿ ಆಗಮಿಸಿ ಅಲ್ಲಿಂದ 8 ಕಿ.ಮೀ. ದೂರದಲ್ಲಿರುವ ರೈಲ್ವೆ ಮೈದಾನದ ವರೆಗೂ ರೋಡ್ ಷೋನಲ್ಲಿ ಪಾಲ್ಗೊಂಡರು. ರಸ್ತೆಯ ಎರಡೂ ಬದಿಯಲ್ಲಿ ನಿಂತಿದ್ದ ತನ್ನ ಅಭಿಮಾನಿಗಳತ್ತ ಕೈಬೀಸುತ್ತಾ ಬಂದ ಮೋದಿ ಅವರು ವೇದಿಕೆಗೆ ತಲುಪುವಾಗ ನಿಗದಿತ ಸಮಯಕ್ಕಿಂತ ಒಂದು ಗಂಟೆ ವಿಳಂಬವಾಗಿತ್ತು.

ರಸ್ತೆಯ ಇಕ್ಕೆಲೆಗಳಲ್ಲಿ ಸಾಲುಗಟ್ಟಿ ನಿಂತ ಅಭಿಮಾನಿಗಳು "ಹರ ಹರ ಮೋದಿ, ಜಯ ಜಯ ಮೋದಿ" ಎಂದು ಜೈಕಾರ ಹಾಕುತ್ತಿದ್ದರೇ ಹೊರತು, ಸ್ವಾಮಿ ವಿವೇಕಾನಂದರಿಗೆ ಯಾರೂ ಜೈಕಾರ ಹಾಕುತ್ತಿರಲಿಲ್ಲ. ವೇದಿಕೆ ಮೇಲೆ ಇದ್ದ ಬ್ಯಾಕ್ ಡ್ರಾಪ್ ಗಳಲ್ಲಿ ವಿವೇಕಾನಂದರ ಚಿತ್ರವೇ ಇರಲಿಲ್ಲ. ಹಿನ್ನಲೆ ಪರದೆಗಳ ಮೇಲೆಲ್ಲಾ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರ ಚಿತ್ರಗಳೇ ರಾರಾಜಿಸುತ್ತಿದ್ದವು. ಅಪ್ಪಿತಪ್ಪಿಯೂ ಸ್ವಾಮಿ ವಿವೇಕಾನಂದರ ಚಿತ್ರ ವೇದಿಕೆಯ ಮೇಲೆ ಇರದಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಗಿತ್ತು.

ಕಣ್ಣು ಹಾಯಿಸಿದೆಡೆಯೆಲ್ಲ ಬಿಜೆಪಿ ಧ್ವಜಗಳು ಹಾರಾಡುತ್ತಿದ್ದವು. ದೀಪದ ಸ್ಥಂಭಗಳಿಗೆ ಕೇಸರಿ ವಸ್ತ್ರವನ್ನು ಕಟ್ಟಿದ್ದರು. ಯುವಕರೆಲ್ಲರೂ ಕೇಸರಿ ಬಣ್ಣದ ಸ್ಕಾರ್ಫ್ ಗಳನ್ನು ಸುತ್ತಿಕೊಂಡಿದ್ದರು. ಎಲ್ಲೆಡೆಯೂ ಕೇಸರಿಮಯ ವಾತಾವರಣ ಸೃಷ್ಟಿಯಾಗಿತ್ತು. ಹುಬ್ಬಳ್ಳಿಯು ಕೇಸರಿ ಬಣ್ಣದಲ್ಲಿ ಮಿಂದೆದ್ದಂತೆ ಭಾಸವಾಗುತ್ತಿತ್ತು. ಇದೆಲ್ಲವನ್ನು ಕಂಡ ಅಮಾಯಕರಲ್ಲಿ ಭಯ ಭೀತಿ ಆವರಿಸಿಕೊಳ್ಳುವಂತಾಗಿತ್ತು.

ಹುಬ್ಬಳ್ಳಿಯಲ್ಲಿ ನಡೆದ ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವ ಅವರ ಸ್ಮರಣೆಯೇ ಇಲ್ಲದೆ ನಡೆದು ಹೋದದ್ದು ಒಂದು ದೊಡ್ಡ ವಿಪರ್ಯಾಸ. ಹಿಂದುತ್ವವಾದಿಗಳಿಂದ ಮಹಾನ್ ಹಿಂದು ಸಂತನಿಗೆ ಮಾಡಿದ ಬಹಿರಂಗ ಅವಮಾನ. ವಿವೇಕಾನಂದರ ಹಿಂದೂ ಧರ್ಮ ದ್ವೇಷ ಬಿತ್ತುವ ಧರ್ಮ ಆಗಿರಲಿಲ್ಲ. ವಿಶ್ವದ ಮೂಲೆ ಮೂಲೆಗಳಿಂದ ಹರಿದುಬರುವ ಸತ್ಯವನ್ನು ಅವರು ಅಪ್ಪಿಕೊಳ್ಳಲು ಹಿಂಜರಿದಿರಲಿಲ್ಲ. ಅಮೆರಿಕಾದಲ್ಲಿ ಅವರು ಮಾಡಿದ ಭಾಷಣ ಅವರನ್ನು ವಿಶ್ವ ಮಾನವನಾಗಿ ಗುರುತಿಸಿ ಗೌರವಿಸಲು ಕಾರಣವಾಯಿತು. ಆದರೆ ಪ್ರಧಾನಿ ಮೋದಿಯವರು ಹುಬ್ಬಳ್ಳಿಯಲ್ಲಿ ದೇಶದ ಯುವಜನರನ್ನು ಉದ್ದೇಶಿಸಿ ಮಾಡಿದ ಭಾಷಣ ಕೇವಲ ರಾಜಕೀಯ ಭಾಷಣವಾಗಿತ್ತೇ ಹೊರತು ದೇಶದ ಯುವಜನರಿಗೆ ಯಾವ ಸ್ಪೂರ್ತಿಯನ್ನೂ ನೀಡಲಿಲ್ಲ.

> **ಹುಬ್ಬಳ್ಳಿಯಲ್ಲಿ ನಡೆದ ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವ ಅವರ ಸ್ಮರಣೆಯೇ ಇಲ್ಲದೆ ನಡೆದು ಹೋದದ್ದು ಒಂದು ದೊಡ್ಡ ವಿಪರ್ಯಾಸ.**



ಈ ಸಲ ಹುಬ್ಬಳ್ಳಿಯಲ್ಲಿ ಆಯೋಜಿಸಲಾದ ಯುವಜನೋತ್ಸವವು ಮೋದಿಯವರು ಭಾಗವಹಿಸಿದ ಮೊದಲ ಯುವಜನೋತ್ಸವ ಆಗಿತ್ತು. ಅಲ್ಲಿ ಸೇರಿದ್ದ ಯುವಜನರು ಭಿನ್ನವಾದ ಮಾತುಗಳನ್ನು ನಿರೀಕ್ಷಿಸಿದ್ದರು. ದೇಶದ ಯುವಜನರು ದಿಕ್ಕುತೋಚದವರಾಗುತ್ತಿದ್ದಾರೆ. ಭೀಕರ ನಿರುದ್ಯೋಗ, ಸರ್ಕಾರಿ ನೇಮಕಾತಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ, ಶಿಕ್ಷಣ ಕ್ಷೇತ್ರದ ನಿರ್ಲಕ್ಷ ಮತ್ತು ಕೋಮುಗಲಭೆಗಳಿಗೆ ಬಲಿಯಾಗುತ್ತಿರುವ ಅಮಾಯಕ ಯುವಜನರಲ್ಲಿ ಯಾವ ಉತ್ಸಾಹವನ್ನೂ ಮೂಡಿಸಲಿಲ್ಲ.

ಕರ್ನಾಟಕದಲ್ಲಿ ಈಗ 25 ಲಕ್ಷಕ್ಕೂ ಹೆಚ್ಚು ನಿರುದ್ಯೋಗಿಗಳಿದ್ದಾರೆ. ಸರ್ಕಾರಿ ಇಲಾಖೆಗಳಲ್ಲಿ ಸುಮಾರು ಮೂರು ಲಕ್ಷ ಹುದ್ದೆಗಳು ಖಾಲಿ ಬಿದ್ದಿವೆ. ಶಾಲಾ ಕಾಲೇಜುಗಳಲ್ಲಿ 55 ಸಾವಿರ ಭೋಧಕ ಹಾಗೂ ಭೋಧಕೇತರ ಸ್ಥಾನಗಳು ಭರ್ತಿಯಾಗಿಲ್ಲ. ಸಾವಿರಾರು ಸಣ್ಣ ಕೈಗಾರಿಕೆಗಳು ಮುಚ್ಚಿದ್ದು, ಸುಮಾರು ಒಂದು ಲಕ್ಷ ಪುರುಷರು ಮತ್ತು ಮಹಿಳೆಯರು ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಕೋಮುಗಲಭೆಗಳಿಗೆ ಸರ್ಕಾರದ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಕುಮ್ಮಕ್ಕಿನಿಂದಾಗಿ ಅಮಾಯಕ ಯುವಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಲ್ಪಸಂಖ್ಯಾರಿಂದ ಬಹುಸಂಖ್ಯಾತ ಹಿಂದುಗಳಿಗೆ ಅಪಾಯವಿದೆ ಎಂದು ಹುಯಿಲೆಬ್ಬಿಸಿ ಮುಸ್ಲಿಂ ಯುವಕರನ್ನು ಕೊಚ್ಚಿ ಕೊಲ್ಲುತ್ತಾರೆ. ಇದರಿಂದಾಗಿ ಮುಸ್ಲಿಂ ಯುವಕರು ಸೇಡಿಗಾಗಿ ಪರಿತಪಿಸುತ್ತಾರೆ. ಎರಡೂ ಕಡೆ ಸಾವು ನೋವುಗಳಿಗೆ ತುತ್ತಾಗುತ್ತಾರೆ. ದುಡಿಮೆಯಿಂದ ಮನೆಗೆ ಆದಾಯ ತರುವ ಯುವಕರು ಹೆಣವಾಗುತ್ತಾರೆ. ಅಮಾಯಕ ಯುವತಿಯರು ವಿಧವೆಯಾಗುತ್ತಾರೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಈ ಕೋಮು ದಳ್ಳುರಿಗೆ ಕೊನೆ ಇಲ್ಲವೇ? ಮೋದಿಯವರಿಗೆ ಮತ್ತು ಅವರ ಅಭಿಮಾನಿಗಳಿಗೆ ಇದು ಅರ್ಥವಾಗುವುದಿಲ್ಲವೇ? ಮೋದಿಯವರ ಪ್ರತಿಯೊಂದು ಭಾಷಣ, ಪ್ರತಿಯೊಂದು ಸಾರ್ವಜನಿಕ ಸಭೆ ದ್ವೇಷದ ಬೀಜ ಬಿತ್ತುತ್ತದೆ. ಹೀಗೆ ಬಿತ್ತಿ ಬೆಳೆದ ಫಲವನ್ನು ಚುನಾವಣೆಗಳಲ್ಲಿ ಮತಗಳಾಗಿ ಪಡೆಯಲು ತಂತ್ರವಾಗಿಸುವುದು ಎಷ್ಟು ಬರ್ಬರವಾಗಿದೆ. ಹೇಗೆ ಮಂಗಳೂರನ್ನು ಕೋಮುವಾದಿ ಪ್ರಯೋಗ ಶಾಲೆ ನಿರ್ಮಾಣ ಮಾಡಲಾದಂತೆ, ಹುಬ್ಬಳ್ಳಿ–ದಾರವಾಡ ಪ್ರದೇಶದ ಶಾಂತಿಪ್ರಿಯ ಜನರ ನಡುವೆ ಮಾಡುವ ಗುರಿ ಹೊಂದಿರುವುದು ಅತ್ಯಂತ ಆತಂಕದ ಬೆಳವಣಿಗೆಯಾಗಿದೆ.

ಜನಾರ್ಧನರೆಡ್ಡಿ ಅಕ್ರಮ ಆಸ್ತಿ ಮುಟ್ಟುಗೋಲು ವಿಳಂಬ–ಸಿಪಿಐ(ಎಂ) ಖಂಡನೆ

ಜನಾರ್ಧನ ರೆಡ್ಡಿಯವರು ಅಕ್ರಮ ಗಣಿಕಾರಿಕೆಯ ಮೂಲಕ ಸಂಗ್ರಹಿಸಲಾದ ಅಕ್ರಮ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯ ಸರಕಾರದ ಶಾಮೀಲು ನೀತಿಯನ್ನು ಬಲವಾಗಿ ಖಂಡಿಸಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ), ಇನ್ನಷ್ಟು ವಿಳಂಬ ಮಾಡದೇ ತಕ್ಷಣ ರೆಡ್ಡಿಯವರ ಅಕ್ರಮ ಆಸ್ತಿಗಳ ಮುಟ್ಟುಗೋಲಿಗೆ ಕ್ರಮ ವಹಿಸುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಉನ್ನತ ನ್ಯಾಯಾಲಯದ ಸುಪರ್ಧಿಯಲ್ಲಿ ತನಿಖೆ ನಡೆಸಿದ ಸಿ.ಬಿ.ಐ., ಜನಾರ್ಧನ ರೆಡ್ಡಿಯವರ ಅಕ್ರಮ ಆಸ್ತಿ ಮುಟ್ಟುಗೋಲಿಗೆ ಕ್ರಮ ವಹಿಸುವಂತೆ ನಿರಂತರವಾಗಿ ಒತ್ತಾಯಿಸುತ್ತಿದ್ದರೂ ರಾಜ್ಯ ಸರಕಾರ ಆ ಕುರಿತು ಕ್ರಮವಹಿಸದಿರುವುದು, ಲೂಟಿಕೋರರ ಹಾಗೂ ಭ್ರಷ್ಠತೆಯ ಜೊತೆಗಿನ ರಾಜ್ಯ ಸರಕಾರದ ನಂಟನ್ನು ಇದು ಸ್ಪಷ್ಟ ಪಡಿಸುತ್ತದೆ ಎಂದು ಪಕ್ಷವು ಆರೋಪಿಸಿದೆ.

ಕೊನೆಗೂ, ಕೇಂದ್ರ ಸರಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಸಿಬಿಐ ಸಂಸ್ಥೆಯು, ಸರಕಾರದ ವಿಳಂಬ ನೀತಿಯನ್ನು ಖಂಡಿಸಿ ಉಚ್ಛ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ. ನ್ಯಾಯಾಲಯವು ಸರ್ಕಾರದ ವಿಳಂಬ ನೀತಿಯನ್ನು ಖಾರವಾಗಿ ಪ್ರಶ್ನಿಸಿದೆ. ಇಷ್ಟಾದರೂ ಸರಕಾರಕ್ಕೆ ನಾಚಿಕೆ ಇಲ್ಲವಾಗಿದೆ ಎಂದು ಸಿಪಿಐ(ಎಂ) ಕಟುವಾಗಿ ವಿಮರ್ಶಿಸಿದೆ.

ಬಿಜೆಪಿ ಹಾಗೂ ಆರ್.ಎಸ್.ಎಸ್. ನಾಯಕತ್ವ ಈ ರೀತಿಯ ದುರುದ್ದೇಶ ಪೂರಿತ ವಿಳಂಬ ಧೋರಣೆಯ ಮೂಲಕ, ಬಿಜೆಪಿ ಪಕ್ಷದ ಒಡಕನ್ನು ತಡೆಯುವ ಶಾಮೀಲು ಧೋರಣೆಯನ್ನು ಅನುಸರಿಸಿರುವುದು ಮೇಲ್ನೋಟಕ್ಕೆ ಸ್ಪಷ್ಠವಾಗಿ ಕಂಡು ಬರುತ್ತದೆ. ಈ ಕಾರಣಗಳಿಂದಲೇ, ರಾಜ್ಯ ಸರಕಾರ, ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು, ಈ ಸರಕಾರಿ ಸಂಸ್ಥೆಯ ಕೆಲಸದ ಮೇಲೆ ತಮ್ಮ ಅಧಿಕಾರದ ಪ್ರಭಾವ ಬೀರಿ ಅದು ಕಾರ್ಯ ನಿರ್ವಹಿಸದಂತೆ ಇದುವರೆಗೆ ತಡೆ ಹಿಡಿದಿರುವುದು ಈ ಮೂಲಕ ಮತ್ತೊಮ್ಮೆ ಬಹಿರಂಗ ಗೊಂಡಿದೆ.

ಇದೀಗ, ಜನಾರ್ಧನ ರೆಡ್ಡಿಯವರು ಬಿಜೆಪಿಯಿಂದ ಹೊರ ನಡೆದು ಸ್ವತಂತ್ರವಾಗಿ ಪ್ರತ್ಯೇಕ ಪಕ್ಷ ರಚಿಸಿದ ನಂತರ, ಬಿಜೆಪಿಗೆ ಉಂಟಾದ ಹಿನ್ನಡೆ ಹಾಗೂ ಉಂಟಾಗಬಹುದಾದ ಸೋಲಿನ ಭೀತಿಯಿಂದ ಅವರನ್ನು ಮಣಿಸಲು ಮತ್ತು ಬಿಜೆಪಿ ಜೊತೆ ಕೈ ಜೋಡಿಸುವಂತೆ ಪುನಃ ಜನಾರ್ಧನರೆಡ್ಡಿಯವರ ಮೇಲೆ ಒತ್ತಡ ಹೇರಲು, ಸಿಬಿಐ ಮೂಲಕ ಈ ಕ್ರಮ ವಹಿಸಲಾಗಿದೆ ಎಂಬ ರಾಜಕೀಯ ವಲಯದ ಭಾವನೆಗೆ ಇಂಬು ನೀಡಿದೆ.

ಸರಕಾರಿ ಸಂಸ್ಥೆಗಳ ಮೇಲೆ ತಮ್ಮ ಅಧಿಕಾರ ಬಲದ ಪ್ರಭಾವ ಭೀರಿ ಅದರ ಸ್ವತಂತ್ರ ಕಾರ್ಯಾಚರಣೆಗೆ ಭಂಗ ಉಂಟು ಮಾಡುವ ಬಿಜೆಪಿ ಹಾಗೂ ಆರ್.ಎಸ್.ಎಸ್. ಅಧಿಕಾರ ದುರುಪಯೋಗವನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ), ಅವುಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡ ಬೇಕೆಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸಿದೆ.

ರೆಡ್ಡಿಯವರ ಅಕ್ರಮ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ವಿಫಲರಾದ ಕಾನೂನು ಬಾಹಿರ ರಾಜಕೀಯ ಒತ್ತಡಕ್ಕೆ ಮಣಿದ ಅಧಿಕಾರಿಗಳ ಮೇಲೆ ಸೂಕ್ತ ಕಾನೂನಿನ ಕ್ರಮವಹಿಸುವಂತೆಯೂ ರಾಜ್ಯ ಸರಕಾರವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಮಂಗಳೂರಿನಲ್ಲಿ ಜೂಜು ಕೇಂದ್ರಗಳಿಗೆ ಡಿವೈಎಫ್ಐ ಮುತ್ತಿಗೆ:

ಮಂಗಳೂರು ನಗರದಲ್ಲಿ ಕಾರ್ಯಾಚರಿಸುತ್ತಿರುವ ಜುಗಾರಿ ಅಡ್ಡೆ, ವೀಡಿಯೋ ಗೇಮ್, ಸ್ಕಿಲ್ ಗೇಮ್‌ಗಳನ್ನು ಶಾಶ್ವತವಾಗಿ ಮುಚ್ಚಿಸಬೇಕೆಂದು ಡಿವೈಎಫ್ಐ ಕಾರ್ಯಕರ್ತರು ಜನವರಿ 11 ರಂದು ಜೂಜು ಕೇಂದ್ರಗಳಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯವಕ್ತಪಡಿಸಿದರು.

ನಗರದ ಪೊಲೀಸ್ ಕಮಿಶನರೇಟ್ ವ್ಯಾಪ್ತಿಯೊಳಗೆ ಸ್ಕಿಲ್‌ಗೇಮ್, ವೀಡಿಯೋ ಗೇಮ್, ಜುಗಾರಿ ಅಡ್ಡೆಗಳು ರಾಜಾರೋಷವಾಗಿ ಕಾರ್ಯಾಚರಿಸುತ್ತಿವೆ. ರಿಕ್ರೆಯೇಷನ್ ಕ್ಲಬ್ ಹೆಸರಿನಲ್ಲಿ ಜೂಜು ಕೇಂದ್ರಗಳು, ದುಡಿಯುವ ಜನ ಕಷ್ಟಪಟ್ಟು ಗಳಿಸಿದ ಹಣವನ್ನು ದೋಚುವ ಕಾರ್ಯದಲ್ಲಿ ತೊಡಗಿದೆ ಎಂದು ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಆರೋಪಿಸಿದರು. ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದಾಗ ತೋರಿಕೆಗೆ ಹಲವಾರು ದಿನ ಬಂದ್ ಮಾಡುವ ನಾಟಕ ನಡೆಯುತ್ತಿದ್ದು, ಮತ್ತೆ ಯಥಾಸ್ಥಿತಿಗೆ ಮರಳುತ್ತಿದ್ದು ಸ್ಥಳೀಯ ಠಾಣೆಗಳ ಪೊಲೀಸರು ದೃಢ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟೀಕಿಸಿದರು.

ಈ ಸಂದರ್ಭ ಡಿವೈಎಫ್ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಮತೋಷ್ ಬಜಾಲ್, ಕೋಶಾಧಿಕಾರಿ ಮನೋಜ್ ವಾಮಂಜೂರು, ಮುಖಂಡರಾದ ನವೀನ್ ಕೊಂಚಾಡಿ ಉಪಸ್ಥಿತರಿದ್ದರು.

ಡಿಸೆಂಬರ್ 31, 2022 ರಂದು ನ್ಯಾಷನಲ್ ಫಿಲ್ಮ್ ಡೆವಲಪ್ಮೆಂಟ್ ಕಾರ್ಪೋರೇಷನ್(ಎನ್‌ಎಫ್ಡಿಸಿ) ಜೊತೆ ನಾಲ್ಕು ಫಿಲ್ಮ್ ಸಂಸ್ಥೆಗಳಾದ ಫಿಲ್ಮ್ಸ್ ಡಿವಿಶನ್(ಎಫ್.ಡಿ), ನ್ಯಾಷನಲ್ ಫಿಲ್ಮ್ ಆರ್ಕೈವ್ಸ್ ಆಫ್ ಇಂಡಿಯಾ(ಎನ್.ಎಫ್.ಎ.ಐ), ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ ಆಫ್ ಇಂಡಿಯಾ(ಸಿ.ಎಫ್.ಎಸ್.ಐ) ಮತ್ತು ಡೈರೆಕ್ಟೋರೇಟ್ ಆಫ್ ಫಿಲ್ಮ್ ಫೆಸ್ಟಿವಲ್ಸ್(ಡಿ.ಎಫ್.ಎಫ್) ಜೊತೆ ವಿಲೀನಗೊಂಡವು. ಕೇಂದ್ರ ಸರ್ಕಾರದ ಈ ಕ್ರಮದ ಹಿಂದಿನ ಉದ್ದೇಶಗಳೇನು, ಇದಕ್ಕೆ ಚಲನಚಿತ್ರರಂಗದ ಭಾಗವಾಗಿರುವವರ ಪ್ರತಿಕ್ರಿಯೆಗಳೇನು? ಈ ನಾಲ್ಕು ಸಂಸ್ಥೆಗಳ ಉಗಮ, ಕಾರ್ಯಭಾರ ಇತ್ಯಾದಿ ವಿಷಯಗಳ ಬಗೆಗೆ ಈ ಬರಹದಲ್ಲಿ ಚರ್ಚಿಸಲಾಗಿದೆ.

ಎನ್.ಎಫ್.ಡಿ.ಸಿ ಜೊತೆ ನಾಲ್ಕು ಫಿಲಂ ಸಂಸ್ಥೆಗಳ ವಿಲೀನ ಏಕೆ ?

ಮ.ಶ್ರೀ. ಮುರಳಿ ಕೃಷ್ಣ

ಕಲೆ, ಸಾಹಿತ್ಯ, ರಂಗಭೂಮಿ ಮುಂತಾದ ಸಾಂಸ್ಕೃತಿಕ ಘಟಕಗಳು ಯಾವಾಗ ಉದಯಿಸಿದವು ಎಂದು ನಿಖರವಾಗಿ ಗುರುತಿಸಲು ಸಾಧ್ಯವಿಲ್ಲ. ಇವುಗಳಿಗೆ ಹೋಲಿಸಿದಾಗ ಸಿನಿಮಾ ಎಂದು ಜನ್ಮ ತಳೆಯಿತು ಎಂಬುದಕ್ಕೆ ಕರಾರುವಾಕ್ಕಾದ ದಾಖಲೆಗಳು ದೊರೆಯುತ್ತವೆ. ಸಿನಿಮಾ ಅಸ್ತಿತ್ವಕ್ಕೆ ಬಂದು ಸುಮಾರು ಒಂದು ನೂರ ಇಪ್ಪತ್ತೇಳು ವರ್ಷಗಳಾಗಿವೆ. ಮೊದಲಿನಿಂದಲೂ ತಂತ್ರಜ್ಞಾನದ ಜೊತೆ ತಳಕು ಹಾಕಿಕೊಂಡಿರುವ ಈ ಮಾಧ್ಯಮ ಬಹಳ ಶಕ್ತಿಶಾಲಿಯಾಗಿದೆ. ಆಯಾ ಪ್ರದೇಶಗಳ, ಆಯಾ ಕಾಲಘಟ್ಟಗಳ ಆಗು-ಹೋಗುಗಳ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಆಯಾಮಗಳನ್ನು ಸಿನಿಮಾ ಮಾಧ್ಯಮ ಕಟ್ಟಿಕೊಡುವ ಬಗೆ ವಿಸ್ಮಯಕಾರಿಯಾದದ್ದು. ಹೀಗಾಗಿ, ಎಲ್ಲ ದೇಶಗಳು ತಮ್ಮ ಸಾಂಸ್ಕೃತಿಕ ಪರಂಪರೆಯ ಭಾಗವಾಗಿ ಸಿನಿಮಾರಂಗ ಕುರಿತಂತೆ ನೀತಿಗಳನ್ನು, ಆಡಳಿತ ಕ್ರಮಗಳನ್ನು ಜಾರಿ ಮಾಡುತ್ತ ಬಂದಿವೆ. ಇತ್ತೀಚೆಗೆ ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರ ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ಆಡಳಿತ ಕ್ರಮವನ್ನು ಜಾರಿ ಮಾಡಿತು. ಅದರ ಬಗೆಗೆ ಈ ಬರಹದಲ್ಲಿ ಕೆಲವು ಮಾಹಿತಿಗಳನ್ನು ನೀಡಲಾಗಿದೆ.

ಡಿಸೆಂಬರ್ 31, 2022 ರಂದು ನ್ಯಾಷನಲ್ ಫಿಲ್ಮ್ ಡೆವಲಪ್ಮೆಂಟ್ ಕಾರ್ಪೋರೇಷನ್(ಎನ್‌ಎಫ್ಡಿಸಿ) ಜೊತೆ ನಾಲ್ಕು ಫಿಲ್ಮ್ ಸಂಸ್ಥೆಗಳಾದ ಫಿಲ್ಮ್ ಡಿವಿಶನ್(ಎಫ್.ಡಿ), ನ್ಯಾಷನಲ್ ಫಿಲ್ಮ್ ಆರ್ಕೈವ್ಸ್ ಆಫ್ ಇಂಡಿಯಾ(ಎನ್.ಎಫ್.ಎ.ಐ), ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ ಆಫ್ ಇಂಡಿಯಾ(ಸಿ.ಎಫ್.ಎಸ್.ಐ) ಮತ್ತು ಡೈರೆಕ್ಟೋರೇಟ್ ಆಫ್ ಫಿಲ್ಮ್ ಫೆಸ್ಟಿವಲ್(ಡಿ.ಎಫ್.ಎಫ್) ಜೊತೆ ವಿಲೀನಗೊಂಡವು. ಕೇಂದ್ರ ಸರ್ಕಾರದ ಈ ಕ್ರಮದ ಹಿಂದಿನ ಉದ್ದೇಶಗಳೇನು?, ಇದಕ್ಕೆ ಚಲನಚಿತ್ರರಂಗದ ಭಾಗವಾಗಿರುವವರ ಪ್ರತಿಕ್ರಿಯೆಗಳೇನು? ಈ ನಾಲ್ಕು ಸಂಸ್ಥೆಗಳ ಉಗಮ ಇತ್ಯಾದಿ ವಿಷಯಗಳ ಬಗೆಗೆ ಈ ಬರಹದಲ್ಲಿ ಚರ್ಚಿಸಲಾಗಿದೆ.

ಫಿಲ್ಮ್ ಡಿವಿಶನ್(ಎಫ್.ಡಿ)ನನ್ನು 1948ರಲ್ಲಿ ಸ್ಥಾಪಿಸಲಾಯಿತು. ಹವ್ಯಾಸಿ(ಫ್ರೀಲ್ಯಾನ್ಸ್)ಫಿಲ್ಮ್ ತಯಾರಿಕರಿಗೆ ಬೆಂಬಲವನ್ನು ನೀಡುವುದು. ಚಲನಚಿತ್ರಗಳು, ಅದರಲ್ಲು ಮುಖ್ಯವಾಗಿ ಸಾಕ್ಷ್ಯಚಿತ್ರಗಳಿಗೆ ಒಂದು ವೇದಿಕೆಯನ್ನು ಸೃಷ್ಟಿಸುವುದು ಇದರ ಉದ್ದೇಶವಾಗಿತ್ತು. 1964ರಲ್ಲಿ ಅಸ್ತಿತ್ವಕ್ಕೆ ಬಂದ ನ್ಯಾಷನಲ್ ಫಿಲ್ಮ್ ಆರ್ಕೈವ್ಸ್ ಆಫ್ ಇಂಡಿಯಾ(ಎನ್.ಎಫ್.ಎ.ಐ)ಗೆ ನಮ್ಮ ದೇಶದ ಸಿನಿಮಾಗಳನ್ನು ಜತನ ಮಾಡುವುದು ಮತ್ತು ನ್ಯಾಷನಲ್ ಫಿಲ್ಮ್ ಹೆರಿಟೇಜ್ ಮಿಷನ್ನನ್ನು ಕಾರ್ಯಗತಗೊಳಿಸುವುದು ಈ ಸಂಸ್ಥೆಯ ಆಶಯವಾಗಿತ್ತು. ಹೆಸರೇ ಸೂಚಿಸುವಂತೆ, ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ ಆಫ್ ಇಂಡಿಯಾ(ಸಿ.ಎಫ್.ಎಸ್.ಐ – ಸ್ಥಾಪನೆ: 1955)ಮಕ್ಕಳು ಮತ್ತು ಕಿಶೋರ/ಕಿಶೋರಿಯರಿಗಾಗಿ ಫೀಚರ್ ಫಿಲಂಗಳು, ಅನಿಮೇಟಡ್ ಫಿಲಂಗಳು, ಶಾರ್ಟ್ ಫಿಲಂಗಳು ಮತ್ತು ಟಿವಿ ಸೀರಿಯಲ್‌ಗಳನ್ನು ತಯಾರಿಸುವ ಗುರಿಯನ್ನು ಹೊಂದಿತ್ತು. ಅಲ್ಲದೆ ಅದು ರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವವನ್ನು ಆಯೋಜಿಸುತ್ತಿತ್ತು. 1973ರಲ್ಲಿ ಶುರುವಾಯಿತು ಡೈರೆಕ್ಟೋರೇಟ್ ಆಫ್ ಫಿಲ್ಮ್ ಫೆಸ್ಟಿವಲ್(ಡಿ.ಎಫ್.ಎಫ್) ಸಂಸ್ಥೆ. ಇದಕ್ಕೆ ಇಂಟರ್-ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾವನ್ನು ಏರ್ಪಡಿಸುವ ಜೊತೆಗೆ ಅವುಗಳ ಭಾಗವಾದ 'ಇಂಡಿಯನ್ ಪನೋರಮ'ಗೆ ಚಲನ ಚಿತ್ರಗಳನ್ನು ಆಯ್ಕೆ ಮಾಡಿ ಅವುಗಳನ್ನು ಮುಂದೆ ಸ್ಕ್ರೀನ್ ಮಾಡುವ ಜವಾಬ್ದಾರಿಯಿತ್ತು. ಅಲ್ಲದೆ, ಅದು ಇನ್ನು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು. 1975ರಲ್ಲಿ ಜನ್ಮ ತಳೆದ ನ್ಯಾಷನಲ್ ಫಿಲ್ಮ್ ಡೆವಲಪ್ಮೆಂಟ್ ಕಾರ್ಪೋರೇಷನ್(ಎನ್‌ಎಫ್ಡಿಸಿ)ಗೆ ಸಿನಿಮಾಗಳನ್ನು ತಯಾರಿಸುವ, ವಿತರಿಸುವ ಮತ್ತು ಒತ್ತಾಸೆಯನ್ನು ನೀಡುವ ಉದ್ದೇಶಗಳಿದ್ದವು. ಅದು ನಮ್ಮ ನಾಡಿನ ಕೆಲವು ಪ್ರಖ್ಯಾತ, ವಿಶ್ವಮಟ್ಟದಲ್ಲಿ ಗುರುತಿಸಲ್ಪಡುವ ನಿರ್ದೇಶಕರ ಚಲನಚಿತ್ರಗಳನ್ನು ನಿರ್ಮಾಣ ಮಾಡಿದೆ.

ಕೇಂದ್ರ ಸರ್ಕಾರ ಮೇಲೆ ಪ್ರಸ್ತಾಪಿಸಿರುವ ನಾಲ್ಕು ಫಿಲ್ಮ್ ಸಂಸ್ಥೆಗಳ ಬಗೆಗೆ ಪರಿಶೀಲನೆಯನ್ನು ನಡೆಸಿ, ಒಂದು ವರದಿಯನ್ನು ನೀಡುವ ನಿಟ್ಟಿನಲ್ಲಿ ಬಿಮಲ್ ಜುಲ್ಕ ನೇತೃತ್ವದ ಒಂದು ಉನ್ನತ ಸಮಿತಿ(ಹೈ ಪವರ್ಡ್ ಕಮಿಟಿ)ಯನ್ನು ಸ್ಥಾಪಿಸಿತು. ಒಂದು ಸುದ್ದಿಮೂಲದ ಪ್ರಕಾರ ಕನ್ನಡ ಚಲನಚಿತ್ರರಂಗದ ಪ್ರಸಿದ್ಧ ನಿರ್ದೇಶಕರಾಗಿರುವ ಟಿ.ಎಸ್.ನಾಗಾಭರಣ ಸಹ ಅದರ ಸದಸ್ಯರಾಗಿದ್ದರು. ಈ ಸಮಿತಿ ಇತರ ಕೆಲವು ಸೂಚನೆ, ಸಲಹೆಗಳ ಜೊತೆ ನಾಲ್ಕು ಫಿಲ್ಮ್ ಸಂಸ್ಥೆಗಳನ್ನು ಎನ್.ಎಫ್.ಡಿ.ಸಿ ಜೊತೆ ವಿಲೀನಗೊಳಿಸಬೇಕೆಂದು ಶಿಫಾರಸ್ಸನ್ನು ಮಾಡಿತು. ಇದು ಕೊಟ್ಟ ಕಾರಣಗಳು: ಅ) ಈ ನಾಲ್ಕು ಸಂಸ್ಥೆಗಳಲ್ಲಿ ಒಂದೇ ತೆರನಾದ ಕೆಲಸಗಳುಜರುಗುತ್ತಿವೆ. ಹಾಗಾಗಿ ಡುಪ್ಲಿಕೇಶನ್ ಆಗುತ್ತಿದೆ. ಹೀಗಾಗದಿರಲು, ಅವುಗಳು ಒಂದು ಸಂಸ್ಥೆಯಡಿ ಜರುಗಿದರೇ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ ಮತ್ತು ಕ್ಷಮತೆಯೂ ಇರುತ್ತದೆ. ಆ) ಒಂದೇ ಸಂಸ್ಥೆಯಿದ್ದರೇ, ಸಂಪನ್ಮೂಲಗಳನ್ನು ಸಹ ಸೂಕ್ತ ರೀತಿಯಲ್ಲಿ ವಿನಿಯೋಗಿಸಬಹುದು. ಇವುಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಡಿಸೆಂಬರ್ 2020ರಲ್ಲೇ ವಿಲೀನಕ್ಕೆ ಅಸ್ತು ಎಂದಿತ್ತು. ಆದರೆ ಈ ಸಮಿತಿ, ಚಲನಚಿತ್ರೋದ್ಯಮದಲ್ಲಿರುವವರ ಮತ್ತು ನಾಲ್ಕು ಸಂಸ್ಥೆಗಳ ಉದ್ಯೋಗಿಗಳ ಪ್ರತಿನಿಧಿಗಳ ಜೊತೆ ಯಾವ ಸಮಾಲೋಚನೆಯನ್ನು ನಡೆಸದೇ ಏಕಪಕ್ಷೀಯವಾಗಿ ಶಿಫಾರಸ್ಸುಗಳನ್ನು ನೀಡಿದೆ ಎಂದು ಆಪಾದಿಸಿ ಸುಮಾರು 850 ಚಲನಚಿತ್ರೋದ್ಯಮಕ್ಕೆ ಸೇರಿದವರು, ಸಂಸ್ಕೃತಿ ಕ್ಷೇತ್ರದವರು ಹಾಗೂ ಸಾಮಾಜಿಕ ಕಾರ್ಯಕರ್ತರು (ಕೇಂದ್ರ ಸರ್ಕಾರದ) ಮಾಹಿತಿ ಮತ್ತು ಪ್ರಸಾರ ಇಲಾಖೆಗೆ ಪತ್ರವನ್ನು ಬರೆದರು. ಈ ನಿಟ್ಟಿನಲ್ಲಿ, ಸಮಿತಿಯ ವರದಿಯನ್ನು ಬಹಿರಂಗಗೊಳಿಸಬೇಕೆಂಬ ಆರ್.ಟಿ.ಐ ಅರ್ಜಿಗೂ ಸ್ಪಂದನ ದೊರಕಲಿಲ್ಲ ಎಂಬ ಅಂಶವನ್ನು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ಈ ನಾಲ್ಕೂ ಸಂಸ್ಥೆಗಳು ಅನೇಕ ವರ್ಷಗಳಿಂದ ಕಾರ್ಯವನ್ನು ನಿರ್ವಹಿಸುತ್ತಿದ್ದು, ಅವು ವೈಶಿಷ್ಟ್ಯ ಮತ್ತು ಪರಿಣತಿಯನ್ನು ಪಡೆದುಕೊಂಡಿವೆ. ಅವುಗಳಿಗೆ ವೃತ್ತಿಪರ ಸಲಹಾ ಮಂಡಲಿಗಳಿದ್ದು, ಅವು ಮೇಲುಸ್ತುವಾರಿಯನ್ನು ನಡೆಸಿಕೊಂಡು ಬಂದಿವೆ. ಸರಿಯಾದ ದಾರಿಯಲ್ಲಿ ಸಾಗಲು ಸಹಕರಿಸಿವೆ. ಎನ್.ಎಫ್.ಡಿ.ಸಿಯ ಕಾರ್ಯ ವೈಖರಿ ಬಗೆಗೆ ಅನೇಕ ಅಸಮಾಧಾನಗಳಿವೆ. ಹೀಗಿರಬೇಕಾದರೇ, ಅದಕ್ಕೆ ಇನ್ನು ಹೆಚ್ಚಿನ ಮಟ್ಟದ ಆರ್ಥಿಕ ಶಕ್ತಿಯನ್ನು ತುಂಬಿ, ಅದಕ್ಕೆ ವಿಲೀನದ ಮೂಲಕ ಹೆಚ್ಚಿನ ಕೆಲಸಗಳನ್ನು ನಿಯೋಜಿಸುವುದು ಸರಿಯಾದ ಕ್ರಮವೇ?" ಎಂದು ತಮ್ಮ ಒಂದು ಲೇಖನದಲ್ಲಿ ನಮ್ಮ ದೇಶದ ಪರ್ಯಾಯ ಸಿನಿಮಾದ ಪ್ರಮುಖ ನಿರ್ದೇಶಕರಲ್ಲಿ ಒಬ್ಬರಾದ ಅಡೂರ್ ಗೋಪಾಲಕೃಷ್ಣನ್ ಪ್ರಶ್ನಿಸಿದ್ದಾರೆ. ಹಾಗೆಯೇ, ನಸೀರುದ್ದೀನ್ ಶಾ, ಆನಂದ್ ಪಟವರ್ಧನ್, ಅನುರಾಗ್ ಕಶ್ಯಪ್, ನಂದಿತಾದಾಸ್, ಶಾಮಾರ್ಕ್ಯುದಿ ಮುಂತಾದ ಖ್ಯಾತನಾಮರು ಕೇಂದ್ರ ಸರ್ಕಾರದ ಈ ವಿಲೀನ ಕ್ರಮವನ್ನು ಖಂಡಿಸಿದ್ದಾರೆ. ಆದರೆ ಪ್ರಸಿದ್ಧ ನಿರ್ದೇಶಕ ಶ್ಯಾಮ್ ಬೆನಗಲ್ "ಅನೇಕ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. ಆದರೆ ಈ ವಿಲೀನ ಯಾವ ರೀತಿಯಲ್ಲಿ ಮುಂದುವರೆಯುತ್ತದೆ ಎಂದು ಗಮನಿಸಬೇಕು. ಫಿಲ್ಮ್ ವ್ಯಾಪಾರ ಬದಲಾಗಿದೆ. ಓಟಿಟಿ ಕಾಲದಲ್ಲಿ ನಾವಿದ್ದೇವೆ. ಈ ವಿಲೀನ ಯಾವ ಪರಿಯ ಬದಲಾವಣೆಗಳನ್ನು ಉಂಟುಮಾಡಬಹುದು ಎಂದು ಕಾತರದಿಂದ ನಿರೀಕ್ಷಿಸುತ್ತೇನೆ?" ಎಂದಿದ್ದಾರೆ!

ನ್ಯಾಷನಲ್ ಫಿಲ್ಮ್ ಆರ್ಕೈವ್ಸ್ ಆಫ್ ಇಂಡಿಯಾ(ಎನ್.ಎಫ್.ಎ.ಐ)ದ ಕೆಲಸಗಳು ಮಹತ್ವಪೂರ್ಣವಾಗಿದ್ದವು. ಅದು ಇಂಟರ್-ನ್ಯಾಷನಲ್‌ಫೆಡರೇಶನ್ ಆಫ್ ಫಿಲ್ಮ್ ಆರ್ಕೈವ್ಸ್‌ನ ಪ್ರಮುಖ ಘಟಕ ಕೂಡ ಆಗಿತ್ತು. ಅನೇಕ ಸಹ ಸದಸ್ಯ ದೇಶಗಳಿಗೆ ನಮ್ಮ ಸಿನಿಮಾಗಳನ್ನು ರವಾನಿಸುತ್ತಿತ್ತು. ದೆಹಲಿ, ಕೋಲ್ಕತ್ತ, ಚೆನ್ನೈ, ಬೆಂಗಳೂರು ಮತ್ತು ತಿರುವನಂತಪುರದ ಪ್ರಾಂತೀಯ ಕಚೇರಿಗಳ ಮೂಲಕ ಅದು ಸಿನಿಮಾಕ್ಕೆ ಸಂಬಂಧಿಸಿದ ನೆನಪಿನ ಗುರುತುಗಳನ್ನು ಸಂಗ್ರಹಿಸುತ್ತಿತ್ತು. ಅಲ್ಲದೆ ಅದು ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ವಿದ್ವಾಂಸರಿಗೆ ಅಧ್ಯಯನವನ್ನು ನಡೆಸಲು ಪೂರಕವಾದ ವ್ಯವಸ್ಥೆಯನ್ನು ಹೊಂದಿತ್ತು. ಎನ್.ಎಫ್.ಡಿ.ಸಿ.ಯಂತಹ ದೊಡ್ಡ ಸಂಸ್ಥೆಯಡಿ ಇಂತಹ ಕಾರ್ಯಗಳು ಸಾಂಗವಾಗಿ ಜರುಗಬಲ್ಲವೇ ಎಂದು ಕೆಲವರು ತಮ್ಮ ಆತಂಕವನ್ನು ಹೊರಗೆಡಹಿದ್ದಾರೆ. ಎನ್.ಫ್.ಎ.ಐ. ಕೆಲಸಗಳು ಇತರ ನಾಲ್ಕು ಸಂಸ್ಥೆಗಳ ಕೆಲಸಕ್ಕಿಂತ ವಿಭಿನ್ನವಾದದ್ದು, ವಿಶಿಷ್ಟವಾದದ್ದು. ಇದೇ ರೀತಿ ಫಿಲ್ಮ್ ಡಿವಿಶನ್(ಎಫ್.ಡಿ), ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ ಆಫ್ ಇಂಡಿಯಾ (ಸಿ.ಎಫ್.ಎಸ್.ಐ) ಮತ್ತು ಡೈರೆಕ್ಟೋರೇಟ್ ಆಫ್ ಫಿಲ್ಮ್ ಫೆಸ್ಟಿವಲ್(ಡಿ.ಎಫ್.ಎಫ್) ಗಳ ಕೆಲಸಗಳು ಪ್ರತಿಯೊಂದು ವಿಭಿನ್ನ, ವಿಶಿಷ್ಟ ವಾದವು. ಅವುಗಳಲ್ಲಿ ಡುಪ್ಲಿಕೇಶನ್ ಆಗುತ್ತದೆ ಎಂದು ಖಂಡಿತ ಹೇಳುವಂತಿಲ್ಲ. ಕೆಲಸಗಳು ವಿಭಿನ್ನ, ವಿಶಿಷ್ಟವಾದ್ದರಿಂದ ಅವು ಹೊಂದಿರುವ ಸಿಬ್ಬಂದಿಯ ಕೌಶಲ್ಯ, ಪರಿಣತಿಗಳೂ ವಿಭಿನ್ನವಾದವು. ಹೀಗಾಗಿ ಇವುಗಳನ್ನು ವಿಲೀನಗೊಳಿಸಲು (ಮೇಲೆ ಹೇಳಲಾದ) ಸರಕಾರ ಕೊಟ್ಟಿರುವ ಎರಡು ಕಾರಣಗಳೂ ಸಮರ್ಪಕ ಎನಿಸುವುದಿಲ್ಲ.

ಪ್ರಸ್ತುತ ಕೇಂದ್ರ ಸರ್ಕಾರ ಸಾರ್ವಜನಿಕ ಕ್ಷೇತ್ರದ ಘಟಕಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಿಸಬೇಕೆಂಬ ಒಂದು ರೋಡ್ಮ್ಯಾಪನ್ನು ಹೊಂದಿದೆ. ಅದರಂತೆ ಅದು ಕಾರ್ಯ ನಿರತವೂ ಆಗಿದೆ. ಈ ನಾಲ್ಕೂ ಸಂಸ್ಥೆಗಳಿಗೆ (ಭಾರೀ ಬೆಲೆ ಬಾಳುವ) ಭೂಮಿ ಮುಂತಾದ ಸಾಕಷ್ಟು ಸ್ಥಿರಾಸ್ತಿಗಳೂ ಇವೆ. ಮಾತ್ರವಲ್ಲ ಇವು ಖಾಸಗಿ ಕ್ಷೇತ್ರದ ತಿಮಿಂಗಲಗಳಿಗೆ ಆಪ್ಯಾಯಮಾನವಾಗಿರುತ್ತವೆ. ಭೂಮಿಯ ಸ್ಥಿರಾಸ್ತಿಗಳಲ್ಲದೆ ಫಿಲ್ಮ್ ಆರ್ಕೈವ್ಸ್ ಸಂಸ್ಥೆ ಹೊಂದಿರುವ ಫಿಲಂಗಳ ಮೌಲ್ಯವೂ ಕಡಿಮೆಯದೇನಲ್ಲ. ಈ ನಾಲ್ಕು ಫಿಲಂ ಸಂಸ್ಥೆಗಳು ಸರಕಾರದ ನೇರ ಸ್ವಾಮ್ಯದಲ್ಲಿರುವಂಥವು. ನಾಲ್ಕು ಫಿಲಂ ಸಂಸ್ಥೆಗಳನ್ನು ಮೊದಲು ಎನ್.ಎಫ್.ಡಿ.ಸಿ. ಜತೆ ವಿಲೀನಗೊಳಿಸುವುದು. ಎನ್.ಎಫ್.ಡಿ.ಸಿ ಸಾರ್ವಜನಿಕ ಉದ್ಯಮವಾದ್ದರಿಂದ ಅದನ್ನು ಮಾರುವುದು ಸುಲಭ. ಮುಂದಿನ ಹಂತದಲ್ಲಿ ಎನ್.ಎಫ್.ಡಿ.ಸಿ ಖಾಸಗೀಕರಣದ ಮೂಲಕ ಇಡೀ ಫಿಲಂ ವ್ಯವಸ್ಥೆಯನ್ನೇ ಖಾಸಗಿ ಕುಳಗಳಿಗೆ ಮಾರಾಟ ಮಾಡುವ ಸಂಭವವನ್ನು ತಳ್ಳಿಹಾಕುವಂತಿಲ್ಲ ಎಂದು ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವರು ಮತ್ತು ಕೆಲವು ಸಾಮಾಜಿಕ ಕಾರ್ಯಕರ್ತರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಇದುವರೆಗೆ ಕನ್ನಡ ಸಿನಿಮಾರಂಗದಿಂದ ವಿಲೀನೀಕರಣಕ್ಕೆ ಯಾವ ಪ್ರತಿಕ್ರಿಯೆಯೂ ದೊಡ್ಡ ರೀತಿಯಲ್ಲಿ ಬಂದಿಲ್ಲ.


ತಮಿಳುನಾಡು ರಾಜ್ಯಪಾಲರ ವರ್ತನೆ ಸಂವಿಧಾನ ಬಾಹಿರ ಅನುಚಿತ ಕ್ರಮ

ತಮಿಳುನಾಡು ರಾಜ್ಯ ಸರ್ಕಾರವು ಅಸೆಂಬ್ಲಿಯಲ್ಲಿ ಮಾಡಲು ಸಿದ್ಧಪಡಿಸಿದ ಭಾಷಣದ ಭಾಗಗಳನ್ನು ಬಿಟ್ಟುಬಿಡುವ ರಾಜ್ಯಪಾಲ ಆರ್‌ಎನ್‌ರವಿಯವರ ಕ್ರಮ ಅನುಚಿತವಾದದ್ದು, ಅದು ಖಂಡಿತವಾಗಿಯೂ ಒಪ್ಪತಕ್ಕಂತಹ ವರ್ತನೆ ಅಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಚುನಾಯಿತ ರಾಜ್ಯ ಸರ್ಕಾರದ ಧ್ವನಿಯಾಗಿ ರಾಜ್ಯಪಾಲರು ಕಾರ್ಯನಿರ್ವಹಿಸಬೇಕು ಎಂಬ ಸಾಂವಿಧಾನಿಕ ತತ್ವವನ್ನು ಮತ್ತು ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣದ ಸಂಪೂರ್ಣ ಪಠ್ಯವನ್ನು ಓದುವ ಬಹಳ ಕಾಲದಿಂದ ಅಂಗೀಕರಿಸಿರುವ ಪದ್ಧತಿಯನ್ನು ರಾಜ್ಯಪಾಲ ರವಿ ನಿರ್ಲಜ್ಜವಾಗಿ ಉಲ್ಲಂಘಿಸಿದ್ದಾರೆ. ಅವರು ಬಿಟ್ಟುಬಿಡಲು ಮುಂದಾದ ಭಾಷಣದ ಪಠ್ಯದ ಭಾಗಗಳನ್ನು ಅವರು ಅದನ್ನು ಓದುವ ಮೊದಲು ಅನುಮೋದಿಸಿದ್ದರು ಎಂಬುದು ಈಗ ಸ್ಪಷ್ಟವಾಗಿದೆ ಎಂದೂ ಸಿಪಿಐ(ಎಂ) ಹೇಳಿದೆ.

ಅವರು ಬಿಟ್ಟುಬಿಡಲು ಬಯಸಿದ ಭಾಷಣದ ಭಾಗಗಳು ಚುನಾಯಿತ ರಾಜ್ಯ ಸರ್ಕಾರಕಷ್ಟೇ ಸೇರಿದ ವಿಶೇಷ ಅಧಿಕಾರವಿರುವ ಕಾನೂನು ಮತ್ತು ಸುವ್ಯವಸ್ಥೆಯ ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ದಾಖಲೆಯ ಬಗ್ಗೆ ಅವರ ವೈರತ್ವವನ್ನು ಪ್ರಕಟಪಡಿಸುತ್ತದೆ. ಇದಲ್ಲದೆ, ಅವರು ತಮಿಳುನಾಡಿನ ಸಾಮಾಜಿಕ ಸುಧಾರಣಾ ಪರಂಪರೆಗಳ ಹಿರಿಯ ಚೇತನಗಳ ಕೊಡುಗೆಗಳನ್ನು ಕುರಿತ ಉಲ್ಲೇಖಗಳನ್ನು ಸಹ ಬಿಟ್ಟುಬಿಟ್ಟರು.

ರಾಜ್ಯಪಾಲ ರವಿ ಅವರ ಕ್ರಮಗಳು ಪ್ರಸ್ತುತ ಬಿಜೆಪಿ ನೇತೃತ್ವದ ಸರ್ಕಾರದ ಅಡಿಯಲ್ಲಿ ಬೆಳೆಯುತ್ತಿರುವ ಒಂದು ವಿಧಾನವನ್ನು ಎತ್ತಿತೋರಿದೆ. ಅದೆಂದರೆ, ರಾಜ್ಯ ಸರ್ಕಾರಗಳ ಸಾಂವಿಧಾನಿಕ ಪಾತ್ರವನ್ನು ದುರ್ಬಲಗೊಳಿಸಲು ರಾಜ್ಯಪಾಲರ ಹುದ್ದೆಯನ್ನು ಒಂದು ಸಾಧನವಾಗಿ ಬಳಸುವುದು. ಇದು ಒಕ್ಕೂಟತತ್ವ-ವಿರೋಧಿ ಪ್ರವೃತ್ತಿಯನ್ನು ಮತ್ತು ಅಧಿಕಾರಗಳ ಕೇಂದ್ರೀಕರಣದ ಗೀಳಿನ ವಾಸನೆಯನ್ನು ಸೂಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.



ಜೋಶಿಮಠ ಮತ್ತು ಈ ಪ್ರದೇಶದ ಇತರ ಅನೇಕ ಪಟ್ಟಣಗಳು ತುಂಬಾ ದುರ್ಬಲ ಹಾಗೂ ಅಸ್ಥಿರ ಮಣ್ಣು ಹಾಗೂ ಕಲ್ಲಿನ ತಳ ಆಧಾರದ ಮೇಲೆ ನಿರ್ಮಿಸಲಾಗಿದೆ. ಹಿಮನದಿಯ ಚಲನೆ ಮತ್ತು ಹಿಂದಿನ ಭೂಕುಸಿತಗಳಿಂದ ಉಳಿದಿರುವ ಸಡಿಲವಾದ ವಸ್ತುಗಳನ್ನು ಅದು ಒಳಗೊಂಡಿದೆ. ಇಂಥ ಸನ್ನಿವೇಶದಿಂದಾಗಿ ವಸಾಹತುಗಳು ತಾಳಿಕೊಳ್ಳುವ ಸಾಮರ್ಥ್ಯ ಕಡಿಮೆಯಿದೆ. ಆದರೆ ಅವುಗಳು ಅಡ್ಡಾದಿಡ್ಡಿಯಾಗಿ ಬೆಳೆದಿದ್ದು ಸ್ಥಳೀಯ ನಿವಾಸಿಗಳು ಹಾಗೂ ಪ್ರವಾಸಿಗಳ ಸಂಖ್ಯೆ ಹೆಚ್ಚಳದಿಂದಾಗಿ ಅಲ್ಲಿ ಹೊರೆ ಅತಿಯಾಗಿದೆ.

ಪ್ರಕಾಶ್ ಕಾರತ್

ಜೋಶಿಮಠದಲ್ಲಿ ಮಾನವ ನಿರ್ಮಿತ ದುರಂತ

ವಿಶೇಷವಾಗಿ ಪ್ರಸಕ್ತ ಕೇಂದ್ರ ಸರ್ಕಾರದಡಿ, ಒಂದು ಸಂಪೂರ್ಣ ಅನಾಹುತ ಸಂಭವಿಸುವವರೆಗೂ ದುರಂತದ ಬಗ್ಗೆ ಅಧಿಕಾರಿಗಳಿಗೆ ಮನವರಿಕೆ ಆಗುವುದಿಲ್ಲವೇನೋ ಅನಿಸುತ್ತದೆ. ಪರಿಸರ ಅಥವಾ ಸಾಮಾಜಿಕ ವಿಚಾರಗಳನ್ನು ನಿರ್ವಹಿಸದೆ ನಿರ್ಲಕ್ಷ್ಯದಿಂದ ಮಾಡುವ ಅಭಿವೃದ್ಧಿ ಕಾರ್ಯಗಳಿಂದ ಪ್ರಗತಿ ಸಾಧ್ಯವಾಗದು ಎನ್ನುವುದು ಅವರಿಗೆ ಮನವರಿಕೆಯಾಗದು. ಬದರಿನಾಥಕ್ಕೆ ಹೆಬ್ಬಾಗಿಲು ಎಂದು ಪರಿಗಣಿಸಲಾಗುವ ಜೋಶಿಮಠದಲ್ಲಿ ಸಂಭವಿಸುತ್ತಿರುವ ಅನಾಹುತವು ಉತ್ತರಾಖಂಡದ ಹಿಮಾಲಯ ಶ್ರೇಣಿಯಲ್ಲಿ ನಡೆಯುತ್ತಿರುವ ದುರಂತಗಳ ದೀರ್ಘ ಪಟ್ಟಿಯಲ್ಲಿ ಇತ್ತೀಚಿನದ್ದಾಗಿದೆ. ದುರ್ಬಲವಾದ ಬೆಟ್ಟಗಳಲ್ಲಿ ಲಂಗುಲಗಾಮಿಲ್ಲದ ನಿರ್ಮಾಣ ಚಟುವಟಿಕೆಗಳು, ಮೂಲಸೌಕರ್ಯ ಮತ್ತು ನಗರೀಕರಣ ಚಟುವಟಿಕೆಗಳಿಂದ ಈ ದುರಂತಗಳು ಸಂಭವಿಸುತ್ತಿವೆ. ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿನ ಪಶ್ಚಿಮ ಹಿಮಾಲಯಗಳಲ್ಲಿ ಈ ಮಾನವನಿರ್ಮಿತ ವಿಕೋಪಗಳು ಮಾನವನಿರ್ಮಿತ ಹವಾಮಾನ ಬದಲಾವಣೆಯ ಪರಿಣಾಮವಾಗಿ ಅತಿಯಾದ ಮಳೆಯಿಂದಾಗುವ ಪ್ರವಾಹ, ಭೂಕುಸಿತ ಮುಂತಾದ ದುರಂತಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ತೀವ್ರಗೊಳ್ಳುತ್ತಿವೆ.

6,000 ಅಡಿ ಎತ್ತರದಲ್ಲಿರುವ ಜೋಶಿಮಠ ಈಗೀಗ ಭೂಕುಸಿತದಿಂದ ಹೆಚ್ಚು ಸಮಸ್ಯೆ ಎದುರಿಸುತ್ತಿದೆ. ರಸ್ತೆಗಳಲ್ಲಿ ದೊಡ್ಡ ಬಿರುಕುಗಳು ಕಾಣಿಸಿಕೊಂಡು ರಸ್ತೆಗಳು, ಕಟ್ಟಡಗಳು ಮತ್ತು ಇತರ ಮೂಲಸೌಕರ್ಯಗಳಲ್ಲಿ ಸ್ವರೂಪಾತ್ಮಕ ಹಾನಿ ಸಂಭವಿಸುತ್ತಿದೆ. ಇಡೀ ಪಟ್ಟಣದ ಕಾಲು ಭಾಗ ತೊಂದರೆಗೆ ಒಳಗಾಗಿದೆ. ಇದುವರೆಗೆ ನಾಲ್ಕು ವಲಯಗಳ 720ಕ್ಕೂ ಹೆಚ್ಚು ಮನೆಗಳು ತೀವ್ರವಾಗಿ ಹಾನಿಗೊಂಡಿವೆ ಎಂದು ಅಂದಾಜು ಮಾಡಲಾಗಿದೆ. 89 ಮನೆಗಳು ಹಾಗೂ ಹೋಟೆಲ್ ಕಟ್ಟಡಗಳು ಅಸುರಕ್ಷಿತ ಎಂದು ಪರಿಗಣಿಸಿ ತಕ್ಷಣವೇ ನಾಶ ಮಾಡಲು ಗುರುತಿಸಲಾಗಿದೆ. ನೂರಾರು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಇನ್ನೂ ಬಹಳಷ್ಟು ಮಂದಿ ಅದಕ್ಕಾಗಿ ಕಾಯುತ್ತಿದ್ದಾರೆ.

ಇದರ ನಡುವೆ, ಹಿಂದಿನ ಹಲವಾರು ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ್ದರಿಂದ ತಮ್ಮ ಪಟ್ಟಣಕ್ಕೆ ಅಪಾರ ಹಾನಿ ಸಂಭವಿಸಿರುವುದಕ್ಕೆ ಆಕ್ರೋಶಗೊಂಡ ಜನರು ಪ್ರತಿಭಟನೆಗೆ ಇಳಿದಿದ್ದಾರೆ. ಜಿಲ್ಲಾಡಳಿತ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವೂ ದುರಂತವನ್ನು ಅತಿ ಸಾಮಾನ್ಯವೆಂಬಂತೆ ಕಾಣುವ ಧೋರಣೆಯೂ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಹಾನಿಗೊಂಡ ಕಟ್ಟಡಗಳಿಂದ ಜನರನ್ನು ತೆರವುಗೊಳಿಸುವುದು, ಪರಿಹಾರ ನೀಡಿಕೆ ಮತ್ತು ತಾತ್ಕಾಲಿಕ ಶೆಲ್ಟರ್‌ಗಳಿಗೆ ಸ್ಥಳಾಂತರಿಸುವುದು ಅವರ ವಿಧಾನಗಳಲ್ಲಿ ಒಂದಾಗಿದೆ. ಇದು ಭಾರತದಲ್ಲಿ 'ಅಭಿವೃದ್ಧಿ ನಿರಾಶ್ರಿತರ' ದೊಡ್ಡ ಪಟ್ಟಿಗೆ ಹೊಸ ಸೇರ್ಪಡೆಯಾಗಿದೆ. ಭಾರತದಲ್ಲಿ ವಿನಾಶಕಾರಿ ಅಭಿವೃದ್ಧಿಯಿಂದ ಜನರು ಮನೆಗಳು, ಉಳಿತಾಯಗಳು ಮತ್ತು ಜೀವನೋಪಾಯಗಳನ್ನೇ ಕಳೆದುಕೊಳ್ಳುತ್ತಾರೆ. ಆದರೆ ಗುತ್ತಿಗೆದಾರರು ಮತ್ತು ವಾಣಿಜ್ಯ ಸಂಸ್ಥೆಗಳು ಲಾಭದ ಕೊಯ್ಲು ಮಾಡುತ್ತಾರೆ. ಜೋಶಿಮಠ ದುರಂತದಿಂದ ಸಂತ್ರಸ್ತರಾದವರು, ಅಂದರೆ ಸರ್ಕಾರದ ಉದ್ದೇಶಪೂರ್ವಕ ನಿರ್ಲಕ್ಷ್ಯದಿಂದ ತೊಂದರೆಗೆ ಒಳಗಾದವರಿಗೆ ಸಂಪೂರ್ಣವಾಗಿ ಪುನರ್‌ವಸತಿ ಕಲ್ಪಿಸಬೇಕು ಹಾಗೂ ತಕ್ಷಣವೇ ಸೂಕ್ತ ಪರಿಹಾರ ನೀಡಬೇಕು. ಅವರು ತಮಗೆ ಬರಬೇಕಾದ ಪರಿಹಾರಕ್ಕೆ ಕಾಯಲು ದೊಡ್ಡ ಸರದಿಯಲ್ಲಿ ಇರದಂತೆ ಮಾಡಲು ಇದು ಅತ್ಯಗತ್ಯ. ಇದರ ಜೊತೆಯಲ್ಲಿ ರಸ್ತೆಗಳು, ಜಲವಿದ್ಯುತ್ ಯೋಜನೆಗಳ ನಿರಂತರ ನಿರ್ಮಾಣ ಚಟುವಟಿಕೆಗಳು ಮತ್ತು ಅವ್ಯವಸ್ಥಿತ ನಗರೀಕರಣದ ದೀರ್ಘಕಾಲೀನ ಅಂಶಗಳನ್ನು ಕೂಡ ನಿಭಾಯಿಸಬೇಕು.

ಜೋಶಿಮಠ ದುರಂತದ ನಂತರ ಅದಕ್ಕೆ ತಕ್ಷಣದ ಪ್ರತಿಕ್ರಿಯೆಯಾಗಿ ಕೈಗೊಳ್ಳಲಾದ ನಿರ್ಧಾರಗಳ ವಿಚಾರಕ್ಕೆ ಬರೋಣ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳು, ರಾಷ್ಟ್ರೀಯ ವಿಪತ್ತು ನಿರ್ವಹಣೆ ಪ್ರಾಧಿಕಾರ, ಭಾರತೀಯ ಭೂ ಸರ್ವೇಕ್ಷಣೆ ಇಲಾಖೆ ಮತ್ತು ರಾಷ್ಟ್ರೀಯ ಜಲವಿಜ್ಞಾನ ಸಂಸ್ಥೆ ಮೊದಲಾದವುಗಳ ಅಧಿಕಾರಿಗಳು ಈ ಸಭೆ ನಡೆಸಿದ್ದರು. ಆದರೆ ಈ ಸಂಸ್ಥೆಗಳೇ ಮತ್ತು ವಾಡಿಯಾ ಹಿಮಾಲಯ ಭೂಗರ್ಭ ಸಂಸ್ಥೆ, ಹೆಚ್ಚುತ್ತಿರುವ ಅಪಾಯದ ಬಗ್ಗೆ ನೀಡಿದ್ದ ಎಚ್ಚರಿಕೆಗಳನ್ನು ಒಳಗೊಂಡ ಹಲವಾರು ವರದಿಗಳನ್ನು ನಿರ್ಲಕ್ಷಿಸಲಾಗಿದೆ. ಸುಮಾರು 50 ವರ್ಷ ಹಿಂದಿನ ಪ್ರಸಿದ್ಧ ಎಂ.ಸಿ. ಮಿಶ್ರಾ ಸಮಿತಿ ವರದಿಯಿಂದ ಹಿಡಿದು, ರಾಜ್ಯ ಸರ್ಕಾರ ಸ್ಥಾಪಿಸಿದ ಅನೇಕ ಉನ್ನತ ಅಧಿಕಾರ ಸಮಿತಿಗಳೂ ಸೇರಿದಂತೆ ಈ ಸಂಸ್ಥೆಗಳ ಅಧ್ಯಯನ ವರದಿಗಳು ಮತ್ತು ಇತರ ತಜ್ಞರು ಈ ಪ್ರದೇಶದ ಭೌಗೋಳಿಕ, ಭೂವೈಜ್ಞಾನಿಕ ಮತ್ತು ಭೂಕಂಪಗಳ ಸೂಕ್ಷ್ಮತೆಯನ್ನು, ದೊಡ್ಡ ನಿರ್ಮಾಣ ಚಟುವಟಿಕೆಗಳಿಂದ ಒದಗುವ ಅಪಾಯಗಳನ್ನು ಒತ್ತಿ ಹೇಳಿದ್ದವು.

ಜೋಶಿಮಠ ಮತ್ತು ಈ ಪ್ರದೇಶದ ಇತರ ಅನೇಕ ಪಟ್ಟಣಗಳು ತುಂಬಾ ದುರ್ಬಲ ಹಾಗೂ ಅಸ್ಥಿರ ಮಣ್ಣು ಹಾಗೂ ಕಲ್ಲಿನ ತಳ ಆಧಾರದ ಮೇಲೆ ನಿರ್ಮಿಸಲಾಗಿದೆ. ಹಿಮನದಿಯ ಚಲನೆ ಮತ್ತು ಹಿಂದಿನ ಭೂಕುಸಿತಗಳಿಂದ ಉಳಿದಿರುವ ಸಡಿಲವಾದ ವಸ್ತುಗಳನ್ನು ಅದು ಒಳಗೊಂಡಿದೆ. ಇಂಥ ಸನ್ನಿವೇಶದಿಂದಾಗಿ ವಸಾಹತುಗಳು ತಾಳಿಕೊಳ್ಳುವ ಸಾಮರ್ಥ್ಯ ಕಡಿಮೆಯಿದೆ. ಆದರೆ ಅವುಗಳು ಅಡ್ಡಾದಿಡ್ಡಿಯಾಗಿ ಬೆಳೆದಿದ್ದು ಸ್ಥಳೀಯ ನಿವಾಸಿಗಳು ಹಾಗೂ ಪ್ರವಾಸಿಗಳ ಸಂಖ್ಯೆ ಹೆಚ್ಚಳದಿಂದಾಗಿ ಅಲ್ಲಿ ಹೊರೆ ಅತಿಯಾಗಿದೆ. ಈ ವಲಯವನ್ನು ಭೂಕಂಪನ ವಲಯ–5 ಎಂದು ವರ್ಗೀಕರಿಸಲಾಗಿದೆ. ಭೂಕಂಪಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚೆಂಬುದು ಇದರ ಅರ್ಥವಾಗಿದೆ. ಈ ಪ್ರದೇಶದಲ್ಲಿ ಮಾಡಿದಂತೆ, ಸ್ಫೋಟಗಳು ಹಾಗೂ ಸುರಂಗ ಕೊರೆಯುವಿಕೆಯಿಂದ ಅಪಾಯ ಇನ್ನಷ್ಟು ಜಾಸ್ತಿಯಾಗುತ್ತದೆ. ಸೂಕ್ತ ಯೋಜನೆಯಿಲ್ಲದ ನಿರ್ಮಾಣಗಳಿಂದಾಗಿ ನೈಸರ್ಗಿಕ ಚರಂಡಿ ವ್ಯವಸ್ಥೆ ಬ್ಲಾಕ್ ಆಗಿರುವುದರಿಂದ ಅಸ್ಥಿರತೆ ಹಾಗೂ ಭೂಕುಸಿತ ಇನ್ನೂ ಹೆಚ್ಚಾಗಬಹುದು. ಅದರ ಪರಿಣಾಮವಾಗಿ, ಜೋಗಿಮಠ ಪ್ರತಿ ವರ್ಷ 6.5 ಸೆಂಟಿಮೀಟರ್ ದರದಲ್ಲಿ ಕುಸಿಯುತ್ತಿದೆ ಎನ್ನುವುದನ್ನು ಉಪಗ್ರಹ ಚಿತ್ರಗಳು ತೋರಿಸಿಕೊಟ್ಟಿವೆ. ಇದೊಂದು ನೈಸರ್ಗಿಕವಾದ ಪ್ರಕೃತಿ ದುರಂತ ಎಂದು ಹೇಳಿ ಉತ್ತರಾಖಂಡದ ಬಿಜೆಪಿ ಸರಕಾರದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ದಾರಿ ತಪ್ಪಿಸಿದ್ದಾರೆ. ಆದರೆ, ವಾಸ್ತವವಾಗಿ ನಗರದ ಸಮೀಪವೇ ಎನ್‌ಟಿಪಿಸಿ ತಪೋವನ–ವಿಷ್ಣುಗಢದಲ್ಲಿ ನಡೆಸುತ್ತಿರುವ ಜಲವಿದ್ಯುತ್ ಯೋಜನೆ ಮತ್ತು ಜೋಶಿಮಠ–ಬದರಿನಾಥ ಹೆದ್ದಾರಿಯ ಸುರಂಗ ಕೊರೆಯುವ ಚಟುವಟಿಕೆಗಳನ್ನು ಸ್ಥಳೀಯ ಜನರ ಆಕ್ರೋಶದ ಹಿನ್ನೆಲೆಯಲ್ಲಿ ನಿಲ್ಲಿಸಲಾಗಿದೆ ಎನ್ನುವುದು ವಾಸ್ತವ ಸಂಗತಿಯಾಗಿದೆ. ಈ ಪ್ರದೇಶದಲ್ಲಿ ಸ್ಫೋಟ ನಡೆಸುವುದನ್ನು ನಿಷೇಧಿಸಲಾಗಿದೆ. ಆದರೂ ವಿವಿಧ ನಿರ್ಮಾಣ ಸ್ಥಳಗಳಲ್ಲಿ ಸ್ಫೋಟದ ವೇಳೆ ಕುರಿತ ಸೈನ್–ಬೋರ್ಡ್‌ಗಳನ್ನು ಹಾಕಲಾಗಿದೆ ಎಂಬುದನ್ನು ಸ್ಥಳೀಯರು ಗಮನಕ್ಕೆ ತಂದಿದ್ದಾರೆ. ಯಾವುದೇ ಕಣ್ಗಾವಲು ವ್ಯವಸ್ಥೆ ಇಲ್ಲದಿರುವುದರಿಂದ ಈ ಪ್ರದೇಶದಲ್ಲಿ ನಿರ್ಮಾಣ ಚಟುವಟಿಕೆಗಳು ನಡೆಯುತ್ತಿವೆ ಎಂದು ಟಿವಿ ವಾಹಿನಿಗಳು ವರದಿ ಮಾಡಿವೆ. ಇದು ಈ ವಲಯದಲ್ಲಿ ಮೂಲಸೌಕರ್ಯಗಳ ನಿರ್ಮಾಣ ಚಟುವಟಿಕೆಗಳ ಮೇಲೆ ಯಾವುದೇ ನಿಯಂತ್ರಣ ಇಲ್ಲದಿರುವುದನ್ನು ತೋರಿಸುತ್ತದೆ. ಪ್ರಮುಖ ಧಾರ್ಮಿಕ ಸ್ಥಳಗಳನ್ನು ಸಂಪರ್ಕಿಸುವ ಪ್ರಖ್ಯಾತ ಚಾರ್ ಧಾಮ್ ಹೆದ್ದಾರಿಯನ್ನು ಅಗಲಗೊಳಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಅಗಲೀಕರಣ ಕಾರ್ಯ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಮುಂದುವರಿಯಬೇಕೆಂದು ಸೂಚಿಸಿದೆ. ಯಾವುದೇ ನಿರ್ಬಂಧಗಳನ್ನು ಹೇರಬಾರದು ಎಂದಿದೆ. 'ಯಾವ ಬೆಲೆ ತೆತ್ತಾದರೂ ಅಭಿವೃದ್ಧಿ ಸಾಧಿಸುವ' ಈ ಧೋರಣೆಗೆ ಇಂದು ಜೋಷಿಮಠ ಬೆಲೆ ತೆರುತ್ತಿದೆ.

ಜೋಶಿಮಠ ನಗರದ ಇತರ ಭಾಗಗಳು ಕೂಡ ಮುಂಬರುವ ತಿಂಗಳುಗಳು ಹಾಗೂ ವರ್ಷಗಳಲ್ಲಿ ಸಮಸ್ಯೆ ಎದುರಿಸುವ ಸಾಧ್ಯತೆಯಿದೆ. ಕಣಿವೆ ಪಟ್ಟಣ ರುದ್ರಪ್ರಯಾಗದ ಮನೆಗಳು ಮತ್ತು ಇತರ ಕಟ್ಟಡಗಳಲ್ಲಿ ಈಗಾಗಲೇ ದೊಡ್ಡ ದೊಡ್ಡ ಬಿರುಕುಗಳು ಕಾಣಿಸಿಕೊಂಡಿವೆಯೆಂದು ವರದಿಯಾಗಿದೆ. ಜೋಶಿಮಠದ ಈಗಿನ ದುರಂತವನ್ನು ನಿರ್ವಹಿಸಲು ಏನೇ ಕ್ರಮಗಳನ್ನು ಕೈಗೊಂಡಿದ್ದರೂ ದುರ್ಬಲ ಹಿಮಾಲಯ ವಲಯದಲ್ಲಿ ಮೂಲಸೌಕರ್ಯ ಮತ್ತಿತರ ನಿರ್ಮಾಣ ಚಟುವಟಿಕೆಗಳ ಸಮಗ್ರ ಪರಿಶೀಲನೆ ನಡೆಸುವುದು ಅಗತ್ಯವಾಗಿದೆ. ಸ್ಥಳೀಯ ನಿವಾಸಿಗಳು ಮತ್ತು ಪ್ರವಾಸಿಗರಿಗೆ ಹಾನಿಯನ್ನು ಕಡಿಮೆ ಮಾಡುವಂಥ ಪರಿಸರಾತ್ಮಕವಾಗಿ ಸೂಕ್ಷ್ಮವಾದ ಅಭಿವೃದ್ಧಿ ಯೋಜನೆಯನ್ನು ರೂಪಿಸುವುದು ಅತ್ಯಗತ್ಯವಾಗಿದೆ.

ಅನು: ವಿಶ್ವ

ತ್ರಿವರ್ಣಧ್ವಜದ ಕಡುವಿರೋಧಿ ಮತ್ತು ಬ್ರಿಟಿಷರ ಬಂಟರಾಗಿದ್ದ ಹಿಂದೂ ರಾಜರುಗಳ... ಪುಟ 2 ರಿಂದ

ಉಂಟುಮಾಡುವ ಯಾವುದೇ ಚಳುವಳಿಯನ್ನು ಬೆಂಬಲಿಸಲು ಸಾಧ್ಯವಿಲ್ಲ.'

ದೇಶೀ ಸಂಸ್ಥಾನಗಳ ಹಿಂದೂ ರಾಜರುಗಳು ತಮ್ಮ ಹಿಂದುತ್ವ ಯೋಜನೆಯಲ್ಲಿ ಕೈಜೋಡಿಸಿದ್ದಾರೆ ಎಂಬುದನ್ನು ಸಾರ್ವರ್ಕರ್ ಸ್ವಾಗತಿಸಿದ್ದರು. ಇದನ್ನು ಅವರು ಹಿಂದೂ ಮಹಾಸಭಾದ 22ನೇ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ ವ್ಯಕ್ತಪಡಿಸಿದ್ದರು.

ನಾವು ಗಮನಿಸಬೇಕಾದ ಅಂಶವೆಂದರೆ ಸಾರ್ವರ್ಕರ್ ಅವರಿಗೆ ಪ್ರಿಯವಾದ ಹಿಂದೂ ರಾಜರುಗಳು ಬ್ರಿಟಿಷರ ಬಂಟರಾಗಿದ್ದವರು. ಮೊದಲ ಸ್ವಾತಂತ್ರ್ಯ ಸಂಗ್ರಾಮ 1857 ರಲ್ಲಿ ನಡೆದಾಗ ಭಾರತೀಯ ಹೋರಾಟಗಾರರನ್ನು ಸೋಲಿಸಲು ವಿದೇಶಿ ದೊರೆಗಳಿಗೆ ಬೆಂಬಲ ನೀಡಿದ್ದವರು. "ಇದು ಇಡೀ ದೇಶದ ಸೋಲು, ನನ್ನೊಬ್ಬನದ್ದಷ್ಟೇ ಅಲ್ಲ. ಅದು ಸಂಭವಿಸಿದ್ದು ಗೂರ್ಖಾಗಳು, ಸಿಖ್ಖರು ಮತ್ತು ದೇಶೀ ಸಂಸ್ಥಾನಗಳಿಂದಾಗಿ" ಎಂದು ಸ್ವತಃ ಆ ಸ್ವಾತಂತ್ರ್ಯ ಸಂಗ್ರಾಮದ ನೇತಾರರಲ್ಲಿ ಒಬ್ಬರಾದ ಬಿಥೂರಿನ ನಾನಾಸಾಹೇಬ್ ದೇಶದ ಸಾಮಾನ್ಯ ಜನತೆಯನ್ನುದ್ದೇಶಿಸಿ 1858ರಲ್ಲಿ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಭಗತ್ ಸಿಂಗ್‌ರಂತಹ ಕ್ರಾಂತಿಕಾರಿಗಳು ಮತ್ತು ಸಾರ್ವರ್ಕರ್

ಭಗತ್ ಸಿಂಗ್ ಮತ್ತವರ ಸಂಗಾತಿಗಳು ಸಾರ್ವರ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದರು ಮತ್ತು ಸಾರ್ವರ್ಕರ್ ಅವರನ್ನು ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದ ಸಂಕೇತವಾಗಿದ್ದರು ಎಂದು ಪರಿಗಣಿಸಿದ್ದರು ಎಂದು ಹಿಂದುತ್ವ ಸಂಘಟನೆಗಳು ಕೆಲವು ವೇಳೆ ವಾದ ಮಾಡುವುದುಂಟು. ಎಲ್ಲರನ್ನೂ ಒಳಗೊಂಡ ಐಕ್ಯ ಸ್ವಾತಂತ್ರ್ಯ ಹೋರಾಟ ಎಂದು ನಂಬಿ ಹೋರಾಡುತ್ತಿದ್ದ ಸಾರ್ವರ್ಕರ್ ಅವರ ಮೊದಲ ಹಂತದ ರಾಜಕೀಯ ಬದುಕಿನಲ್ಲಿ ಅದು ನಿಜವೇ ಆಗಿತ್ತು. ನಾವು ನೆನಪಿಡಬೇಕಾದ ಸಂಗತಿಯೆಂದರೆ ಸಾರ್ವರ್ಕರ್ ಅವರು ಮೊದಲು ಆರಂಭಿಸಿದ ಕ್ರಾಂತಿಕಾರಿ ಸಂಘಟನೆ ಅಭಿನವ್ ಭಾರತ್ ಮುಸ್ಲಿಮರನ್ನೂ ಸದಸ್ಯರನ್ನಾಗಿ ಹೊಂದಿತ್ತು. ಸಾರ್ವರ್ಕರ್ ಅವರ 1857ನ್ನು ಕುರಿತ ಪುಸ್ತಕವನ್ನು ಬ್ರಿಟಿಷ್ ರಾಜನ ಆಳ್ವಿಕೆಯಿದ್ದಲ್ಲಿ ಪ್ರಕಟಿಸಲು ಅವಕಾಶ ನೀಡಲಿಲ್ಲ. ಅದನ್ನು ರಹಸ್ಯವಾಗಿ ಹಾಲೆಂಡಿನಲ್ಲಿ ಪ್ರಕಟಿಸಲಾಯಿತು. 'ಅಭಿನವ್ ಭಾರತ'ದ ಮುಸ್ಲಿಂ ಸದಸ್ಯರಾಗಿದ್ದ ಸಿಕಂದರ್ ಹಯಾತ್ ಖಾನ್ (ನಂತರದಲ್ಲಿ ಪಂಜಾಬಿನ ಮುಖ್ಯಮಂತ್ರಿ ಯಾದವರು) ಅವರು ಆ ಪ್ರತಿಗಳನ್ನು ತಮ್ಮ ಚೀಲದ ಕೆಳಗಡೆ ಹುಸಿ ಜಾಗದಲ್ಲಿ ಇಟ್ಟುಕೊಂಡು ಯಾರಿಗೂ ಕಾಣದಂತೆ ಅಡಗಿಸಿಕೊಂಡು ತಂದಿದ್ದರು. 93 ಸಾವರ್ಕರ್ ಅವರ ಆ ರೂಪವನ್ನು ಕ್ರಾಂತಿಕಾರಿಗಳು ಒಪ್ಪಿಕೊಂಡಿದ್ದರು. ಈ ಕಾರಣದಿಂದಾಗಿಯೇ ಬ್ರಿಟಿಷ್ ಪೋಲಿಸರು ಭಗತ್ ಸಿಂಗ್ ಮತ್ತು ಅವರ ಜತೆಗಾರರನ್ನು ಸಾರ್ವರ್ಕರ್ ಅವರ 1857ರ ಪುಸ್ತಕದ ನಾಲ್ಕನೇ ಆವೃತ್ತಿಯೊಂದಿಗೆ ಬಂಧಿಸಿದ್ದರು. ಭಗತ್ ಸಿಂಗ್ ಮತ್ತು ಅವರ ಜತೆಗಾರರು ಯಾರೂ ಎಂದೂ ಹಿಂದುತ್ವ ರಾಜಕೀಯವನ್ನು ಒಪ್ಪಿದವರಾಗಿರಲಿಲ್ಲ, ಪ್ರತಿಯಾಗಿ, ಕೋಮುವಾದವನ್ನು ಅವರುಗಳು ಖಡಾಖಂಡಿತವಾಗಿ ತಿರಸ್ಕರಿಸಿದ್ದರು.

(ಮುಂದುವರೆಯುವುದು)



ಗುರುರಾಜ ದೇಸಾಯಿ

**"ಸಾಲ ಮಾಡಿಯಾದ್ರೂ ತುಪ್ಪ ತಿನ್ನು
ಗೋಳು ಪರದಾಟ ಸಾಕಿನ್ನು
ಬದ್ಕೋದ್ ಕಲಿಯೋ ಬಿಕನಾಸಿ
ನಗೋದಕ್ಕು ಯಾಕೆ ಚೌಕಾಸಿ
ನಗಿಸಿ ನಗುವುದೇ ಖುಷಿ"**

ಈ ಸಾಲುಗಳು ದುನಿಯಾ ಸಿನೆಮಾದಲ್ಲಿ ಕೇಳಿರುತ್ತೀರಿ. ನಾವೀಗ ಈ ಹಾಡನ್ನು ಹಾಡುವ ಸ್ಥಿತಿಗೆ ಬಂದು ತಲುಪುತ್ತಿದ್ದೇವೆ. ಅದಕ್ಕೆ ಕಾರಣ ಏನೆಂದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ನಮ್ಮ ಮೇಲೆ ಹೊರಸಿರುವ ಸಾಲದ ಹೊರೆ. ಪ್ರತಿ ಭಾರತೀಯನ ತಲೆ ಮೇಲಿದೆ ರೂ. 1.40 ಲಕ್ಷ ಹೊರೆ!

ಅರೇ ಇದೇನಿದು ಈ ಸಾಲವನ್ನು ನಮ್ಮ ಮೇಲ್ಯಾಕೆ ಹಾಕುತ್ತಿದ್ದಾರೆ ಎಂದು ಪ್ರಶ್ನಿಸಿಕೊಳ್ಳುವ ಧೈರ್ಯ ಮಾಡಲೇಬೇಡಿ. ಆನುವಂಶಿಕ ಕಾಯಿಲೆಯಂತೆ ನವಜಾತ ಶಿಶುವಿಗೂ ಈ ಸಾಲದ ಸಂಬಂಧ ಮಾತ್ರ ತಪ್ಪಿದ್ದಲ್ಲ. ಅಜ್ಜ ಮಾಡಿದ ಸಾಲ ಮೊಮ್ಮಗ ತೀರಿಸಲೇಬೇಕು. ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ, ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ರೂ ಹಾಕುತ್ತೇನೆ ಎಂದು ಹೇಳಿದ್ದರು. ಈಗ 1.40 ಲಕ್ಷ ರೂ ಸಾಲದ ಹೊರೆಯನ್ನು ನಮ್ಮ ಮೇಲೆ ಹಾಕಿದ್ದಾರೆ. ಇದಕ್ಕಿಂತ ಬೇರೆ ಸಂತಸ ಮತ್ತೊಂದು ಇರಲಿಕ್ಕಿಲ್ಲ.

ಈ ಅಂಕಿ ಅಂಶಗಳನ್ನು ಯಾರೋ ಸೃಷ್ಟಿಸಿದ್ದು ಅಲ್ಲ, ಹಣಕಾಸು ಸಚಿವಾಲಯವೇ ಇದನ್ನು ಬಹಿರಂಗಗೊಳಿಸಿದೆ. ಭಾರತದ ಒಟ್ಟು ಸಾಲ ಕಳೆದ ಸೆಪ್ಟೆಂಬರ್ ಅಂತ್ಯದ ವೇಳೆಗೆ 147.19 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ಹಣಕಾಸು ಸಚಿವಾಲಯದ ವರದಿ ತಿಳಿಸಿದೆ. ಜೂನ್ ಅಂತ್ಯದ ವೇಳೆಗೆ 145 ಲಕ್ಷ ಕೋಟಿ ರೂ. ಇತ್ತು. ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ ಸಾಲದ ಮೊತ್ತದಲ್ಲಿ ಎರಡು ಪರ್ಸೆಂಟ್‌ನಷ್ಟು ಏರಿಕೆ ಆಗಿತ್ತ ಬಂದಿದೆ.

ಸಂಸತ್ತಿನಲ್ಲಿ ಇತ್ತೀಚೆಗೆ ಮಂಡನೆಯಾದ ಕೇಂದ್ರ ಸಾರ್ವಜನಿಕ ಸಾಲ ನಿರ್ವಹಣಾ ವರದಿ ಹಾಗೂ ಆರ್‌ಬಿಐ ವರದಿಗಳ ಪ್ರಕಾರ, 2027ರಲ್ಲಿ ಸ್ವದೇಶಿ ಸಾಲ 400 ಲಕ್ಷ ಕೋಟಿ ರೂ. ಹಾಗೂ ವಿದೇಶಿ ಸಾಲ 65 ಲಕ್ಷ ಕೋಟಿ ರೂ. ದಾಟಲಿದೆ. ಸಾಲದ ಬಡ್ಡಿ, ಅಸಲು ಕಂತು ಪಾವತಿಗಾಗಿ ಸಾಲ ಮಾಡಬೇಕಾದ ಹೀನಾಯ ಆರ್ಥಿಕ ಪರಿಸ್ಥಿತಿ ಬಂದೊದಗಲಿದೆ ಎಂಬ ಆತಂಕಕಾರಿ ವಿಚಾರ ಸದನದಲ್ಲಿ ಚರ್ಚೆಯಾಗಿದೆ.

ಸಾಲ ಮಾಡುವುದು ಭಾರತದ ಚಾಳಿ:

ದೇಶ ಸಾಲ ಮಾಡುವುದು ಇವತ್ತು ನಿನ್ನೆಯ ಕಥೆ ಅಲ್ಲ. ಅದಕ್ಕೆ ಸುದೀರ್ಘ ಇತಿಹಾಸ ಇದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ 67 ವರ್ಷಗಳಲ್ಲಿ 26 ಲಕ್ಷ ಕೋಟಿ ರೂ. ವಿದೇಶಿ ಸಾಲ, 50 ಲಕ್ಷ ಕೋಟಿ ರೂ. ಸ್ವದೇಶಿ ಸಾಲ ಸಹಿತ ಒಟ್ಟಾರೆ ಇದ್ದ 76 ಲಕ್ಷ ಕೋಟಿ ರೂ. ಸಾಲದ ಹೊರೆ ದೇಶದ ಮೇಲೆ ಇತ್ತು. ಕಳೆದ ಎಂಟು ವರ್ಷಗಳಲ್ಲಿ ವಿದೇಶಿ ಸಾಲ 49 ಲಕ್ಷ ಕೋಟಿ ರೂ, ಸ್ವದೇಶಿ ಸಾಲ 147 ಲಕ್ಷ ಕೋಟಿ ರೂ. ಒಟ್ಟು 196 ಲಕ್ಷ ಕೋಟಿ ರೂ. ಸಾಲ ಈಗ ಭಾರದ ಮೇಲಿದೆ. ಪ್ರತಿಯೊಬ್ಬ ಭಾರತೀಯನ ತಲೆ ಮೇಲೆ ಯುಪಿಎ ಅವಧಿಯಲ್ಲಿ 63,583 ರೂ. ಸಾಲದ ಹೊರೆ ಇತ್ತು ಈಗ ಎನ್‌ಡಿಎ

ಸಂಸತ್ತಿನಲ್ಲಿ ಇತ್ತೀಚೆಗೆ ಮಂಡನೆಯಾದ ಕೇಂದ್ರ ಸಾರ್ವಜನಿಕ ಸಾಲ ನಿರ್ವಹಣಾ ವರದಿ ಹಾಗೂ ಆರ್‌ಬಿಐ ವರದಿಗಳ ಪ್ರಕಾರ, 2027ರಲ್ಲಿ ಸ್ವದೇಶಿ ಸಾಲ 400 ಲಕ್ಷ ಕೋಟಿ ರೂ. ಹಾಗೂ ವಿದೇಶಿ ಸಾಲ 65 ಲಕ್ಷ ಕೋಟಿ ರೂ. ದಾಟಲಿದೆ. ಸಾಲದ ಬಡ್ಡಿ, ಅಸಲು ಕಂತು ಪಾವತಿಗಾಗಿ ಸಾಲ ಮಾಡಬೇಕಾದ ಹೀನಾಯ ಆರ್ಥಿಕ ಪರಿಸ್ಥಿತಿ ಬಂದೊದಗಲಿದೆ ಎಂಬ ಆತಂಕಕಾರಿ ವಿಚಾರ ಸದನದಲ್ಲಿ ಚರ್ಚೆಯಾಗಿದೆ.

ಅವಧಿಯಲ್ಲಿ 8 ವರ್ಷಗಳಲ್ಲಿ 1.40 ಲಕ್ಷ ರೂ.ಗಳಿಗೆ ಹೆಚ್ಚಿದೆ. ಇನ್ನೂ ಎರಡು ವರ್ಷದ ಅವಧಿಯಲ್ಲಿ ಈ ಸಾಲದ ಹೊರೆ ಹೆಚ್ಚಾಗಲಿದೆ.

ಯಾರಿಂದ ಹೆಚ್ಚಾಯ್ತು ಭಾರತದ ಸಾಲ..? ಯಾರಿಂದ ಹೆಚ್ಚಾಯ್ತು ಭಾರತದ ಸಾಲ..? ಮೋದಿ ಸರ್ಕಾರ ಮಾಡಿದ್ದೆಷ್ಟು, ಮನಮೋಹನ್ ಸಿಂಗ್ ಮಾಡಿದ ಸಾಲವೆಷ್ಟು? ಎಂಬ ಚರ್ಚೆಗಳು ಈಗ ಕೇಳಿ ಬರುತ್ತಿವೆ. ಹಿಂದಿನ ಸಾಲದ ಲೆಕ್ಕಾಚಾರವನ್ನೊಂದಿಷ್ಟು ನೋಡೋಣ.

2004 ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಅವಧಿ ಮುಗಿದಾಗ ಭಾರತದ ಒಟ್ಟು ವಿದೇಶಿ ಸಾಲ 5 ಲಕ್ಷ ಕೋಟಿ ರೂಪಾಯಿ ಇತ್ತು. 2004ರ ಚುನಾವಣೆಯ ನಂತರ ಕಾಂಗ್ರೆಸ್ ನ ಮನಮೋಹನ್ ಸಿಂಗ್ ಪ್ರಧಾನಿಯಾದಾಗ 5 ಲಕ್ಷ ಕೋಟಿಯಿದ್ದ ಭಾರತದ ವಿದೇಶಿ ಸಾಲ ಮನಮೋಹನ್ ಸಿಂಗ್ ಅವರ ಮೊದಲ ಅವಧಿ ಮುಗಿಯುವಷ್ಟರಲ್ಲಿ ದುಪ್ಪಟ್ಟಾಗಿತ್ತು. 2004 ರಲ್ಲಿ ಭಾರತದ ಸಾಲ ಸ್ವದೇಶಿ 18.14 ಲಕ್ಷ ಕೋಟಿ, ವಿದೇಶಿ 5 ಲಕ್ಷ ಕೋಟಿ ಒಟ್ಟು 23. 14 ಲಕ್ಷ ಕೋಟಿಯಷ್ಟು ಸಾಲ ಇತ್ತು. 2009ರ ಚುನಾವಣೆಯ ನಂತರ ಮನಮೋಹನ್ ಸಿಂಗ್ ಮತ್ತೊಮ್ಮೆ ದೇಶದ ಪ್ರಧಾನಿಯಾದರು. 2014ರಲ್ಲಿ ಭಾರತದ ಒಟ್ಟು ವಿದೇಶಿ ಸಾಲ 26.7 ಲಕ್ಷ ಕೋಟಿ , ಸ್ವದೇಶಿ ಸಾಲ 49 ಲಕ್ಷ ಕೋಟಿ ರೂಗೆ ಮುಟ್ಟಿತ್ತು. ಒಟ್ಟು 76 ಲಕ್ಷ ಕೋಟಿ ರೂನಷ್ಟು ಸಾಲ ಭಾರದ ಮೇಲೆ ಇತ್ತು.

2014ರ ಚುನಾವಣೆಯಲ್ಲಿ ನರೇಂದ್ರ ಮೋದಿ **(Narendra Modi)** ಪ್ರಧಾನಿಯಾಗಿ ಆಯ್ಕೆಯಾದರು. 2014 ರಿಂದ 2019 ರವರೆಗೆ ಮೋದಿ ಸರಕಾರದ ಮೊದಲ ಅವಧಿಯಲ್ಲಿ 37 ಲಕ್ಷ ಕೋಟಿ ರೂ ವಿದೇಶಿ ಸಾಲ, 56 ಲಕ್ಷ ಕೋಟಿ ರೂ ನಷ್ಟು ಸ್ವದೇಶಿ ಸಾಲ ಸೇರಿ ಒಟ್ಟು 93 ಲಕ್ಷ ಕೋಟಿ ರೂ ಸಾಲ ಭಾರತದ ಮೇಲೆ ಬಿತ್ತು. ಮೋದಿ 2019ರಲ್ಲಿ ಮತ್ತೊಮ್ಮೆ ಪ್ರಧಾನಿಯಾಗಿ 3 ವರ್ಷಗಳಾಗಿವೆ 2019 ರಿಂದ 2022 ರ ವರೆಗೆ 49 ಲಕ್ಷ ಕೋಟಿ ರೂ ವಿದೇಶಿ ಸಾಲ, 147 ಲಕ್ಷ ಕೋಟಿ ರೂ ಸ್ವದೇಶಿ ಸಾಲ ಸೇರಿ ಒಟ್ಟು 196 ಲಕ್ಷ ಕೋಟಿ ರೂ. ತಲುಪಿದೆ. ಇವರಿಬ್ಬರ ಆಡಳಿತದ ಕಾಲದಲ್ಲಿ ಸಾಲ ಹೆಚ್ಚಳ ಯಾರದು ಎಂಬುದು ಸ್ಪಷ್ಟವಾಗಿ ಗೊತ್ತಾಗಿದೆ. ಮನಮೋಹನ್ ಸಿಂಗ್ ಆಡಳಿತಕ್ಕೆ ಹೋಲಿಸಿದರೆ ಪ್ರಧಾನಿ ಮೋದಿ ಆಡಳಿತದಲ್ಲಿ ಸ್ವದೇಶಿ ಸಾಲವು 97.40 ಲಕ್ಷ ಕೋಟಿ ರೂ. ಹಾಗೂ ವಿದೇಶಿ ಸಾಲವು 22.3 ಲಕ್ಷ ಕೋಟಿ ರೂ.ಗಳಷ್ಟು ಹೆಚ್ಚಳ ಕಂಡಿದೆ.

ಭಾರತ ಇನ್ನೊಂದು ಶ್ರೀಲಂಕಾ ಆಗದಿರಲಿ:

ಭಾರತದ ಬಳಿಯಲ್ಲೇ ಇರುವ ಪುಟ್ಟ ರಾಷ್ಟ್ರ ವಿದೇಶಿ ಸಾಲದ ಸುಳಿಗೆ ಸಿಲುಕಿಕೊಂಡು ನರಳಾಡುತ್ತಿರುವುದು ಗೊತ್ತೇ ಇದೆ. ಶ್ರೀಲಂಕಾ ದಿವಾಳಿಯಾದ ಬೆನ್ನಲ್ಲಿಯೇ ಭಾರತದ ವಿದೇಶಿ ಸಾಲದ ಬಗ್ಗೆಯೋ ದೊಡ್ಡ ಮಟ್ಟದ ಚರ್ಚೆ ಆಗುತ್ತಿದೆ. ಶ್ರೀಲಂಕಾಕ್ಕೆ ಒದಗಿದ ಸಂಕಷ್ಟ ಭಾರತದಲ್ಲಿ ಉದ್ಭವಿಸಿದರೂ ಅಚ್ಚರಿ ಪಡಬೇಕಿಲ್ಲ ಎಂದು ಆರ್ಥಿಕ ತಜ್ಞರು ಹೇಳುತ್ತಲೇ ಇದ್ದಾರೆ.

ಶ್ರೀಲಂಕಾದಲ್ಲಿ ಆರ್ಥಿಕತೆ ಪೂರ್ಣ ಕುಸಿದಿರುವ ಕಾರಣ ವಿದೇಶಿ ವಿನಿಮಯ(Foreign Exchange) ಸಂಗ್ರಹ ಪೂರ್ತಿ ಕರಗಿಹೋಗಿದೆ. ಹೀಗಾಗಿ ವಿದೇಶಗಳಿಂದ ಯಾವುದೇ ವಸ್ತುಗಳ ಖರೀದಿಗೆ ಅಗತ್ಯವಾದ ವಿದೇಶಿ ಕರೆನ್ಸಿ ಇಲ್ಲದ ಕಾರಣ, ಆಹಾರ, ವಿದ್ಯುತ್, ನೀರು, ಪೆಟ್ರೋಲ್ ಇಲ್ಲದೆ ಲಂಕಾದ ಜನ ತತ್ತರಿಸಿ ಹೋಗಿದ್ದರು. ಭಾರತದ ಇಂದಿನ ಸ್ಥಿತಿ ನೋಡಿದರೆ ಅಂತಹ ಸಂದರ್ಭಗಳು ಹೆಚ್ಚಾಗುವ ಸಾಧ್ಯತೆಗಳು ಇವೆ.

ಮಾಡಿದ ಸಾಲವನ್ನು ಕೇಂದ್ರ ಸರಕಾರ ತೀರಿಸಲು ಯೋಜನೆ ರೂಪಿಸಬೇಕಿದೆ.

ರಾಜ್ಯದ ಸಾಲವೆಷ್ಟು?:

ಕರ್ನಾಟಕ ರಾಜ್ಯ ಸರಕಾರ 5.18 ಲಕ್ಷ ಕೋಟಿ ರೂ. ಸಾಲದ ಸುಳಿಯಲ್ಲಿ ಆಡಳಿತ ನಡೆಸುತ್ತಿದೆ. 2018, 19 ರಲ್ಲಿದ್ದ 2.42 ಲಕ್ಷ ಕೋಟಿ ರೂ. ಸಾಲದ ಹೊರೆ 2022 –23ರಲ್ಲಿ 5.18 ಲಕ್ಷ ಕೋಟಿ ರೂ. ಮುಟ್ಟಿದೆ. ಅದೇ 2023–24ಕ್ಕೆ ರಾಜ್ಯದ ಒಟ್ಟು ಸಾಲ ಅಂದಾಜು 5,73,790 ಕೋಟಿ ರೂ. ತಲುಪಲಿದೆ. ಅದೇ 2024–25ರಲ್ಲಿ ರಾಜ್ಯದ ಒಟ್ಟು ಸಾಲದ ಹೊರೆ 6,42,578 ಕೋಟಿ ರೂ.ಗೆ ತಲುಪುವ ಅಂದಾಜು ಮಾಡಲಾಗಿದೆ. 2022–23ರಲ್ಲಿ ರಾಜ್ಯ ಸರ್ಕಾರ ಸುಮಾರು 75,000–80,000 ಕೋಟಿ ರೂ. ಸಾಲ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ರಾಜ್ಯವು 6.89 ಕೋಟಿ ಜನಸಂಖ್ಯೆ ಹೊಂದಿದ್ದು, ಪ್ರತಿಯೊಬ್ಬ ಕನ್ನಡಿಗನ ಮೇಲೆ 66,763 ರೂ. ಆರ್ಥಿಕ ಹೊರೆಯಿದೆ. ಕೇಂದ್ರ ಸರಕಾರ ಮಾಡಿದ ಸಾಲದ ತಲಾವಾರು ಸಾಲವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಪ್ರತಿಯೊಬ್ಬ ಕನ್ನಡಿಗನೂ ಬರೋಬ್ಬರಿ 1,63,819 ರೂ. ಸಾಲ ಹೊಂದಿದ್ದಾನೆ ಎಂಬುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರವಾಗಿದೆ.

ಈ ಪ್ರಮಾಣದಲ್ಲಿ ಸಾಲ ಮಾಡಲು ಕಾರಣವೇನು ಎಂಬ ಅಂಶಗಳನ್ನು ಬೆನ್ನತ್ತಿ ಹೋದಾಗ ಸಿಕ್ಕ ಉತ್ತರ ಅಚ್ಚರಿ ಮೂಡಿಸುತ್ತವೆ. ಕೋವಿಡ್ ನಿರ್ವಹಣೆಗಾಗಿ, ಜನಪರ ಯೋಜನೆಗಳಿಗಾಗಿ ಸಾಲವನ್ನು ಮಾಡಲಾಗಿದೆ ಎಂದು ಸರಕಾರ ತನ್ನ ಸಾಲದ ಲೆಕ್ಕಾಚಾರವನ್ನು ಜನರ ಮುಂದಿಟ್ಟಿದೆ. ಆದರೆ, ಈ ಸಾಲ ಯಾವ ಜನಪರ ಯೋಜನೆಗಳಿಗೆ ಬಳಕೆಯಾಗಿದೆ ಎಂಬುದು ಮಾತ್ರ ಕಾಣುತ್ತಿಲ್ಲ. ಸಾಲವೂ ಏರಿಕೆ, ತೆರಿಗೆಯೂ ಏರಿಕೆ. ಆ ಎಲ್ಲ ಹಣ ಹೋಗುತ್ತಿರುವುದು ಎಲ್ಲಿಗೆ? ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಈ ಸಾಲವನ್ನು ತೀರಿಸಲು ಸರಕಾರ ನಮ್ಮ ಮೇಲೆ ಇನ್ನಷ್ಟೂ ಹೊರೆ ಹೇಗೆ ಹಾಗಬಹುದು? ಯೋಚಿಸದರೆ ನಿದ್ದೆಯೂ ಬರುವುದಿಲ್ಲ. ನೆಮ್ಮದಿಯ ನಾಳೆಗಳು ಬೇಕು ಎನ್ನುವುದಾರೆ, ನಿದ್ದೆಯು ನಮಗಿಲ್ಲ ಇದ್ದೇಳಿ ಎಂಬ ಘೋಷಣೆ ನಮ್ಮೊಳಗೆ ಮೊಳಗುತ್ತಿರಬೇಕಿದೆ. ಸರ್ಕಾರವು ತನ್ನ ಸಾಲದ ಮೇಲಿನ ಬಡ್ಡಿಗೆ ಪ್ರತಿ ತಿಂಗಳು ರೂ. 81000 ಕೋಟಿಗಿಂತ ಹೆಚ್ಚು ಖರ್ಚು ಮಾಡುತ್ತಿದೆ ಎಂಬ ಸತ್ಯವನ್ನು ಜನರಿಗೆ ತಿಳಿಸಬೇಕಿದೆ. ಸಾಲದ ಸುಳಿಯಲ್ಲಿ ಸಿಲುಕಿಸಿದ ಸರಕಾರಗಳನ್ನು ಏನು ಮಾಡಬೇಕು ಎಂಬುದನ್ನು ಈ ಕ್ಷಣದಿಂದಲೇ ಯೋಚಿಸಬೇಕಿದೆ.

ಸಾಲದ ಮೀಟರ್

(ಲಕ್ಷ ಕೋಟಿ ರೂ.)

ವಿದೇಶಿ ಸಾಲ		ಸ್ವದೇಶಿ ಸಾಲ	
2004	5	2004	18.14
2009	10	2014	49
2014	26	2017	56
2019	37	2021	96
2022	49	2022	147



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, 13 ನೇ ರಾಷ್ಟ್ರೀಯ ಸಮ್ಮೇಳನ ತಿರುವನಂತಪುರ, ಕೇರಳ



ಸಮತೆ, ಮಮತೆಗಳ ಒಡಲ ಕಿಡಿಗಳ ದಿಟ್ಟ ಹೆಜ್ಜೆ, ಗಟ್ಟಿ ಧ್ವನಿ

ಡಾ.ಮೀನಾಕ್ಷಿ ಬಾಳಿ

ಕಣ್ಣು ಹರಿದಷ್ಟು ಬಾನೆತ್ತರಕ್ಕೆ ಫಡಫಡಾಯಿಸುತ್ತಿರುವ ಬಿಳಿ ಬಾವುಟಗಳು. ಎಲ್ಲೆಲ್ಲೂ ಲಕ್ಷ್ಮೀ ಸೆಹಗಲ್, ಸುಶೀಲಾ ಗೋಪಾಲನ್, ಮಲ್ಲು ಸ್ವರಾಜ್ಯಂ, ಗೌರಿ ಅಮ್ಮ ಮುಂತಾದ ಧೀರೋದ್ದಾತ ನಾಯಕಿಯರ ಫ್ಲೆಕ್ಸ್‌ಗಳು, ದಾರಿಯುದ್ದಕ್ಕೂ ಪ್ರಜಾಪ್ರಭುತ್ವ, ಸಮಾನತೆ, ಮಹಿಳಾ ವಿಮೋಚನೆ ಎಂಬ ಘೋಷಣೆಗಳು, ಮಾರ್ಗದ ಇಕ್ಕೆಲಗಳಲ್ಲೂ ಪ್ರತಿನಿಧಿಗಳಿಗೆ ಶುಭಾಶಯ ಕೋರುತ್ತಿದ್ದ ಕೋಟಿ ಕಂಠಗಳ ಕಲರವ. ಹೀಗೆ ಇಡೀ ನೆಲವೆಂಬ ನೆಲವು ಹೋರಾಟದ ಆಡಂಬೊಲವಾಗಿ ಕಂಗೊಳಿಸುತ್ತಿತ್ತು. ಈಗ ನೀವು ಊಹಿಸಿರಬಹುದು. ಅದು ಯಾವ ನೆಲವಾಗಿರಬಹುದು ಅಂತ. ನಿಮ್ಮ ಊಹೆ ಸರಿಯಾಗಿಯೇ ಇದೆ. ಅದು ಕೇರಳದ ಪ್ರಕೃತಿರಮ್ಯ ಕ್ರಾಂತಿ ನೆಲವೇ ಆಗಿತ್ತು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 13 ನೇ ರಾಷ್ಟ್ರೀಯ ಸಮ್ಮೇಳನದ ಭರಪೂರ ಸಂಭ್ರಮವು ಕೇರಳದ ರಾಜಧಾನಿ ತಿರುವನಂತಪುರಂನಲ್ಲಿ ಮನೆ ಮಾಡಿತ್ತು.

ಭಾರತದ ಭೂಪಟದಲ್ಲಿ ಕೆಂಪು ಮೆಣಸಿನಕಾಯಿಯಂತೆ ಕಾಣಿಸಿಕೊಳ್ಳುವ ಪುಟ್ಟ ರಾಜ್ಯ ಕೇರಳ. ಅದು ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ನದಿ, ನದ, ಬೆಟ್ಟ, ಕಾನನ, ಕೊರಳಿಗೆ ಸುತ್ತುವರೆದ ನೆಕ್ಲೆಸ್ ನಂತಿರುವ ಸಮುದ್ರಗಳಿಂದಾಗಿ ಭೂಮಡಿಲಿನ ಅದ್ಭುತ ರಮ್ಯ ಕಾಂತೆಯಾಗಿ ಕಂಗೊಳಿಸುತ್ತಿದೆ. ತಮ್ಮ ನಾಡನ್ನು ಅಸೀಮವಾಗಿ ಪ್ರೀತಿಸುವ ಕೈರಳಿಯರು ಅದನ್ನು ದೇವರ ಸ್ವಂತ ನಾಡೆಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುತ್ತಾರೆ. ನಮಗೆ ಮಾತ್ರ ಅದು ಚಿರಸ್ಮರಣೆಯ ಕಣ್ಣೂರಿನ ಅಪ್ಪು, ಚಿರಕಂಡರ ಕ್ರಾಂತಿ ನೆಲವಾಗಿಯೇ ಇದಿರಾಗುತ್ತದೆ. ಆ ಅವರ ಸಮತೆಯ ಕ್ರಾಂತಿ ಕಣ್ಣುಗಳಲ್ಲಿನ ಜ್ಯೋತಿ ಎಂದೆಂದಿಗೂ ಬತ್ತುವುದೇ ಇಲ್ಲ ಎಂಬ ಅಚಲಭಾವ ಅಲ್ಲಿನವರ ಕಣ್ಣುಗಳಲ್ಲಿ ಮಿನಮಿನುಗುವುದನ್ನು ಕಣ್ಣಾರೆ ಕಾಣಲು ನಮಗೆ ಸಾಧ್ಯವಾಗಿಸಿದ್ದು ಜನವಾದಿಯ 13 ನೇ ರಾಷ್ಟ್ರೀಯ ಸಮ್ಮೇಳನ.

2023 ನೇ ಜನೇವರಿಯ 6–9 ರವರೆಗೆ ತಿರುವನಂತಪುರಂನ ಟ್ಯಾಗೋರ ಥೇಟರ್ ನಲ್ಲಿ ನಡೆದ ಸಮ್ಮೇಳನ ನಿಜಕ್ಕೂ ಅವಿಸ್ಮರಣೀಯ. ದೇಶದ 25 ರಾಜ್ಯಗಳಿಂದ 855 ಪ್ರತಿನಿಧಿಗಳು ದೂರದ ಕಾಶ್ಮೀರದಿಂದ ತುತ್ತ ತುದಿಯ ಕನ್ಯಾಕುಮಾರಿಯವರೆಗೆ ಆಗಮಿಸಿದ್ದರು. ಹಲವು ಭಾಷೆ ಹಲವು ವೇಷಗಳ ಅವರು ನೋಂದಣಿ ಮಾಡಿಸಿಕೊಳ್ಳುತ್ತಿದ್ದ ಪರಿಯೇ ಮನಮೋಹಕ ವಾಗಿತ್ತು. ಮಿನಿ ಭಾರತ ಯಾವುದೇ ಬೇಧ, ತಾರತಮ್ಯ, ವೈಷಮ್ಯಗಳಿಲ್ಲದೆ ಬೆರೆತು ಬೇರಾಗದಂತೆ ಬೆಸೆದುಕೊಂಡಿದ್ದ ಆ ದೃಶ್ಯ ನಿಜಕ್ಕೂ ದೇಶವೊಂದು ಇರಬೇಕಾದುದು ಹೀಗೆ ಎಂಬುದನ್ನು ಸಾರುವಂತಿತ್ತು. ನೋಂದಣಿಯೊಂದಿಗೆ 1981 ರಲ್ಲಿ ಚೈನ್ನೈನಲ್ಲಿ ನಡೆದ ಪ್ರಥಮ ಸಮ್ಮೇಳನದಿಂದ ಇಲ್ಲಿಯವರೆಗೆ ನಡೆದ 12 ಸಮ್ಮೇಳನಗಳ ಪ್ರತೀಕವಾಗಿ 12 ರಾಜ್ಯಗಳಿಂದ ತಂದಿದ್ದ 12 ಜ್ಯೋತಿ ಜ್ವಾಲೆಗಳು ಝಗಮಗಿಸುತ್ತ “ನಾರಿ ಏಕತಾ ಜಿಂದಾಬಾದ್” “ಜುಲ್ಮಿ ಜಬ್ ಜಬ್ ಜುಲ್ಮ ಕರೇಗಾ ಸತ್ತಾ ಕೀ ಗಲಿಯಾರೋಂ ಸೇ। ಚಪ್ಪಾ ಚಪ್ಪಾ ಗೂಂಜ್ ಉಠೇಗಾ ಇನ್ಕಿಲಾಬ್ ಕೇ



ನಾರೋಂಸೇ” ಎಂಬ ಘೋಷಣೆಯೊಂದಿಗೆ ಕ್ರಾಂತಿಯ ಅಂಗಳಕ್ಕೆ ಬಂದು ನಿಂತರು. ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ ಅವರು ಜನವಾದಿಯ ಧ್ವಜವನ್ನು ಹಾರಿಸುವುದರೊಂದಿಗೆ ಸಮ್ಮೇಳನಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮರಿಯಂ ಧಾವಳೆ, ಉಪಾಧ್ಯಕ್ಷೆ ಸುಭಾಷಿಣಿ ಅಲಿ, ಬೃಂದಾ ಕಾರಟ್, ಕೇರಳದ ಜನಪ್ರಿಯ ಶಾಸಕಿ ಶೈಲಜಾ ಟೀಚರ್, ಪಿ. ಕೆ.ಶ್ರೀಮತಿ, ಉಪಸ್ಥಿತರಿದ್ದು ಕ್ರಾಂತಿಕಾರಿ ಘೋಷಣೆಗಳನ್ನು ಮುಗಿಲು ಮುಟ್ಟಿಸಿದರು. ಏಕ ಕಾಲಕ್ಕೆ ಕನ್ನಡ, ತೆಲಗು, ತಮಿಳು, ಮಲೆಯಾಳಿ, ಹಿಂದಿ ರಾಜಸ್ಥಾನಿ, ಗುಜರಾತಿ, ಅವಧಿ, ಬಿಹಾರಿ, ಭೋಜಪುರಿ, ಮರಾಠಿ, ಆಸ್ಸಾಮಿ, ಕೊಕ್ ಬರೋಕ್, ಬಂಗಾಲಿ, ಕಾಶ್ಮೀರಿ, ಪಂಜಾಬಿ ಇತ್ಯಾದಿ ಭಾಷೆಗಳಲ್ಲಿ ಅವರದೇ ಧ್ವನಿಕಾಕುಗಳೊಂದಿಗೆ ಹೇಳುತ್ತಿದ್ದ ಘೋಷಣೆಗಳು ಅನುಪಮ ಚೇತೋಹಾರಿ ವಾತಾವರಣವನ್ನು ನಿರ್ಮಿಸಿದವು. ಪರಸ್ಪರರ ಭಾಷೆ ತಿಳಿಯುತ್ತಿರಲಿಲ್ಲವಾದರೂ ಪ್ರತಿನಿಧಿಗಳ ನಡುವೆ ಭಾಷೆ ಮೀರಿದ ಆತ್ಮೀಯ ಭಾವವೊಂದು ರಿಂಗುಣಿಸತೊಡಗಿತ್ತು. ಭಾವಕ್ಕೆ ಭಾಷೆಯ ಹಂಗಿಲ್ಲ. ಹೃದಯದಲ್ಲಿ ದ್ವೇಷಕ್ಕೆ ಎಡೆಯಿಲ್ಲ. ನುಡಿಯಲ್ಲಿ ನಂಜಿಲ್ಲದ ಅಪರೂಪದ ಸ್ವಾಭಿಮಾನ ಘಮಲು ಅಲ್ಲಿ ಕಾಲೂರಿತ್ತು. ಘೋಷಣೆಗಳೊಂದಿಗೆ ಹುತಾತ್ಮಸ್ಥಂಭಕ್ಕೆ ಪುಷ್ಪ ನಮನ ಸಲ್ಲಿಸಿ ನಾಯಕಿಯರೊಂದಿಗೆ ಒಳಾಂಗಣಕ್ಕೆ ಬರಲಾಯಿತು.

ಕಥಕ್ ಶೈಲಿಯ ಕೈರಳಿ ಸಂಸ್ಕೃತಿ ಬಿಂಬಿಸುವ ಕ್ರಾಂತಿ ಗೀತೆಯೊಂದಿಗೆ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು. ಉದ್ಘಾಟನಾ ಸಮಾರಂಭದ ಪೂರ್ವದಲ್ಲಿ ಅಗಲಿದ ಚೇತನಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಲ್ಲು ಸ್ವರಾಜ್ಯಂ, ಮೈಥಿಲಿ ಶಿವರಾಮನ್, ಜೋಸೈಫಿನ್, ಗೌರಿ ಅಮ್ಮ, ಬೀಭಾ ಗೋಸ್ವಾಮಿ, ಪ್ರಮೀಲಾ ಫಂದೆ, ರಜನಿ ನಿರುಲಾ, ಮಾಧುರಿ ಬರ್ಮನ್ ಮುಂತಾದವರನಲ್ಲದೆ ಜಗತ್ತಿನ ತುಂಬ ಹರಡಿಕೊಂಡಿದ್ದು ಈ ನಡುವೆ ಅಗಲಿ ಹೋದ ಸಮಾಜವಾದಿ ಸಂಗಾತಿಗಳು, ದೇಶದ ನಾಯಕರು, ಕವಿ, ಕಲಾವಿದರು, ಮಾನವ ಹಕ್ಕುಗಳ ಹೋರಾಟಗಾರರು ಇತ್ಯಾದಿ ಐದು ನೂರಕ್ಕೂ ಹೆಚ್ಚು ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಉದ್ಘಾಟನೆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ದೂರದ ಕ್ಯೂಬಾ ದೇಶದಿಂದ ಆಗಮಿಸಿದ್ದ ವಿಶ್ವಕ್ರಾಂತಿಯ ಅಪ್ರತಿಮ ನಾಯಕ ಚೆ ಗುವೆರಾ ಅವರ ಮಗಳಾದ ಅಲಿಡಾ ಚೆ ಗುವೆರಾ ಅವರು ಸಭೆಯಲ್ಲಿ ಮಿಂಚಿನ ಸಂಚಲನ ಮೂಡಿಸಿದರು. ಅವರು ಮಾತನಾಡುತ್ತ ಕೆರೆಬಿಯನ್ ಸಂಸ್ಕೃತಿಯು ಕೈರಳಿ ಸಂಸ್ಕೃತಿಯಲ್ಲಿ ಸಂಗಮಿಸಿದನ್ನು ನೆನೆಸಿಕೊಂಡರು. ತಮ್ಮದು ಸ್ಪಾನಿಸ್, ಬ್ಲ್ಯಾಕಿಸ್, ಚೈನಿಸ್, ಇಂಡೋಜಿನಿಯಸ್ ಇತ್ಯಾದಿ ಸಂಸ್ಕೃತಿಗಳ ಮಿಶ್ರಣವಾಗಿದೆ ಎಂದು ವಿವರಿಸುತ್ತ ತಮ್ಮ ನಾಡಿನಲ್ಲಿ ಮಹಿಳಾ ವಿಮೋಚನೆಗಾಗಿ ನಡೆಸಿದ ಹೋರಾಟಗಳನ್ನು ವಿವರಿಸಿದರು. ಮುಂದುವರೆದು ಸದ್ಯ ತಮ್ಮ ದೇಶದ ಮಹಿಳೆಯರು ಶಿಕ್ಷಣ, ಉದ್ಯೋಗ, ರಾಜಕಾರಣ, ಆದಾಯ, ಸಂಸ್ಕೃತಿ ಎಲ್ಲವೂಗಳಲ್ಲಿ ಮುಂದುವರೆದ ದೇಶಗಳಿಗಿಂತ ಉನ್ನತ ಸ್ಥಾನದಲ್ಲಿ ಇದ್ದುದನ್ನು ಅಂಕಿ ಅಂಶಗಳೊಂದಿಗೆ ಸಾದರ ಪಡಿಸಿದರು. ಅತ್ಯಂತ ಸ್ಫೂರ್ತಿದಾಯಕ, ಅನುಕರಣಿಯ ವಿಷಯಗಳನ್ನು ಅವರು ಧೀರೋದಾತ್ತತೆಯಿಂದ ಮಂಡಿಸಿದರು. ಅಲಿಡಾ ಫ್ರೆಂಚ್ ಭಾಷೆಯಲ್ಲಿ ಆಡಿದ್ದನ್ನು ಮಧುರಾ ಸ್ವಾಮಿನಾಥನ್ ಇಂಗ್ಲೀಷೀಕರಿಸಿದರು.

ನಂತರ ನಮ್ಮ ನಾಯಕಿ ಬೃಂದಾ ಕಾರಟ್ ಅವರು ಆಶಯ ಭಾಷಣ ಮಾಡಿದರು. 1981 ರಲ್ಲಿ 11 ಲಕ್ಷ ಸದಸ್ಯತ್ವದಿಂದ ಆಧಿಕೃತವಾಗಿ ಪ್ರಾರಂಭವಾಗಿರುವ ಜನವಾದಿ ಮಹಿಳಾ ಸಂಘಟನೆಯು ಇಂದು 1 ಕೋಟಿಯವರೆಗೆ ಸದಸ್ಯತ್ವ ಹೊಂದಿರುವ ರೋಚಕತೆಯನ್ನು ಅವರು ಕಟ್ಟಿಕೊಟ್ಟರು. ಆದರೆ ಇಂದು ದೇಶದಲ್ಲಿ ಕಾಣಿಸಿಕೊಳ್ಳುತ್ತಿರುವ ಭಯಾನಕ ವಾತಾವರಣವನ್ನು, ಮಹಿಳೆಯರ ಮೇಲಾಗುತ್ತಿರುವ ದಾಳಿಗಳನ್ನು ಕುರಿತು ಕಳವಳ ವ್ಯಕ್ತಪಡಿಸಿದರು. ಮನುವಾದಿ ಸಂಘಿಗಳು ಮಹಿಳೆಯರನ್ನೆ ಗುರಿಯಾಗಿಸಿಕೊಂಡು ನಡೆಸುತ್ತಿರುವ ಬರ್ಬರಿಕ ದಾಳಿಗಳನ್ನು ನಿರ್ನಾಮ ಮಾಡಲು ಜನವಾದಿ ಕಾರ್ಯಕರ್ತರು ಸಂಕಲ್ಪ ತೊಡಬೇಕಿದೆ. ನಮ್ಮಿಂದ ಮಾತ್ರ ಸಂಘಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ ಎಂಬುದಾಗಿ ಉದ್ಘೋಷಿಸಿದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಪಿ.ಕೆ ಶ್ರೀಮತಿಯವರು ಸ್ವಾಗತ ಕೋರಿದರೆ ರಾಷ್ಟ್ರೀಯ ಅಧ್ಯಕ್ಷರಾದ ಮಾಲಿನಿ ಅವರು ಅಧ್ಯಕ್ಷೀಯ ಮಾತುಗಳನ್ನಾಡುತ್ತ ಸಂಘಟನೆಯ ಕಟ್ಟಾಳುಗಳಾಗಿರುವ ದುಡಿಯುವ ವರ್ಗದ ಮಹಿಳೆಯರ ತ್ಯಾಗ–ಬಲಿದಾನಗಳನ್ನು ಪ್ರಶಂಶಿಸಿದರು. ಬೆವರು ಸುರಿಸಿ ದುಡಿಯುವಲ್ಲಿ ಯಾವತ್ತೂ ಮಹಿಳೆಯರದು ಸಿಂಹಪಾಲು ಮತ್ತು ಅವರೇ ನಮ್ಮ ಸಂಘಟನೆಯ ಜೀವಕೋಶ ಎಂದು ಹೇಳಿದರು. ಮುಂದಿನ ಮೂರು ದಿನಗಳವರಗೆ ನಡೆಯಬೇಕಾಗಿರುವ ಸಮ್ಮೇಳನದ ಸ್ವರೂಪ ಮತ್ತು ಅದರ ಕಾರ್ಯವೈಖರಿಯನ್ನು ವಿವರಿಸಿದರು. ತರುವಾಯ ಕಾಲವಿಳಂಬವಿಲ್ಲದಂತೆ ಪ್ರತಿನಿಧಿ ಅಧಿವೇಶನ ಪ್ರಾರಂಭಿಸಲಾಯಿತು. ಜನವಾದಿಯ ಪ್ರಧಾನ ಕಾರ್ಯದರ್ಶಿಗಳಾದ ಮರಿಯಂ ಧಾವಳೆಯರು ಮೊದಲಿಗೆ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರದ ರಾಜಕೀಯ, ಸಾಮಾಜಿಕ ಸ್ಥಿತಿಗತಿಯ ಕುರಿತು ವಿದ್ವತ್ ಪೂರ್ಣ, ವಿಸ್ತೃತವಾದ ವರದಿಯನ್ನು ಮಂಡಿಸಿದರು. ವರದಿಯು ಸಂಶೋಧನಾ ಪ್ರಬಂಧದ ಸ್ವರೂಪವನ್ನು ಪಡೆದುಕೊಂಡಿದೆ.

ಹಿರಿಯ ನಾಯಕಿಯರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯ ರಚನೆಯೊಂದಿಗೆ ವರದಿಯನ್ನು ಚರ್ಚೆಗೆ ಬಿಡಲಾಯಿತು. ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು ವರದಿಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಪ್ರತಿನಿಧಿಗಳು ಇಂಗ್ಲೀಷ, ಹಿಂದಿ ಅಥವಾ ತಮ್ಮ ಸ್ಥಳೀಯ ಭಾಷೆಯಲ್ಲಿ ಮಂಡಿಸಿದ ವಿಷಯಗಳನ್ನು ಆಯಾ ರಾಜ್ಯದವರು ತಮ್ಮ ಭಾಷೆಗಳಲ್ಲಿ ಅನುವಾದಿಸಿ ಹೇಳುತ್ತಿದ್ದರು. ಹೀಗಾಗಿ ಅಕ್ಷರಸ್ಥರಲ್ಲದ ಪ್ರತಿನಿಧಿಗಳಿಗೂ ಅಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಚರ್ಚೆಯು ಅರಿವಾಗತೊಡಗಿತು.

ಚರ್ಚೆ ಎರಡನೇ ದಿನಕ್ಕೂ ಮುಂದುವರೆದು ಒಟ್ಟು 34 ಪ್ರತಿನಿಧಿಗಳು ಅವರವರ ರಾಜ್ಯದ ಸದಸ್ಯತ್ವ ಸಂಖ್ಯೆಯ ಅನುಪಾತದಂತೆ ನಿಗದಿಪಡಿಸಿದ ಸಮಯದಲ್ಲಿ ಪುಟ 10 ಕ್ಕೆ



ಮರಿಯಂ ಧಾವಳೆ
ಪ್ರಧಾನ ಕಾರ್ಯದರ್ಶಿಗಳು



ಪಿ.ಕೆ. ಶ್ರೀಮತಿ
ಅಧ್ಯಕ್ಷರು



ಪುಣ್ಯವತಿ
ಖಜಾಂಚಿ



ಗೌರಮ್ಮ



ದೇವಿ



ಮೀನಾಕ್ಷಿ ಬಾಳಿ

ಕೇಂದ್ರ ಸಮಿತಿ ಸದಸ್ಯರುಗಳು

ಭಾರತದಲ್ಲಿ ವಿದೇಶಿ ಕ್ಯಾಂಪಸ್‌ಗಳಿಗೆ ಅನುಕೂಲ ಕಲ್ಪಿಸುವ ಯುಜಿಸಿಯ ಅಪಾಯಕಾರಿ ನಡೆ

“ಈ ಏಕಪಕ್ಷೀಯತೆಯನ್ನು ತಕ್ಷಣವೇ ನಿಲ್ಲಿಸುವಂತೆ ಮಾಡಲು ಎಲ್ಲಾ ದೇಶಪ್ರೇಮಿ ಶಕ್ತಿಗಳು ಕ್ರಿಯೆಗಿಳಿಯಬೇಕು”

ವಿದೇಶಿ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಅನುಕೂಲ ಕಲ್ಪಿಸಲಾಗುವುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಹೇಳಿದೆ. 90 ದಿನಗಳ ಅನುಮೋದನೆ ಪ್ರಕ್ರಿಯೆಯ ನಂತರ ಶುಲ್ಕವನ್ನು ನಿರ್ಧರಿಸುವಲ್ಲಿ ಮತ್ತು ಶಿಕ್ಷಕರ ನೇಮಕಾತಿಯಲ್ಲಿ ಸ್ವಾಯತ್ತತೆಗೆ ಅವಕಾಶದೊಂದಿಗೆ ಈ ಅನುಕೂಲ ಕಲ್ಪಿಸಲಾಗುವುದು ಎಂದು ಅದು ಹೇಳಿದೆ. ಯುಜಿಸಿಯ ಈ ನಡೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ವಿರೋಧಿಸಿದೆ. ಏಕೆಂದರೆ, ಇದು ಹೆಚ್ಚು ಶುಲ್ಕದ ಪ್ರತ್ಯೇಕ ವಲಯಗಳು, ಮೇಲ್ವರ್ಗಗಳಿಗೆ ಸೀಮಿತವಾದ ಸಂಸ್ಥೆಗಳು ಹುಟ್ಟಿಕೊಳ್ಳಲು ಹಾದಿ ಮಾಡಿಕೊಡುತ್ತದೆ, ಈ ಮೂಲಕ ದೇಶದಲ್ಲಿ ಉನ್ನತ ಶಿಕ್ಷಣದ ಸಂರಚನೆಯನ್ನು ಮತ್ತಷ್ಟು ವಿಕೃತಗೊಳಿಸುತ್ತದೆ ಎಂದು ಅದು ಹೇಳಿದೆ.

ಅಂತಹ ಕ್ಯಾಂಪಸ್‌ಗಳನ್ನು ಸ್ಥಾಪಿಸುವ ಕಾರ್ಯಾಚರಣೆಯ ವಿವರಗಳು, ಅವು ತಮ್ಮದೇ ಆದ ಪ್ರವೇಶ ಪ್ರಕ್ರಿಯೆ ಮತ್ತು ದೇಶೀಯ ಮತ್ತು ವಿದೇಶಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಮಾನದಂಡಗಳನ್ನು ವಿಕಾಸಗೊಳಿಸಬಹುದು ಎಂಬುದನ್ನು ತೋರಿಸುತ್ತವೆ. ಅವು ತಮ್ಮ ಶುಲ್ಕ ರಚನೆಯನ್ನು ತಾವೇ ನಿರ್ಧರಿಸಬಹುದು, ಭಾರತೀಯ ಸಂಸ್ಥೆಗಳ ಮೇಲೆ ಹೊರಿಸುವ ಯಾವುದೇ ಮಿತಿಗಳು ಅವುಗಳ ಮೇಲಿರುವುದಿಲ್ಲ.

ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳು ಗಡಿಯಾಚೆ–ಈಚೆಯಿಂದ ನಿಧಿಗಳನ್ನು ಪಡೆಯಬಹುದು ಮತ್ತು ವಿದೇಶಿ ಕರೆನ್ಸಿ ಖಾತೆಗಳನ್ನು, ಪಾವತಿ ವಿಧಾನ, ರವಾನೆ ಮತ್ತು ಸಂಬಂಧ ಪಟ್ಟ ದೇಶಗಳಿಗೆ ಹಿಂದಿರುಗಿಸುವ ಅವಕಾಶಗಳನ್ನು ಹೊಂದಿರುತ್ತವೆ.

ಸರ್ಕಾರ ಮತ್ತು ಉನ್ನತ ಶಿಕ್ಷಣ ಪ್ರಾಧಿಕಾರಗಳ ಶೈಕ್ಷಣಿಕ ನೀತಿಗಳು ಶೈಕ್ಷಣಿಕ ಪ್ರಕ್ರಿಯೆಯ ಸಾರ್ವಭೌಮತ್ವವನ್ನು ಹಾಳುಮಾಡುತ್ತವೆ ಎಂಬುದು ಸ್ಫಟಿಕದಷ್ಟೇ ಸ್ಪಷ್ಟವಾಗಿದೆ. ಈ ಹಿಂದೆ, ಭಾರತೀಯ ಕಾರ್ಪೊರೇಟ್‌ಗಳಿಗೆ ಅಂಗಡಿಗಳನ್ನು ತೆರೆಯಲು ಅವಕಾಶ ನೀಡಲಾಯಿತು, ಅವುಗಳಿಗೆ ರಾಷ್ಟ್ರೀಯ ಶ್ರೇಷ್ಠತೆಯ ಸ್ಥಾನಮಾನವನ್ನು ನೀಡಲಾಯಿತು, ಆದರೆ ನಂತರ ಈ ದಿಕ್ಕಿನಲ್ಲಿ ಏನಾಗಿದೆ ಎಂಬ ಮಾಹಿತಿ ಸಾರ್ವಜನಿಕವಾಗಿ ಲಭ್ಯವಿಲ್ಲ. ಭಾರತೀಯ ಉನ್ನತ ಶಿಕ್ಷಣ ಕ್ಷೇತ್ರವು ಹೊಸ ಶಿಕ್ಷಣ ನೀತಿ ಮತ್ತು ಕೋವಿಡ್ ಸಮಯದಲ್ಲಿ ಆನ್‌ಲೈನ್ ಶಿಕ್ಷಣವನ್ನು ಅತಿಯಾಗಿ ಅನುಸರಿಸಿದ್ದರಿಂದ ತತ್ತರಿಸುತ್ತಿದೆ. ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಡ್ರಾಪ್‌ಔಟ್ ದರಗಳಲ್ಲಿ ತೀವ್ರ ಹೆಚ್ಚಳವಾಗಿದೆ ಎಂಬುದನ್ನು ಎಲ್ಲಾ ಅಧ್ಯಯನಗಳು ಬಯಲಿಗೆ ತಂದಿವೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳಿಗೆ ತುತ್ತಾಗಿರುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರವೇಶ ಗಂಭೀರ ಅಪಾಯದಲ್ಲಿದೆ.

ಪ್ರಸ್ತಾವಿತ ನಡೆಯು ಉನ್ನತ ಶಿಕ್ಷಣವು ಎದುರಿಸುತ್ತಿರುವ ಪ್ರಸ್ತುತ ಸವಾಲುಗಳನ್ನು ದೇಶ ಎದುರಿಸಲು ಅನುವು ಮಾಡಿಕೊಡುವುದಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಯುಜಿಸಿ ಮತ್ತು ಸರ್ಕಾರ ಈ ಕರಡು ಪ್ರಸ್ತಾಪವನ್ನು ಹಿಂದಕ್ಕೆ ಪಡೆಯಬೇಕು ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಉನ್ನತ ಶಿಕ್ಷಣದ ಭವಿಷ್ಯದಲ್ಲಿ ಪ್ರಮುಖವಾಗಿ ಕಾಳಜಿ ಇರುವ ಎಲ್ಲರೊಂದಿಗೆ ಸಮಾಲೋಚನೆಗಳನ್ನು ಪ್ರಾರಂಭಿಸಬೇಕು ಎಂದು ಬಲವಾಗಿ ಆಗ್ರಹಿಸಿದೆ. ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆಗಳನ್ನು ನಡೆಸದೆ ಏಕಪಕ್ಷೀಯವಾಗಿ ಕ್ರಮಗಳನ್ನು ಪ್ರಾರಂಭಿಸುವ ಶಾಸನಾತ್ಮಕ ಅಧಿಕಾರವನ್ನು ಯುಜಿಸಿ ಹೊಂದಿಲ್ಲ. ಯುಜಿಸಿ ಮತ್ತು ಸರ್ಕಾರ ಈ ಏಕಪಕ್ಷೀಯತೆಯನ್ನು ತಕ್ಷಣವೇ ನಿಲ್ಲಿಸುವಂತೆ ಮಾಡಲು ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳು ಕ್ರಿಯೆಗಿಳಿಯಬೇಕೆಂದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ ಮಾಡಿದೆ.

ಸಮತೆ, ಮಮತೆಗಳ ಒಡಲ ಕಿಡಿಗಳ ದಿಟ್ಟ ಹೆಜ್ಜೆ, ಗಟ್ಟಿ ಧ್ವನಿ......... ಪುಟ 9 ರಿಂದ

ಮಾತನಾಡಿದರು. ಎರಡನೇ ದಿನದ ಸಾಯಂಕಾಲದವರೆಗೂ ಚರ್ಚೆ ನಡೆದು ನಂತರ ಕಾರ್ಯದರ್ಶಿಗಳು ಸಂಘಟನೆಯ ರಾಜ್ಯಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳು ಹಾಗೂ ಸಂಘಟನಾತ್ಮಕ ವಿಷಯಗಳ ಕುರಿತು ಎರಡನೇ ವರದಿ ಮಂಡಿಸಿದರು. ನಮ್ಮ ಸಂಘಟನೆಯು ಕೋವಿಡ್ ಕಾಲದಲ್ಲಿ ಅನುಭವಿಸಿದ ಸಂಕಟ ಮತ್ತು ಕಾರ್ಯಕರ್ತರು ಜೀವದ ಹಂಗು ತೊರೆದು ಸೇವೆ ಸಲ್ಲಿಸಿದನ್ನು ಶ್ಲಾಘಿಸಿದರು. ಅಷ್ಟಕ್ಕೂ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯಗಳು ಮಾಡಿದ್ದೇನು? ಮಾಡದೆ ಉಳಿದದ್ದು ಏನು? ಸಂಘರ್ಷದಲ್ಲಿನ ನಮ್ಮ ಅನುಭವಗಳು, ನಿಶ್ಚಿತ ಗುರಿಯನ್ನು ಸಾಧಿಸುವಲ್ಲಿ ಎದುರಾದ ಅಡ್ಡಿ–ಆತಂಕಗಳನ್ನು ತೆರೆದಿಟ್ಟರು. ಆತ್ಮವಿಮರ್ಶೆ ಮಾಡಿಕೊಳ್ಳುತ್ತಲೆ ವರದಿ ಮಂಡಿಸಿದ್ದು ಸಂಘಟನೆಯ ಪ್ರಜಾತಾಂತ್ರಿಕ ನಡೆಯನ್ನು ತೋರಿಸಿಕೊಟ್ಟಿತು. ನಂತರ ಮೂರನೇ ದಿನಕ್ಕೆ ಕಲಾಪ ಮುಂದುವರೆದು ಒಟ್ಟು 52 ಪ್ರತಿನಿಧಿಗಳು ವರದಿಯ ಮೇಲೆ ಗಂಭೀರ ಚರ್ಚೆ ನಡೆಸಿದರು. ಬಿಟ್ಟು ಹೋದ ವಿಷಯಗಳ ಬಗೆಗೆ ಗಮನ ಸೆಳೆದರು. ರಾಜ್ಯದ 39 ಪ್ರತಿನಿಧಿಗಳು ಕೂಡ ಆತ್ಮವಿಮರ್ಶೆ ಮಾಡಿಕೊಂಡದ್ದು ಅವರ ಬದ್ಧತೆಯನ್ನು ಎತ್ತಿ ತೋರಿಸಿತು. ನಡುನಡುವೆ ಈ ಕೆಳಕಂಡ ವಿಷಯಗಳ ಕುರಿತು ನಿರ್ಣಯ ಮಂಡಿಸಲಾಯಿತು.

1) ಸಾಮ್ರಾಜ್ಯವಾದ ಮತ್ತು ಮೂಲಭೂತವಾದಗಳ ವಿರುದ್ಧ ನಡೆಯುತ್ತಿರುವ ಮಹಿಳಾ ಹೋರಾಟಗಳೊಂದಿಗೆ ಸೌಹಾರ್ದ ನಡೆ
2) ವೈಜ್ಞಾನಿಕ ಮನೋಭಾವದ ವೃದ್ಧಿಗಾಗಿ ಮತ್ತು ಮೌಢ್ಯಗಳ ನಿರ್ನಾಮಕ್ಕಾಗಿ ಸಂಘರ್ಷ
3) ಅಂತರ್ರಾಷ್ಟ್ರೀಯ ನಿರಾಶ್ರಿತರ ಬಿಕ್ಕಟ್ಟು ಮತ್ತು ಮಹಿಳೆಯರ ನಾಗರಿಕತೆ
4) ಪಶ್ಚಿಮ ಬಂಗಾಳದಲ್ಲಿ ಗಂಗಾ ಬಯಲಿನ ಜನರ ಎತ್ತಂಗಡಿಯಿಂದಾಗಿ ಸ್ಥಳಾಂತರವಾಗುತ್ತಿರುವ ಮಹಿಳೆಯರ ಸಮಸ್ಯೆಗಳು
5) ಮಾದಕ ವಸ್ತು ವ್ಯಸನದ ವಿರುದ್ಧ ಹೋರಾಟದಲ್ಲಿ ಕೈ ಜೋಡಿಸುವುದು ಮತ್ತು ಡ್ರಗ್ ಮಾಫಿಯಾ ವಿರುದ್ಧ ಕ್ರಮ ಕೈಕೊಳ್ಳಲು ಒತ್ತಾಯ.
6) ಕೇರಳ ಮಾದರಿಯ ಮಹಿಳಾ ಅಭಿವೃದ್ಧಿ ಅನುಸರಿಸಲು ಒತ್ತಾಯ.
7) ಕಾರ್ಪೊರೇಟ್ ಕಂಪನಿಗಳು ಎಸಗುತ್ತಿರುವ ಸಾರ್ವಜನಿಕ ಆಸ್ತಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಲೂಟಿ ನಿಲ್ಲಿಸಲು ಆಗ್ರಹ.
8) ಸಣ್ಣ ಉಳಿತಾಯ ಪದ್ಧತಿಯನ್ನು ಹಾಳುಗೆಡವುತ್ತಿರುವ ವಿರುದ್ಧ ಮತ್ತು ಕಡಿಮೆ ಬಡ್ಡಿ ದರದಲ್ಲಿ ಮಹಿಳೆಯರಿಗೆ ಸಾಲ ನೀಡಲು ಒತ್ತಾಯಿಸಿ.
9) ಗುಜರಾತ್ ಹತ್ಯಾಕಾಂಡದ ಸಂತ್ರಸ್ಥರಿಗೆ ತ್ವರಿತ ನ್ಯಾಯವನ್ನು ಕೋರಿ ಹಾಗೂ ಶಿಕ್ಷೆಯ ವಿನಾಯಿತಿಯನ್ನು ಹಿಂಪಡೆಯಲು ಒತ್ತಾಯಿಸಿ.
10) ವಿದ್ವಾಂಸರು, ಪ್ರಗತಿಪರ ಕಾರ್ಯಕರ್ತರು ಮತ್ತು ಪತ್ರಕರ್ತರ ವಿರುದ್ಧದ ಉದ್ದೇಶಿತ ದಾಳಿಗಳನ್ನು ನಿಲ್ಲಿಸಿ.
11) ಒಕ್ಕೂಟ ವ್ಯವಸ್ಥೆ ಮೇಲಿನ ದಾಳಿಯನ್ನು ವಿರೋಧಿಸಿ, ರಾಜ್ಯಗಳ ಹಕ್ಕುಗಳನ್ನು ರಕ್ಷಿಸಲು ಒತ್ತಾಯಿಸಿ.
12) ಕೆಲಸದ ಹಕ್ಕನ್ನು ಖಾತ್ರಿ ಪಡಿಸಿ: ಮನರೇಗಾ ಕಾಯ್ದೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಲು ಒತ್ತಾಯಿಸಿ.

ಹೀಗೆ ಹತ್ತಾರು ಮಹಿಳಾ ಪರ ಮತ್ತು ಜೀವಪರ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು. ನಂತರ ಸಾಯಂಕಾಲದ ಹೊತ್ತಿಗೆ ಆರು ಆಯೋಗಗಳನ್ನು ಏಕ ಕಾಲಕ್ಕೆ ಪರಿಣಿತರು ಮಂಡಿಸಿದರು. ಎಲ್ಲ ರಾಜ್ಯಗಳ ಪ್ರತಿನಿಧಿಗಳು ಎಲ್ಲ ಆಯೋಗಗಳಲ್ಲಿ ಭಾಗವಹಿಸವಂತೆ ಮಾಡಲಾಯಿತು.

ಆಯೋಗಗಳು

1) ಪರಿಸರ ವ್ಯತ್ಯಯ ಮತ್ತು ಮಹಿಳೆ.
2) ರಾಷ್ಟ್ರೀಯ ಶಿಕ್ಷಣ ನೀತಿ 2020; ಸಮಾನತೆಗಾಗಿ ಮಹಿಳೆಯರ ಸಂಘರ್ಷವನ್ನು ಹತ್ತಿಕ್ಕುವ ಹುನ್ನಾರ.
3) ಹುಡುಗಿಯರ ಅಧಿಕಾರ
4) ಭಾರತದಲ್ಲಿ ಮಹಿಳಾ ಆಂದೋಲನ ಮತ್ತು ಸ್ವಾತಂತ್ರ ಸಂಗ್ರಾಮ
5) ಮಹಿಳೆಯರ ಅಧಿಕಾರ ಮತ್ತು ಐಕ್ಯತೆಯ ಪ್ರಶ್ನೆ
6) ನಿರುದ್ಯೋಗ ಮತ್ತು ಮಹಿಳೆ.

ತಡ ರಾತ್ರಿಯವರೆಗೂ ಆಯೋಗಗಳ ಮಂಡನೆ ಚರ್ಚೆ ನಡೆದು ಎತ್ತಿಕೊಂಡ ವಿಷಯಗಳ ಸಮಗ್ರ ಆಯಾಮಗಳನ್ನು ನಿಷ್ಕರ್ಷೆ ಮಾಡಲಾಯಿತು. ರಾತ್ರಿ ಆಕರ್ಷಕ ಕೈರಳಿ ಸಾಂಸ್ಕೃತಿ ಬಿಂಬಿಸುವ ಕಾರ್ಯಕ್ರಮ ನಡೆಸಲಾಯಿತು

ನಾಲ್ಕನೇ ದಿನ ಮುಂಜಾನೆ ಪ್ರತಿಯೊಂದು ಆಯೋಗದ ಕುರಿತು ಗುಂಪಿನ ಮುಖಂಡರು ಸಾರವನ್ನು ಮಂಡಿಸಿ ಎಲ್ಲ ವಿಷಯಗಳು ಎಲ್ಲರಿಗೂ ತಿಳಿಯುವಂತೆ ನೋಡಿಕೊಂಡರು. ನಂತರ ಕೊನೆಯದಾಗಿ ಹಳೆಯ ಕೇಂದ್ರ ಸಮಿತಿಯನ್ನು ವಿಸರ್ಜಿಸಲಾಯಿತು. ತಕ್ಷಣವೇ ಪ್ರತಿನಿಧಿಗಳು ಮುಂದಿನ ಮೂರು ವರ್ಷಕ್ಕಾಗಿ 103 ಜನರ ಹೊಸ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿದರು.

ಅಧ್ಯಕ್ಷರು: ಪಿ.ಕೆ. ಶ್ರೀಮತಿ, ಕೇರಳ

ಪ್ರಧಾನ ಕಾರ್ಯದರ್ಶಿಗಳು: ಮರಿಯಂ ಧಾವಳೆ, ಮಹಾರಾಷ್ಟ್ರ

ಖಜಾಂಚಿ: ಪುಣ್ಯವತಿ, ಆಂದ್ರಪ್ರದೇಶ

ಕರ್ನಾಟಕದಿಂದ ಗೌರಮ್ಮ, ದೇವಿ ಮತ್ತು ಮೀನಾಕ್ಷಿ ಬಾಳಿ ಇವರುಗಳು ಕೇಂದ್ರ ಸಮಿತಿಗೆ ಆಯ್ಕೆಯಾದರು.

ಕೊನೆಯದಾಗಿ ಸಾಯಂಕಾಲ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ಹಮ್ಮಿಕೊಳ್ಳಲಾಗಿತ್ತು. ಅತಿಥಿಗಳಾಗಿ ಕೇರಳದ ಮುಖ್ಯ ಮಂತ್ರಿಗಳಾದ ಪಿಣರಾಯ್ ವಿಜಯನ್ ಆಗಮಿಸಿದ್ದರು. ಅವರು ನೂತನ ಕೇಂದ್ರ ಸಮಿತಿಗೆ ಅಭಿನಂದನೆಗಳನ್ನು ತಿಳಿಸುತ್ತ ದೇಶವು ಎದುರಿಸುತ್ತಿರುವ ಮೂಲಭೂತವಾದ ಮತ್ತು ಕೋಮುವಾದಗಳ ಅಪಾಯವನ್ನು ವಿವರಿಸಿದರಲ್ಲದೆ ಮಹಿಳೆಯರು ತಮ್ಮ ಮೇಲಾಗುತ್ತಿರುವ ದೌರ್ಜನ್ಯ, ದಬ್ಬಾಳಿಕೆಗಳನ್ನು ಮೆಟ್ಟಿ ನಿಲ್ಲಬೇಕು ಎಂದು ಕರೆ ಕೊಟ್ಟರು. ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಜನಸ್ತೋಮವನ್ನು ಉದ್ದೇಶಿಸಿ ಬೃಂದಾ ಕಾರಟ್



ಅವರು ಮಾತನಾಡಿದರು. ಕೊನೆಗೆ ಕೇರಳದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ನೆನಪಿನಲ್ಲಿ ಉಳಿದ ಅಂಶಗಳು

1) 2014 ರಿಂದ ಅಂದರೆ ದೇಶದಲ್ಲಿ ಬಿಜೆಪಿ ಸರಕಾರ ಬಂದಾಗಿನಿಂದ ನಡೆಯುತ್ತಿರುವ ಮಹಿಳಾ ವಿರೋಧಿ, ದಲಿತ ವಿರೋಧಿ ಹಾಗೂ ಅಲ್ಪಸಂಖ್ಯಾತ ವಿರೋಧಿ ಹಿಂಸೆ, ದಮನಗಳ ಭಯಾನಕ ಚಿತ್ರವನ್ನು ಸಮ್ಮೇಳನದಲ್ಲಿ ದಿಗ್ದರ್ಶಿಸಲಾಯಿತು. ಸಂಸ್ಕೃತಿ ಹೆಸರಿನ ದಾಳಿಗಳು ಮನುವಾದಿ ಸಿದ್ಧಾಂತವನ್ನು ಪುನರ್ ಪ್ರತಿಷ್ಠಾಪಿಸುವ ಖುಲ್ಲಂಖುಲ್ಲಾ ನಡೆಗಳು ಎಂಬುದು ಮನವರಿಕೆ ಯಾಯಿತು. ಸಂಘಿಗಳ ಪ್ರತಿ ನಡೆಗಳ ಹಿಂದಿನ ಬೃಹತ್ ಬಂಡವಾಳಿಗರ ಕೈವಾಡಗಳ ಮನವರಿಕೆಯಾಯಿತು. ಇವುಗಳನ್ನು ತಡೆಗಟ್ಟಲು ಜನವಾದಿಯ ಪ್ರತಿಯೊಬ್ಬ ನಾಯಕಿಯರು ಸಮರಧೀರ ಸಂಘರ್ಷ ಮಾಡುವ ಸಂಕಲ್ಪ ತೊಡಲಾಯಿತು.
2) ಸಮ್ಮೇಳನದ ಶಿಸ್ತು, ಗಂಭೀರತೆ, ವಿಷಯಗಳ ಮೊನಚು, ಸಮಕಾಲೀನ ಸಂದರ್ಭದ ಅವಲೋಕನ ಒಟ್ಟಾರೆ ಕಲಾಪಗಳು ತುಂಬಾ ಮಹತ್ವಪೂರ್ಣವಾಗಿದ್ದವು. ಯಾವುದೇ ಸರಕಾರಗಳು ನಡೆಸದಷ್ಟು ಗಂಭೀರವಾಗಿ ನಡೆಸಿದ್ದು ದೇಶಕ್ಕೆನೆ ಒಂದು ಮಾದರಿ.
3) ಮುಂಜಾನೆ 9 ರಿಂದ ರಾತ್ರಿ 8–9 ರವರೆಗೂ ನಡೆದ ಕಲಾಪಗಳಲ್ಲಿ ಘನ ಗಾಂಭೀರ್ಯದಿಂದ ಅಲುಗಾಡದೆ ಪಾಲ್ಗೊಂಡ ಪ್ರತಿನಿಧಿಗಳ ಬದ್ಧತೆ.
4) ಉದ್ದಕ್ಕೂ ಸಮ್ಮೇಳನದ ಯಶಸ್ವಿಗಾಗಿ ದುಡಿದ ಸ್ವಯಂ ಸೇವಕರ ಶಿಸ್ತು ಮತ್ತು ಬದ್ಧತೆ. ಕಾಲೇಜು ಮಕ್ಕಳಿಂದ ಹಿಡಿದು ಎಪ್ಪತ್ತರ ವಯೋವೃದ್ಧರ ವರೆಗೆ ಅವರು ಹಾಕಿದ ಶ್ರಮ ಅವಿಸ್ಮರಣೀಯ. ಸರಾಸರಿ ಹದಿನೆಂಟು ಗಂಟೆಗಳವರೆಗೆ ದುಡಿಯುತ್ತಿದ್ದ ಅವರ ಸಹನೆ ಕಳೆದುಕೊಂಡದ್ದು ಇಲ್ಲವೆ ಇಲ್ಲ. ನಗುಮೊಗದ ಚೆಲವು ಮಾಸಿದ್ದನ್ನು ನಾವು ಕಾಣಲೇ ಇಲ್ಲ.
5) ಕೋಆರ್ಡಿನೇಷನ್ ದಿಂದ ಅವರು ಕೆಲಸ ಮಾಡುವ ಪರಿ ದೇಶಕ್ಕೆ ಒಂದು ಮಾದರಿ.
6) ಅವರು ನೀಡಿದ ಆತಿಥ್ಯ, ಆದರ, ಉಪಚಾರಗಳನ್ನು ಶಬ್ದಗಳಲ್ಲಿ ಹಿಡಿದಿಡುವುದು ಕಷ್ಟ.
7) ಸ್ವಯಂ ಸೇವಕರಲ್ಲಿ ವಿದ್ಯಾರ್ಥಿಗಳಿಂದ ಹಿಡಿದು ಎಂ.ಎಲ್.ಎ., ಎಂ.ಪಿ. ಮತ್ತು ಮಂತ್ರಿಗಳವರೆಗೂ ಎಲ್ಲರೂ ಇದ್ದರು. ಆದರೆ ಅವರ್‍ಯಾರೂ ತಮ್ಮ ಹುದ್ದೆಗಳನ್ನು ಮೆರೆಸಲಿಲ್ಲ. ಇತರರು ಹೇಳುವವರೆಗೂ ಅವರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಎಂಬುದು ನಮಗೆ ತಿಳಿದಿರಲಿಲ್ಲ. ಇದೆಲ್ಲವೂ ಅವರಿಗೆ ಸಮಾಜವಾದಿ ಚಳುವಳಿಯಿಂದ ಬಳುವಳಿಯಾಗಿ ಬಂದಿತ್ತು.

ಒಂದೆ ಮಾತಿನಲ್ಲಿ ಹೇಳುವುದಾದರೆ ಅದೂ ಬಸವಣ್ಣನವರ ವಚನದಲ್ಲಿ ಕಾಣುವುದಾದರೆ

ಮೃದುವಚನವೇ ಸಕಲ ಜಪಂಗಳಯ್ಯಾ
ಮೃದುವಚನವೇ ಸಕಲ ತಪಂಗಳಯ್ಯಾ
ಸದು ವಿನಯವೇ ಸದಾಶಿವನ ಒಲುಮೆಯಯ್ಯಾ
ಕೂಡಲಸಂಗಯ್ಯ ನಂತಲ್ಲದೊಲ್ಲನಯ್ಯಾ. ಈ ವಚನ ಕೈರಳಿ ಸಂಸ್ಕೃತಿಗೆ ಅನ್ವರ್ಥಕವಾಗಿತ್ತು.

ಕೇರಳದ ನೆಲ, ಜಲ, ಜನತೆಗೆ, ಅವರ ಕ್ರಾಂತಿಕಾರಿ ನಡೆಗೆ ಅನಂತ ಶರಣು.

ಸಿಐಟಿಯು 17 ನೇ ಅಖಿಲ ಭಾರತ ಸಮ್ಮೇಳನಕ್ಕೆ ವ್ಯಾಪಕ ಸಿದ್ದತೆ:

ಜನವರಿ 18 ರಿಂದ 22 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಿಐಟಿಯು 17 ನೇ ಅಖಿಲ ಭಾರತ ಸಮ್ಮೇಳನ ನಡೆಯಲಿದೆ. ಐದು ದಿನಗಳು ನಡೆಯುವ ಈ ಸಮ್ಮೇಳನದ ಯಶಸ್ಸಿಗಾಗಿ ರಾಜ್ಯಾದ್ಯಂತ ವ್ಯಾಪಕ ಸಿದ್ದತೆ ನಡೆಯುತ್ತಿದೆ.

ಈ ಮಹಾ ಸಮ್ಮೇಳನದ ಪೂರ್ವದಲ್ಲಿ ರಾಜ್ಯದಲ್ಲಿರುವ ಸಿಐಟಿಯು ನ 2 ಲಕ್ಷದ 60 ಸಾವಿರ ಸದಸ್ಯರು ಸಮ್ಮೇಳನದ ಉದ್ದೇಶವನ್ನು ಕರ್ನಾಟಕದ ಮನೆ–ಮನೆಗೆ ತಲುಪಿಸಲು ಶ್ರಮಿಸುತ್ತಿದ್ದಾರೆ. ಸಮ್ಮೇಳನಕ್ಕೆ ತಗುಲುವ ವೆಚ್ಚ ಭರಿಸಲು ಸದಸ್ಯರು ತಮ್ಮ ಒಂದು ದಿನ ವೇತನ / ಕೂಲಿ ನೀಡುವ ಜತೆಗೆ ಸಾರ್ವಜನಿಕರಿಂದ ನಿಧಿ ಸಂಗ್ರಹಿಸಿ ನೀಡುತ್ತಿದ್ದಾರೆ. ಸಾಂಸ್ಕೃತಿಕ ಜಾಥಾಗಳು ರಾಜ್ಯಾದ್ಯಂತ ಸಂಚರಿಸಿ, ಹಾಡು, ಬೀದಿ ನಾಟಕದ ಮೂಲಕ ಸಮ್ಮೇಳನದ ಉದ್ದೇಶವನ್ನು ಸಾರುತ್ತಿವೆ. ಇದು ಮಾತ್ರವಲ್ಲದೇ ಸಮ್ಮೇಳನದ ಅಂಗವಾಗಿ ರಾಜ್ಯದೆಲ್ಲೆಡೆ ವಿಚಾರ ಸಂಕಿರಣ, ಕ್ರೀಡಾ/ಸಾಂಸ್ಕೃತಿಕ ಸ್ಪರ್ಧೆ, ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಗೋಡೆ ಬರಹ, ಕರಪತ್ರ ಹಂಚುವ ಮೂಲಕ, ಪೋಸ್ಟರ್ ಗಳ ಮೂಲಕ ಪ್ರಚಾರ ನಡೆಯುತ್ತಿದೆ.

ಸಿಐಟಿಯು
ಅಖಿಲ ಭಾರತ
ಸಮ್ಮೇಳನ
ಕಾರ್ಮಿಕ ವರ್ಗದ ಬೃಹತ್ ರ್‍ಯಾಲಿ
2023 ಜನವರಿ 22ರಂದು
ಬೆಂಗಳೂರಿನಲ್ಲಿ ಸಹಸ್ರ ಸಹಸ್ರ
ಸಂಖ್ಯೆಯಲ್ಲಿ ಪಾಲ್ಗೊಳ್ಳಿ

1500 ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ:

ಸಿ ಐ ಟಿ ಂ ು ್ ು ು ಸಂಘಟನೆಯ ವಿವಿಧ ವಿಭಾಗದ ಕಾರ್ಮಿಕರನ್ನು ಪ್ರತಿನಿಧಿಸಿ ಸುಮಾರು 1500 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗಿಯಾಗುತ್ತಿದ್ದಾರೆ. ವಿಶೇಷವಾಗಿ 'ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪಂಬಿಸ್ ಕಿರ್ತಿಸಿಸ್ ಸಮ್ಮೇಳನಕ್ಕೆ ಶುಭಕೋರಿ ಮಾತನಾಡುವರು. ಜನವರಿ 19 ರಂದು ಕ್ಯೂಬಾ ಕ್ರಾಂತಿಯ ನಾಯಕ ಚೆ ಗೆವಾರ ಅವರ ಮಗಳು ಆಲಿಡಾ ಗೆವಾರ ಭಾಗವಹಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಹಲವು ಕೇಂದ್ರ ಕಾರ್ಮಿಕ ಸಂಘಟನೆಗಳ ನಾಯಕರು ಭಾಗವಹಿಸಿ ಶುಭಕೋರಿ ಮಾತನಾಡುತ್ತಾರೆ.

ಫ್ಯಾಸಿಸ್ಟ್ ಮಾದರಿಯ ಜನ ವಿರೋಧಿ ಸರ್ಕಾರದ ನೀತಿಗಳನ್ನು ಹಿಮ್ಮೆಟ್ಟಿಸಲು ಹಾಗೂ ಭವಿಷ್ಯದ ಹೋರಾಟಗಳ ರೂಪುರೇಷೆ ಸಿದ್ಧತೆಗೆ ಸಮ್ಮೇಳನದಲ್ಲಿ ವಿಶೇಷ ಚರ್ಚೆ ನಡೆಯಲಿದ್ದು, ನಿರ್ಣಯಗಳನ್ನು ಕೈಗೊಳ್ಳಲಿದೆ. ವಿಶೇಷವಾಗಿ ಜನವರಿ 21 ರಂದು ಒಟ್ಟು ಪ್ರತಿನಿಧಿಗಳನ್ನು ನಾಲ್ಕು ವಿಶೇಷ ಆಯೋಗಗಳಾಗಿ ವಿಂಗಡಿಸಿ ಇಡೀ ದಿನ ಚರ್ಚೆ ನಡೆಸಲಿವೆ.

1. ಆಧುನಿಕಾ ತಯಾರಿಕಾ ವಲಯದ ಕಾರ್ಮಿಕರನ್ನು ಸಂಘಟಿಸುವುದರ ಮಹತ್ವ ಮತ್ತು ಸವಾಲುಗಳು.
2. ವಲಸೆ ಕಾರ್ಮಿಕರ ಪರಿಸ್ಥಿತಿ ಮತ್ತು ಸಂಘಟನೆ ಸವಾಲು.
3. ಬದಲಾಗುತ್ತಿರುವ ಉದ್ಯೋಗದ ಸ್ವರೂಪಗಳು.
4. ಕಾರ್ಮಿಕ ವರ್ಗದ ಐಕ್ಯತೆ ಮತ್ತು ಕೋಮುವಾದದ ಅಪಾಯಗಳು.

ಈ ವಿಷಯಗಳ ಮೇಲೆ ಚರ್ಚೆಗಳು ನಡೆಯುತ್ತದೆ.

ಸಮ್ಮೇಳನದ ಆವರಣದ ಮಾಧ್ಯಮ ಕೇಂದ್ರದಲ್ಲಿ ಪ್ರತಿ ದಿನ ಮಾಧ್ಯಮಗೋಷ್ಠಿ ಇರಲಿದ್ದು, ಸಮ್ಮೇಳನದ ಕಲಾಪಗಳ ಬಗ್ಗೆ ಮಾಧ್ಯಮಗಳಿಗೆ ವರದಿ ಮಾಡಲಾಗುವುದು.

ಬೃಹತ್ ಬಹಿರಂಗ ಸಭೆ:

ಸಮ್ಮೇಳನದ ಅಂಗವಾಗಿ ಜನವರಿ 22 ರಂದು ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಕಾರ್ಮಿಕರ ಬೃಹತ್ ಬಹಿರಂಗ ಸಭೆ ನಡೆಯಲಿದೆ. ಈ ಸಭೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸಲಿದ್ದಾರೆ. ರಾಜ್ಯದ ಎಲ್ಲಾ ಕಡೆಗಳಿಂದಲೂ ಕಾರ್ಮಿಕರು ಬೆಂಗಳೂರಿಗೆ ಬರಲು ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ.

ಸಮ್ಮೇಳನದಲ್ಲಿ ಚರ್ಚಿಸಲ್ಪಡುವ ವಿಷಯಗಳು:

ಕಾರ್ಪೋರೇಟ್ ಬಂಡವಾದಾರರ ಪರವಾದ ಉದಾರವಾದಿ ನೀತಿಗಳು ದುಡಿಯುವ ಜನರನ್ನು ಅತ್ಯಂತ ನಿಕೃಷ್ಟ ಸ್ಥಿತಿಗೆ ತಳ್ಳಿವೆ. ಉದ್ಯೋಗದಿಂದ ಹೊರದೂಡಲ್ಪಡುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ನಿರುದ್ಯೋಗವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿ, ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗಕ್ಕಾಗಿ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೋದಿ ಸರ್ಕಾರ ಕಾರ್ಪೋರೇಟ್ ಧಣಿಗಳ ತುಷ್ಟೀಕರಣಕ್ಕಾಗಿ 29 ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ, ನಾಲ್ಕು ಸಂಹಿತೆಗಳನ್ನಾಗಿಸಿದೆ. ಈ ಸಂಹಿತೆಗಳು ಕಾರ್ಮಿಕರಿಗೆ ಇದುವರೆಗೂ ಇದ್ದ ಹಕ್ಕುಗಳನ್ನು ನುಂಗಿಹಾಕಿವೆ. ಕಾರ್ಮಿಕರ ಪ್ರತಿಭಟನೆಯ ಹಕ್ಕನ್ನು ಕಸಿದುಕೊಂಡು, ಶ್ ೂ ೀ ಷ್ ಣ್ ಂ ು ್ ು ನ್ ು ತೀವ್ರಗೊಳಿಸಿವೆ. ಖಾಯಂ ಕೆಲಸಗಳಿಗೆ ತಿಲಾಂಜಲಿ ಇಡಲಾಗಿದೆ. ಬದಲಿಗೆ ನಿಗದಿತ ಅವಧಿ, ಓಜೆಟಿ, ನೀಮ್, ನೆಟಾಫ್ ಕಾರ್ಮಿಕರ ನೇಮಕಕ್ಕೆ ಕಾನೂನಿನ ರಕ್ಷಣೆ ಒದಗಿಸಲಾಗಿದೆ. ಕನಿಷ್ಟವೂ ಅಲ್ಲದ ಕೂಲಿ ಕೊಟ್ಟು ಗರಿಷ್ಟ ದುಡಿಮೆಗೆ ಹಚ್ಚಿ, ಲೂಟಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಸಂಪತ್ತು ಕೆಲವೇ ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕರಣಗೊಳ್ಳುತ್ತಿದೆ. ಪರಿಣಾಮ ಬಡತನ, ಹಸಿವು, ಅನಾರೋಗ್ಯ, ಅಪೌಷ್ಠಿಕತೆ ಹೆಚ್ಚುತ್ತಿದೆ. ಉಳ್ಳವರು ಮತ್ತು ಇಲ್ಲದವರ ನಡುವೆ ಭಾರಿ ಕಂದಕ ಸೃಷ್ಟಿಯಾಗುತ್ತಿದೆ.

ಆರೋಗ್ಯ ಕ್ಷೇತ್ರವನ್ನು ಕಾರ್ಪೋರೇಟ್‌ಗಳ ಕೈಗೆ ಒಪ್ಪಿಸಲು ಪ್ರಯತ್ನ:

ಕೊರೊನಾ ನಿಭಾಯಿಸುವಲ್ಲಿ ಸರ್ಕಾರ ವಿಫಲಾವಾಗಿದ್ದರ ಪರಿಣಾಮ, ಕೊಟ್ಯಾಂತರ ಜನ ಸರಿಯಾದ ಚಿಕಿತ್ಸೆ ಸಿಗದೇ ಹುಳಗಳಂತೆ ಅಸುನೀಗಿದ ದಾರುಣ ಸನ್ನಿವೇಶವನ್ನು ದೇಶ –ಜಗತ್ತು ಕಂಡಿದೆ. ಹೀಗಿದ್ದೂ ಆರೋಗ್ಯ ಕ್ಷೇತ್ರವನ್ನು ಸಂಪೂರ್ಣವಾಗಿ ಕಾರ್ಪೋರೇಟ್‌ಗಳ ಕೈಗೆ ಒಪ್ಪಿಸಲು ಸರ್ಕಾರ ಶತ ಪ್ರಯತ್ನ ನಡೆಸಿದೆ.

ಕೇಂದ್ರ – ರಾಜ್ಯ ಸರ್ಕಾರಗಳ ಬೆಲೆ ಏರಿಕೆ ನೀತಿಗಳು ಜನರನ್ನು ಹಿಂಡಿ ಹಿಪ್ಪೆ ಮಾಡಿವೆ. ದಿನಬಳಕೆಯ ಅಗತ್ಯ ವಸ್ತುಗಳಾದ ಆಹಾರ ಪದಾರ್ಥಗಳು, ತೈಲ ಬೆಲೆಗಳು, ಆರೋಗ್ಯ, ಶಿಕ್ಷಣ, ಸೇವೆ ಎಲ್ಲವೂ ದುಬಾರಿಯಾಗಿ ಜನರನ್ನು ಹೈರಾಣಾಗಿಸಿವೆ. ಸರ್ಕಾರಗಳ ರೈತಾಪಿ ಕೃಷಿ ವಿರೋಧಿ ನೀತಿಗಳಿಂದಾಗಿ ಅನ್ನದಾತನ ಆತ್ಮಹತ್ಯೆಗಳು ತೀವ್ರಗೊಂಡಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಕಡಿತ ಮಾಡಲಾಗಿದೆ. ಎಲ್ಲ ಸೇವೆಗಳನ್ನು ಪೇ ಅಂಡ್ ಯೂಸ್ ಮಾಡಲಾಗಿದೆ. ಡಾಲರ್ ಎದುರು ರೂಪಾಯಿ ಸಾರ್ವಕಾಲಿಕ ಅಪಮೌಲ್ಯಗೊಂಡು ಹಣದುಬ್ಬರ ಏರುತ್ತಲೇ, ಬೆಲೆಗಳು ಜನರನ್ನು ಸುಡುತ್ತಿವೆ.

ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ

17th CITU
ALL INDIA CONFERENCE
BENGALURU | 18-22 JAN 2023
Unite and Fight for Pro People Policies

ಕಾರ್ಮಿಕ ಸಂಘಟನೆಗಳು ಹಾಗೂ ರೈತಾಪಿ ಸಂಘಟನೆಗಳು ನಿರಂತರ ಹೋರಾಟ ನಡೆಸಿವೆ. ಸಂಘಟನೆ ಕರೆಕೊಟ್ಟ ಅಖಿಲ ಭಾರತ ಮುಷ್ಕರಗಳಲ್ಲಿ ಕೊಟ್ಯಾಂತರ ಕಾರ್ಮಿಕರು ಭಾಗವಹಿಸಿ ಪ್ರತಿರೋಧ ಒಡ್ಡಿದ್ದಾರೆ. ಆದರೆ ಸರ್ಕಾರ ಹೋರಾಟನಿರತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಬದಲು ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನ ಮಾಡಿತು. ಜತೆಗೆ ದುಡಿಯುವ ಜನರ ಐಕ್ಯತೆಯನ್ನು ಮುರಿಯಲು ಧಾರ್ಮಿಕ ವಿಚಾರಗಳನ್ನು ಮುನ್ನೆಲೆಗೆ ತಂದು ಜನರ ಬದುಕಿನ ಪ್ರಶ್ನೆಗಳನ್ನು ಬದಿಗೆ ಸರಿಸುವ ಫ್ಯಾಸಿಸ್ಟ್ ಮಾದರಿಯನ್ನು ಅನುಸರಿಸುತ್ತಾ ಬರಲಾಗಿದೆ. 'ರಸ್ತೆ, ಚರಂಡಿ ವಿಚಾರ ಬಿಡಿ, ಲವ್ ಜಿಹಾದ್ ಬಗ್ಗೆ ಮಾತನಾಡಿ' ಎಂದು ಆಡಳಿತರೂಢ ಪಕ್ಷದ ನಾಯಕರು ಆಡುತ್ತಿರುವ ಮಾತುಗಳು ಇದನ್ನು ಪುಷ್ಟೀಕರಿಸಿದೆ.

ಸಮ್ಮೇಳನದಲ್ಲಿ ಈ ಎಲ್ಲಾ ವಿಚಾರಗಳ ಕುರಿತು ಐದೂ ದಿನ ಗಂಭೀರ ಚರ್ಚೆ ನಡೆಯಲಿದೆ. ಫ್ಯಾಸಿಸ್ಟ್ ಮಾದರಿಯ ಜನವಿರೋಧಿ ಸರ್ಕಾರದ ನೀತಿಗಳನ್ನು ಇಮ್ಮೆಟ್ಟಿಸಲು ಹಾಗೂ ಮುಂದಿನ ಹೋರಾಟದ ರೂಪುರೇಷೆ ಸಿದ್ದತೆಗೆ ವಿಶೇಷ ಚರ್ಚೆ ನಡೆಯಲಿದ್ದು, ನಿರ್ಣಯಗಳನ್ನು ಕೈಗೊಳ್ಳಲಿದೆ.

ಸಾಂಸ್ಕೃತಿಕ ಜಾಥಾ:



ಜನವರಿ 18 ರಿಂದ 22 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಿಐಟಿಯು 17 ನೇ ಅಖಿಲ ಭಾರತ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದ ಯಶಸ್ಸಿಗಾಗಿ ರಾಜ್ಯದ ವಿವಿದೆಡೆಗಳಲ್ಲಿ ಸಾಂಸ್ಕೃತಿಕ ಜಾಥಾಗಳು ನಡೆಯುತ್ತಿವೆ.

ಬೆಂಗಳೂರಿನ ಸಮುದಾಯ ಸಂಘಟನೆಯ ಕಲಾ ತಂಡ 2023ರ ಜನವರಿ 7ರಿಂದ 13ರವರೆಗೆ ಕಲಾ ಜಾತಾ ಕಾರ್ಯಕ್ರಮ ಅಮ್ಮಿಕೊಂಡಿತ್ತು. ವಾಹನವೊಂದಕ್ಕೆ ಸಮ್ಮೇಳನ ಕುರಿತಂತೆ ವಿವರಿಸುವ ಕಟೌಟ್ ಅಳವಡಿಸಲಾಗಿತ್ತು. ಅದರಲ್ಲಿ ಜನಪರ ಘೋಷಣೆಗಳನ್ನು ಬರೆಯಲಾಗಿತ್ತು. ಈ ಜಾತಾ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಸಂಚರಿಸಿದೆ. ಜನವರಿ 7ರಂದು ಮಧ್ಯಾಹ್ನ 1.30 ಕ್ಕೆ ದಾಬಸ್ ಪೇಟೆಯಲ್ಲಿ ಈ ಜಾತಾ ಉದ್ಘಾಟನೆಗೊಂಡಿತು. ಜಾತಾದ ಜೊತೆಯಲ್ಲಿ ಹೆಜ್ಜೆಹಾಕುತ್ತಿರುವ ಸಮುದಾಯ ಬೆಂಗಳೂರು ತಂಡ 'ಮೂರು ಮಗ್ಗುಲ ಮುಳ್ಳು' ಎಂಬ ಬೀದಿ ನಾಟಕವನ್ನು ಪ್ರದರ್ಶನ ಮಾಡುತ್ತಾ ಮುಂದೆ ಸಾಗಿತು. ನಾಟಕದ ರಚನೆ ಡಾ.ಬಿ.ಆರ್. ಮಂಜುನಾಥ್ ಅವರದಾದರೆ, ನಿರ್ದೇಶನ ಯೋಗೇಶ್ ಮಾಸ್ಟರ್ ಅವರದು. ಅಲ್ಲಲ್ಲಿ ಬೀದಿಬದಿ ಸಭೆ ನಡೆಸುತ್ತ ಸಿಐಟಿಯು ಸಮ್ಮೇಳನದ ಉದ್ದೇಶಗಳ ಬಗ್ಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳಿಂದಾಗಿ ಕಾರ್ಮಿಕರು, ರೈತರು ಮತ್ತು ಜನಸಾಮಾನ್ಯರ ಬದುಕಿನ ಮೇಲೆ ಬೀರಿರುವ ಕೆಟ್ಟ ಆರ್ಥಿಕ ಪರಿಣಾಮದ ಕುರಿತು ತಿಳಿಸಲಾಗುತ್ತಿದೆ. ಕಲಾ ತಂಡವು ಕ್ರಾಂತಿಗೀತೆ ಹಾಡಲಾಗುತ್ತಿತ್ತು. ಹೋದ ಕಡೆಗಳಲ್ಲೆಲ್ಲಾ ಸಿಐಟಿಯು ಸೇರಿದಂತೆ ವಿವಿಧ ಸಂಘಟನೆಗಳ ಸ್ಥಳೀಯ ಮುಖಂಡರು ಜಾತಾಕ್ಕೆ ಸ್ವಾಗತ ನೀಡುತ್ತಿದ್ದರು. ಸ್ಥಳೀಯ ಕಾರ್ಮಿಕರು, ವಿದ್ಯಾರ್ಥಿ ಯುವಜನರು, ಮಹಿಳೆಯರು ನೆರೆಯುತ್ತಿದ್ದರು.



ದಾಬಸ್ ಪೇಟೆಯ ನಂತರ ದೊಡ್ಡಬಳ್ಳಾಪುರದಕ್ಕೆ ಸಾಗಿತು. ಜನವರಿ 8ರಂದು ದಾಸರಹಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಜಾಲಹಳ್ಳಿ ಕ್ರಾಸ್, ಬೆಂಗಳೂರು– ತುಮಕೂರು ರಸ್ತೆಯ 8ನೇ ಮೈಲಿ ಪ್ರದೇಶದಲ್ಲಿ ಸಾಗಿದ ಜಾತಾ ಅಂದು ನಡೆಯುತ್ತಿದ್ದ ಜನಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ನಾಟಕ ಪ್ರದರ್ಶನ ನಡೆಸಲಾಯಿತು.

ವೈಟ್ ಫೀಲ್ಡ್ ಪ್ರದೇಶ, ಆನೆಕಲ್, ಕೆಂಗೇರಿ, ಬಸವನಗುಡಿ, ಬೊಮ್ಮನಹಳ್ಳಿ, ರಾಮನಗರ ಪ್ರದೇಶಗಳಲ್ಲಿ ಜಾತಾ ಸಂಚರಿಸಿ, ಬೀದಿ ನಾಟಕ, ಕ್ರಾಂತಿಗೀತೆ, ಬೀದಿಬದಿ ಸಭೆ ನಡೆಸಿ ಸಿಐಟಿಯು ಸಮ್ಮೇಳನದ ಮಹತ್ವವನ್ನು ವಿವರಿಸಲಾಯಿತು.

ಕಲಾ ತಂಡದಲ್ಲಿದ್ದ ಸಂಗಾತಿಗಳು:

ಕಲಾವತಿ, ವೇದಾ ನಕ್ಷತ್ರ, ಅಜಿತ್, ವಿಜಯ್, ಕಿರಣ್, ಫೈರೋಜ್, ಚಿಕ್ಕರೆಡ್ಡಿ, ನಾರಾಯಣ ಸ್ವಾಮಿ, ಭೀಮನಗೌಡ, ದೀಲಿಪ್ ಶೆಟ್ಟಿ, ಕಾವ್ಯ ಅಚ್ಯುತ್, ಲಾವಣಿಕ, ಮಂಜುನಾಥ್.

ಸುಪ್ರಿಂ ಕೋರ್ಟ್ ವಿರುದ್ಧ ಉಪರಾಷ್ಟ್ರಪತಿಗಳ ವಾಗ್ಬಾಣಗಳು –'ಹಿಂದುತ್ವ' ರಾಷ್ಟ್ರದ ಪ್ರಾಜೆಕ್ಟಿನ ಭಾಗ?

ಕಳೆದ ಕೆಲವು ವಾರಗಳಲ್ಲಿ ಕೇಂದ್ರ ಕಾನೂನು ಮಂತ್ರಿಗಳು ದೇಶದ ಸರ್ವೋಚ್ಚ ನ್ಯಾಯಾಲಯದ ಟೀಕೆಯಲ್ಲಿ ತೊಡಗಿದ್ದರು. ಈಗ ನಮ್ಮ ಹೊಸ ಉಪರಾಷ್ಟ್ರಪತಿಗಳು ಆ ಕೆಲಸವನ್ನು ತಮ್ಮ ಕೈಗೆ ಅಥವ ಬಾಯಿಗೆ ತೆಗೆದುಕೊಂಡತ್ತಿದೆ. ಅವರು ಪದಗ್ರಹಣ ಮಾಡಿದಂದಿನಿಂದಲೇ ವಾಗ್ಬಾಣಗಳನ್ನು ಬಿಡುತ್ತಿದ್ದಾರೆ. ಸುಪ್ರಿಂ ಕೋರ್ಟ್ ತಾನೇ ಸರ್ವೋಚ್ಚ ಎಂಬಂತೆ ವರ್ತಿಸುತ್ತಿದೆ, ಸಂಸತ್ತಿನ ಸಾರ್ವಭೌಮತೆಗೆ ಸವಾಲು ಹಾಕಿದೆ ಎಂದು ಜನವರಿ 11 ರಂದು ಶಾಸನ ಸಭೆಗಳ ಅಧ್ಯಕ್ಷರುಗಳ ಸಮ್ಮೇಳನವನ್ನು ಉದ್ಘಾಟಿಸುತ್ತ ಅವರು ಹೇಳಿರುವುದಾಗಿ ವರದಿಯಾಗಿದೆ.

ವಾಗ್ಬಾಣಗಳನ್ನು ಎಸೆಯುವ ಈ ಪ್ರಕ್ರಿಯೆಯಲ್ಲಿ ಅವರು ಸಂವಿಧಾನಕ್ಕೆ ತಿದ್ದುಪಡಿ ತರಬಹುದು, ಆದರೆ ಸಂವಿಧಾನದ 'ಮೂಲಸಂರಚನೆ'ಯನ್ನು ಬದಲಿಸುವುದು ಸಾಧ್ಯವಿಲ್ಲ, ಅಂತಹ ಯಾವುದೇ ತಿದ್ದುಪಡಿ ಅಸಿಂಧುವಾಗುತ್ತದೆ ಎಂಬ ಸುಪ್ರಿಂ ಕೋರ್ಟಿನ 1973ರ ಕೇಶವಾನಂದ ಭಾರತಿ ಪ್ರಕರಣದ ತೀರ್ಪನ್ನೇ ತಾವು ಒಪ್ಪಿಕೊಳ್ಳುವುದಿಲ್ಲ ಎಂದಿದ್ದಾರೆ.

ಈ ತೀರ್ಪು ದೇಶದ ಎಲ್ಲ ರಾಜಕೀಯ ಪಕ್ಷಗಳು, ಬಿಜೆಪಿಯ ಮತ್ತು ಅದರ ಹಿಂದಿನ ಅವತಾರವಾದ ಜನಸಂಘದ ಘಟಾನುಘಟಿ ಮುಖಂಡರು ಕೂಡ ಒಪ್ಪಿಕೊಂಡಿರುವ ತೀರ್ಪು, ವಿಶೇಷವಾಗಿ 1975ರ ತುರ್ತುಪರಿಸ್ಥಿತಿಯ ಕರಾಳ ಅನುಭವಗಳ ನಂತರ.

ಸಂಸತ್ತನ್ನು ಸ್ಥಾಪಿಸಿರುವುದು ಭಾರತದ ಸಂವಿಧಾನ. ಪ್ರಭುತ್ವದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ತಮ್ಮ ಅಧಿಕಾರಗಳನ್ನು ಪಡೆದಿರುವುದು ಈ ಸಂವಿಧಾನದಿಂದಲೇ ಹೊರತು ಪ್ರಭುತ್ವದ ಈ ಅಂಗಗಳಿಂದ ಸಂವಿಧಾನ ಅಧಿಕಾರ ಪಡೆದಿರುವುದು ಅಲ್ಲ. ಸಂವಿಧಾನವೇ ಸರ್ವೋಚ್ಚ, ಉಪರಾಷ್ಟ್ರಪತಿಗಳು ವಾದಿಸುವಂತೆ ಸಂಸತ್ತು ಅಥವ ಸರಕಾರ ಅಲ್ಲ. ತನಗೆ ಭಾರೀ ಬಹುಮತ ಇದೆ ಎಂಬ ಕಾರಣವೊಡ್ಡಿ ಯಾವುದೇ ಸರಕಾರ ನಮ್ಮ ಗಣತಂತ್ರದ 'ಮೂಲ ಸಂರಚನೆ'ಯನ್ನು ದುರ್ಬಲಗೊಳಿಸಲು ತನ್ನ ಬಹುಮತದ ದಬ್ಬಾಳಿಕೆಯನ್ನು ಚಲಾಯಿಸಲು ಅವಕಾಶ ಇರಬಾರದು ಎಂದೇ ಮೂಲಸಂರಚನೆಯ ತತ್ವ ವಿಕಾಸಗೊಂಡಿದೆ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ನೆನಪಿಸಿದ್ದಾರೆ.

ಆದರೆ ಈಗ ಭಾರತದ ಜಿ–20 ಅಧ್ಯಕ್ಷಗಿರಿಯನ್ನು ಸಂಭ್ರಮಿಸಲು ಭಾರತ "ಪ್ರಜಾಪ್ರಭುತ್ವಗಳ ಮಾತೆ" ಎಂದು ಬಿಂಬಿಸಬೇಕು ಎಂದು ಪ್ರಧಾನ ಮಂತ್ರಿಗಳೇ ಹೇಳುತ್ತಿರುವಾಗಲೇ, ಅದೇ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಕೈಗೊಂಡಿರುವ ದೇಶದ ಉಪರಾಷ್ಟ್ರಪತಿಗಳು ಆ ಮೂಲಸಂರಚನೆಯ ತತ್ವವನ್ನೇ ಪ್ರಶ್ನಿಸಿರುವುದು ಬಹಳಷ್ಟು ಮಂದಿಗೆ ಆಘಾತವುಂಟು ಮಾಡಿದೆ.

ಮೇಲೆ ಹೇಳಿದಂತೆ, ಅಡ್ವಾಣಿ, ವಾಜಪೇಯಿ, ಅರುಣ್ ಜೇಟ್ಲಿಯಂತಹ ಬಿಜೆಪಿಯ ಮತ್ತು ಅದರ ಹಿಂದಿನ ಜನಸಂಘದ ಮುಖಂಡರುಗಳು, ಮಾತ್ರವಲ್ಲ, ಸ್ವತಃ ಸುಪ್ರಿಂ ಕೋರ್ಟಿನ ವಕೀಲರಾಗಿದ್ದ ಉಪರಾಷ್ಟ್ರಪತಿಗಳೂ ಹಿಂದೆಂದೂ ಇದರ ವಿರುದ್ಧ ಮಾತಾಡಿರಲಿಲ್ಲ ಎಂದು ಅವರ ಹಳೆಯ ಸಹಯೋಗಿ ಹಾಗೂ ರಾಜ್ಯಸಭಾ ಸದಸ್ಯ ವಿವೇಕ್ ಥಂಕಾ ಹೇಳಿರುವುದಾಗಿ ಹಿರಿಯ ಪತ್ರಕರ್ತ ಎಂ ಕೆ ವೇಣು ಹೇಳುತ್ತಾರೆ (ದಿ ಇಂಡಿಯಾ ಕೇಬಲ್, ಜನವರಿ 13). ಹೀಗಿರುವಾಗ ಉಪರಾಷ್ಟ್ರಪತಿಗಳು ಈಗ ಈ ರೀತಿ ಕೆಂಡಕಾರುತ್ತಿರಲು ಕಾರಣವೇನಿರಬಹುದು ಎಂಬುದು ಹಲವು ರಾಜಕೀಯ ವೀಕ್ಷಕರಲ್ಲಿ ಎದ್ದಿರುವ ಪ್ರಶ್ನೆ.

ಪ್ರಧಾನ ಮಂತ್ರಿಗಳು ಸೇರಿದಂತೆ ಆಳುವ ಪಕ್ಷದ ಯಾವ ಹಿರಿಯ ಮುಖಂಡರೂ ಈ ಬಗ್ಗೆ ಮಾತನಾಡದಿರುವುದು ನೋಡಿದರೆ, ಇದು ಸುಪ್ರಿಂ ಕೋರ್ಟಿಗೆ ಬಾಯಿ ಮುಚ್ಚಿಕೊಂಡಿರಿ ಎಂಬ ಸಂದೇಶ ರವಾನಿಸುವ ಒಟ್ಟು ಯೋಜನೆಯ ಭಾಗವಾಗಿರಬಹುದೇ ಎಂದು ಎಂ.ಕೆ. ವೇಣು ತಮ್ಮ ಲೇಖನದಲ್ಲಿ ಹೇಳುತ್ತಾರೆ.

ನಮ್ಮ ಸಂವಿಧಾನ ಭಾರತದ ಸಾರ್ವಭೌಮತೆಯನ್ನು ಜನತೆಗೆ ನೀಡಿರುವುದು ಅದರ ಕೇಂದ್ರ ಬಿಂದು. ಪ್ರಭುತ್ವದ ಯಾವುದೇ ಅಂಗ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಜನತೆ ತಾತ್ಕಾಲಿಕವಾಗಿ 5 ವರ್ಷಕ್ಕೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವಲ್ಲಿ ತಮ್ಮ ಸಾರ್ವಭೌಮತೆಯನ್ನು ಚಲಾಯಿಸುತ್ತಾರೆ. ಈ ಪ್ರತಿನಿಧಿಗಳು ತಮ್ಮ ನಡುವಿನಿಂದ ಸರಕಾರವನ್ನು ರಚಿಸುತ್ತಾರೆ. ಆ ಸರಕಾರ (ಕಾರ್ಯಾಂಗ) ಶಾಸಕಾಂಗ(ಸಂಸತ್ತು)ಕ್ಕೆ ಜವಾಬುದಾರಿಯಾಗಿರುತ್ತದೆ, ಮತ್ತು ಸಂಸದ್ ಸದಸ್ಯರು ಜನತೆಗೆ ಉತ್ತರದಾಯಿಯಾಗಿರುತ್ತಾರೆ. ಈ ಸಂವಿಧಾನಿಕ ಯೋಜನೆಯ ಎಳೆಯನ್ನು ಯಾರೂ ಎಲ್ಲಿಯೂ ಬದಲಿಸಲು ಸಾಧ್ಯವಿಲ್ಲ ಎನ್ನುತ್ತ ಯೆಚುರಿಯವರು, ಭಾರತದ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬದಲಿಸಿ ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ತೆರನ ಹಿಂದುತ್ವ ರಾಷ್ಟ್ರವನ್ನು ಸ್ಥಾಪಿಸುವ ಸನ್ನಾಹದ ಅಪಾಯದ ಸೂಚನೆ ಉಪರಾಷ್ಟ್ರಪತಿಗಳ ಈ ಟಿಪ್ಪಣಿಗಳಲ್ಲಿ ಕಾಣುತ್ತದೆ, ಇದನ್ನು ಪ್ರತಿರೋಧಿಸಬೇಕು ಮತ್ತು ತಿರಸ್ಕರಿಸಬೇಕು ಎಂದು ಹೇಳುತ್ತಾರೆ.

'ಪ್ರಜಾಪ್ರಭುತ್ವದ ಪರಂಪರೆ'ಯ ಪುಕ್ಕಟೆ ಸಲಹೆ!

ಇದರೊಂದಿಗೇ, ಪ್ರಧಾನಿಗಳು ಬ್ರೆಝಿಲ್‌ನಲ್ಲಿ ಚುನಾವಣೆಯಲ್ಲಿ ಸೋತ ತಮ್ಮ ನಿಕಟ ಗೆಳೆಯರಲ್ಲಿ ಒಬ್ಬರಾದ ಬೊಲ್ಸೆನಾರೋರವರ ಬಲಪಂಥೀಯ ಹಿಂಬಾಲಕರು ದೇಶದ ರಾಜಧಾನಿಯಲ್ಲಿ ನಡೆಸಿದ ಧಾಂಧಲೆಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತ ಟ್ವೀಟ್ ಮಾಡಿರುವ ಸುದ್ದಿ ವರದಿಯಾಗಿದೆ–ಪ್ರತಿಯೊಬ್ಬರೂ ಪ್ರಜಾಪ್ರಭುತ್ವ ಪರಂಪರೆಗಳನ್ನು ಗೌರವಿಸಬೇಕು ಎಂದು ಅವರು ಈ ಟ್ವೀಟ್‌ನಲ್ಲಿ ಹೇಳಿದ್ದಾರಂತೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಮಾಧ್ಯಮಗಳಲ್ಲಿ ಕೆಲವರು ಕಳೆದ 5 ವರ್ಷಗಳಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವದ ಪರಂಪರೆಗೆ ಎಂತಹ ಗೌರವ ಸಲ್ಲಿಸಲಾಗಿದೆ ಎಂದು ನೆನಪಿಸಿದ್ದಾರೆ.ಸಿಬಿಐ,ಇಡಿ,ಐಟಿಗಳನ್ನು ಆಯುಧಗಳಾಗಿ ಬಳಸಿ ಈ 5 ವರ್ಷಗಳಲ್ಲಿ ಕರ್ನಾಟಕ ಸೇರಿದಂತೆ 7 ರಾಜ್ಯಗಳಲ್ಲಿ ಅವರ ಪಕ್ಷ ಚುನಾವಣೆಗಳಲ್ಲಿ ಬಹುಮತ ಗಳಿಸುವಲ್ಲಿ ಸೋತರೂ ಅಧಿಕಾರ ನಡೆಸುತ್ತಿದೆ ಎಂಬುದನ್ನು ನೆನಪಿಸಲಾಗುತ್ತಿದೆ. ಆ ಪಟ್ಟಿ ಹೀಗಿದೆ:

2017 –ಗೋವ: ಒಟ್ಟು ಸೀಟುಗಳು–40 ಕಾಂಗ್ರೆಸ್–17, ಬಿಜೆಪಿ–13, ಇತರರು–10

2017– ಮಣಿಪುರ: ಒಟ್ಟು ಸೀಟುಗಳು–60 ಕಾಂಗ್ರೆಸ್–28 ಬಿಜೆಪಿ–21 ಇತರರು–11

2018 –ಮೇಘಾಲಯ: ಒಟ್ಟು ಸೀಟುಗಳು–60 ಕಾಂಗ್ರೆಸ್–11 ಎನ್‌ಪಿಪಿ–19, ಬಿಜೆಪಿ–2

2019– ಹರ್ಯಾಣ: ಒಟ್ಟು ಸೀಟುಗಳು–90 ಬಿಜೆಪಿ–40 ಕಾಂಗ್ರೆಸ್–31, ಜೆಜೆಪಿ–10

2018–19–ಕರ್ನಾಟಕ: ಒಟ್ಟು ಸೀಟುಗಳು–224 ಬಿಜೆಪಿ– 103, ಕಾಂಗ್ರೆಸ್–78, ಜೆಡಿ(ಎಸ್) 34 ಬಹುಮತವಿಲ್ಲದೆ ಸರಕಾರ ರಚನೆ–14 ತಿಂಗಳ ನಂತರ 'ಆಪರೇಷನ್ ಕಮಲ'ದ ಮೂಲಕ ಕೊನೆಗೂ ಅಧಿಕಾರ

2019–20– ಮಧ್ಯಪ್ರದೇಶ



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ, ಕನ್ನಡ ಒನ್ ನ್ಯೂಸ್

ಕಾಂಗ್ರೆಸ್–114, ಬಿಜೆಪಿ–109, ಇತರರು –7; 2020 ರಲ್ಲಿ ಈ ಸರಕಾರ ರಚನೆಗೆ ನೆರವಾದ ಆಗಿನ ಕಾಂಗ್ರೆಸ್ ಮುಖಂಡ ಜ್ಯೋತಿರಾದಿತ್ಯ ಸಿಂಧ್ಯಾ ಈಗ ಕೇಂದ್ರ ಸಚಿವರಾಗಿದ್ದಾರೆ.

2019–22–ಮಹಾರಾಷ್ಟ್ರ

ಶಿವಸೇನೆಯೊಂದಿಗೆ ಬಹುಮತ–ವಚನಭಂಗದ ಆಪಾದನೆಯ ನಂತರ ಎನ್‌ಸಿಪಿ ಬೆಂಬಲವಿದೆಯೆಂದು ರಚಿಸಿದ ಸರಕಾರ ಕೆಲವೇ ಗಂಟೆಗಳೊಳಗೆ ಕುಸಿತ– ಮೂರು ವರ್ಷಗಳ ನಂತರ ಶಿವಸೇನೆಯನ್ನು ಒಡೆದು ಕೊನೆಗೂ ಅಧಿಕಾರ.

ಮೊದಲು ಹಣಕಾಸು ಮತ್ತು ಇತರ ಆಮಿಷಗಳನ್ನು ಒಡ್ಡಿ ಪಕ್ಷಾಂತರ ನಡೆಯುವಂತೆ ಮಾಡುವುದು, ಅದಾಗದಿದ್ದರೆ, ಇಡಿ, ಸಿಬಿಐ, ಆದಾಯ ತೆರಿಗೆ ಇಲಾಖೆಯನ್ನು ಹರಿಯಬಿಡುವುದು, ಅದೂ ವಿಫಲವಾದರೆ, ಕಾನೂನು ಕೇಸುಗಳನ್ನು ಹಾಕಿ ಬಂಧಿಸುವುದು! ಈ ಆಳ್ವಿಕೆ ಸ್ಥಾಪಿಸಿರುವ ಇಂತಹ ಭಾರತೀಯ ಪ್ರಜಾಪ್ರಭುತ್ವ 'ಪರಂಪರೆಗಳಿಗೆ' ಸ್ವಾಗತ! –ಇದು ನಮ್ಮ ಪ್ರಧಾನಿಗಳು ತಮ್ಮ ಬ್ರೆಝಿಲ್ ಬಲಪಂಥೀಯ ಗೆಳೆಯರಿಗೆ ನೀಡಿರುವ ಪುಕ್ಕಟೆ ಸಲಹೆ ಎಂದು ಯೆಚುರಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

'ಅಮೃತಕಾಲ'ದ 'ಪರಂಪರೆ'ಯ ಮಾದರಿಗಳು

ನೋಟುರದ್ದತಿ ಮತ್ತು ಚುನಾವಣಾ ಬಾಂಡುಗಳು

2016ರಲ್ಲಿ ನೊಟುರದ್ದತಿ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕನ್ನು ಹೇಗೆ ರಬ್ಬರ್ ಸ್ಟಾಂಪ್ ಮಾಡಲಾಯಿತು ಎಂಬುದು ಈಗ ಸುಪ್ರಿಂ ಕೋರ್ಟಿನ ತೀರ್ಪಿನ ನಂತರ ಜಗಜ್ಜಾಹೀರಾಗಿದೆ.

2016ರಲ್ಲಿ ಚುನಾವಣಾ ಆಯೋಗದ ಬಲವಾದ ಆಕ್ಷೇಪವಿದ್ದರೂ 'ಹಣಕಾಸು ಮಸೂದೆ'ಯ ವೇಷ ತೊಡಿಸಿ ತಂದ ಚುನಾವಣಾ ಬಾಂಡು ಯೋಜನೆಯನ್ನು ಇತ್ತೀಚೆಗೆ ನವಂಬರ್ 2022ರಲ್ಲಿ, ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೇ ತಿದ್ದುಪಡಿ ಮಾಡಿದಾಗಲೂ ಚುನಾವಣಾ ಆಯೋಗಕ್ಕೆ ಅದನ್ನು ಕೊನೆಯ ಗಳಿಗೆಯಲ್ಲಿ ತಿಳಿಸಲಾಯಿತಷ್ಟೇ, ಅದರ ಸಮ್ಮತಿಯನ್ನು ಪಡೆದಿರಲಿಲ್ಲ ಎಂಬುದು ಈಗ ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದ ಮಾಹಿತಿಯಿಂದ ಬಯಲಿಗೆ ಬಂದಿದೆ.

ಚುನಾವಣಾ ಬಾಂಡಿಗೆ ಸವಾಲೊಡ್ಡಿದ ಅರ್ಜಿಗಳ ವಿಚಾರಣೆಯೂ ಈಗ ಸುಪ್ರಿಂ ಕೋರ್ಟಿನ ಮುಂದಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಈ ನಡುವೆ ಸುಪ್ರಿಂ ಕೋರ್ಟಿನಲ್ಲಿ ನಡೆಯುತ್ತಿರುವ ವಿಚಾರಣೆಯ ಮತ್ತೊಂದು ಪ್ರಕರಣದಲ್ಲಿ ಚುನಾವಣಾ ಆಯೋಗ ಸಲ್ಲಿಸಿದ ಅಫಿಡವಿಟ್‌ನಲ್ಲಿ ಚುನಾವಣೆಗಳಲ್ಲಿ ಹಣಬಲದ ಪಾತ್ರ ಹೆಚ್ಚುತ್ತಿರುವುದನ್ನು ತಾನು ಗಂಭೀರವಾಗಿ ಪರಿಗಣಿಸುತ್ತಿದ್ದು, ವಿಪರೀತ ಚುನಾವಣಾ ವೆಚ್ಚಕ್ಕೆ ತಡೆ ಹಾಕಲು ಸತತ ಪ್ರಯತ್ನ ಮಾಡುತ್ತಿರುವುದಾಗಿ ಹೇಳಿದೆ!

ಆರೆಸ್ಸೆಸ್ ಮುಖ್ಯಸ್ಥರ ಸಂದರ್ಶನವಲ್ಲದ 'ಸಂದರ್ಶನ'

ಆರ್‌ಎಸ್‌ಎಸ್ ಮುಖ್ಯಸ್ಥರ ಒಂದು 'ಸಂದರ್ಶನ' ಈ ವಾರ ಬಹಳ ಸುದ್ದಿ ಮಾಡಿದೆ. ಇದರಲ್ಲಿ ಅವರು ಹಿಂದೂ ಸಮಾಜವನ್ನು ರಕ್ಷಿಸಲು 1000 ವರ್ಷಗಳಿಂದ ಯುದ್ಧ ನಡೆಯುತ್ತಿದೆ ಎಂದಿದ್ದಾರೆ. ಇದು ಹೊರಗಿನ ಶತ್ರುಗಳ ವಿರುದ್ಧ ಮಾತ್ರವಲ್ಲ, ಒಳಗಿನ ಶತ್ರುಗಳ ವಿರುದ್ಧವೂ. ಇದರಲ್ಲಿ ಹಿಂದೂ ಸಮಾಜ ಜಾಗೃತಗೊಂಡಿದೆ(ಬಹುಶಃ ಸಂಘ ಪರಿವಾರದ ಪ್ರಯತ್ನಗಳಿಂದ) ಮತ್ತು ಈ ರೀತಿ ಯುದ್ಧದಲ್ಲಿರುವವರು ಆಕ್ರಮಣಕಾರಿಗಳಾಗಿರುವುದು ಸಹಜ. ಆದರೆ ಭಾರತದ ಮುಸ್ಲಿಮರು ಭಯಪಡಬೇಕಾಗಿಲ್ಲ, ಅವರು ಒಂದೊಮ್ಮೆ ಈ ನೆಲವನ್ನು ಆಳಿದವರು, ಮತ್ತೆ ಆಳುತ್ತೇವೆ ಎಂಬ ಅಹಂಭಾವವನ್ನು ಬಿಟ್ಟರೆ ಸಾಕು!– ಹೀಗೆಂದು ಅವರ 'ಸಂದರ್ಶನ'ದ ತಾತ್ಪರ್ಯವನ್ನು ಪ್ರಸಿದ್ಧ ಇತಿಹಾಸ ಪತ್ರಕರ್ತ ನೀಲಾಂಜನ ಮುಖ್ಯೋಪಾಧ್ಯಾಯ ಹೇಳುತ್ತಾರೆ (ನ್ಯೂಸ್‌ಕ್ಲಿಕ್, ಜನವರಿ 13).

ಆದರೆ ಸಮಕಾಲೀನ ಭಾರತದಲ್ಲಿ ಎಷ್ಟು ಮಂದಿ ಮುಸ್ಲಿಮರು ಈ ಭಾವನೆಯನ್ನು ಹೊಂದಿದ್ದಾರೆ, ಅಥವ ಹಾಗೆ ಹೊಂದಿದ್ದಾರೆ ಎಂದು ಇವರು ಭಾವಿಸಲು ಆಧಾರಗಳೇನು? ಈ ಪ್ರಶ್ನೆಯನ್ನು ಅವರಿಗೆ ಸಂದರ್ಶಕರು ಕೇಳಲಿಲ್ಲ, ಏಕೆಂದರೆ ಇದು ವಾಸ್ತವವಾಗಿ 'ಸಂದರ್ಶನ' ವಾಗಿರಲಿಲ್ಲ, ಅದರ ಹೆಸರಲ್ಲಿ ಮಾಡಿರುವ ಒಂದು ಪ್ರಚಾರ ಭಾಷಣ, ವಿಶೇಷವಾಗಿ, ಈ ವರ್ಷ ನಡೆಯಲಿರುವ 9 ಅಥವ 10 ರಾಜ್ಯಗಳಲ್ಲಿನ ಚುನಾವಣೆಗಳನ್ನು ಮತ್ತು ಮುಂದಿನ ವರ್ಷದ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಇರಬಹುದು ಎಂದು ನೀಲಾಂಜನ ಮುಖ್ಯೋಪಾಧ್ಯಾಯರು ಹೇಳುತ್ತಾರೆ. ಈ ಸಂದರ್ಶನ ನೀಡಿರುವುದು ಸಂಘ ಪರಿವಾರದ ಪತ್ರಿಕೆಗಳಿಗೆ.



ಹೆಚ್ಚುತ್ತಿರುವ ವೆಚ್ಚಗಳು, ಕುಸಿಯುತ್ತಿರುವ ಆದಾಯಗಳಿಂದ ಜಾಗೃತಗೊಂಡಿರುವುದು ಹಿಂದುಗಳಷ್ಟೇ ಅಲ್ಲ! ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ನೀವೇನೂ ಹೆದರುವ ಅಗತ್ಯವಿಲ್ಲ! ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್



ಅರ್ಥವ್ಯವಸ್ಥೆಯ ಮೇಲೆ ವಿದೇಶ ವ್ಯಾಪಾರ ಕೊರತೆಯ ಕಾರ್ಮೋಡಗಳು ಆಮದುಗಳು ಏರುತ್ತಿವೆ–ರಫ್ತುಗಳು ಇಳಿಯುತ್ತಿವೆ: ಪರಿಸ್ಥಿತಿ ಕಳವಳಕಾರಿಯಾಗಿದೆ



ಚಾಲ್ತಿ ಖಾತೆ ಕೊರತೆಯು ಮೊದಲ ತ್ರೈಮಾಸಿಕದ (ಏಪ್ರಿಲ್–ಜೂನ್) ಕೊರತೆಗೆ ಹೋಲಿಸಿದರೆ ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ದುಪ್ಪಟ್ಟಾಗಿದೆ ಮತ್ತು ಒಂದು ವರ್ಷದ ಹಿಂದಿನ ಎರಡನೇ ತ್ರೈಮಾಸಿಕಕ್ಕೆ (ಜುಲೈ–ಸೆಪ್ಟೆಂಬರ್) ಹೋಲಿಸಿದರೆ ಮೂರು ಪಟ್ಟು ಹೆಚ್ಚಾಗಿದೆ. ರಿಸರ್ವ್ ಬ್ಯಾಂಕ್ ಈಗಾಗಲೇ ಸುಮಾರು ನೂರು ಬಿಲಿಯನ್ ಡಾಲರ್ ಹಣವನ್ನು ವೆಚ್ಚ ಮಾಡಿದ್ದರೂ ಸಹ, ರೂಪಾಯಿಯ ಮೌಲ್ಯ ಕುಸಿಯುತ್ತಲೇ ಇದೆ. ವಿದೇಶಿ ವ್ಯಾಪಾರ ಕೊರತೆಯು ಇನ್ನೂ ಸ್ವಲ್ಪ ಸಮಯದವರೆಗೂ ಪ್ರತಿಕೂಲವಾಗಿಯೇ ಮುಂದುವರಿಯುವಂತೆ ಕಾಣುತ್ತದೆ. ಈ ಎಲ್ಲ ಅಂಶಗಳೂ ನವ ಉದಾರವಾದಿ ಬಂಡವಾಳಶಾಹಿಯು ಮುಂದಿನ ದಾರಿ ಕಾಣದ ಪರಿಸ್ಥಿತಿಯಲ್ಲಿದೆ ಎಂಬುದನ್ನು ಮತ್ತು ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರಾಬಲ್ಯಕ್ಕೆ ತೀವ್ರವಾದ ಸವಾಲು ಎಸೆಯಲಾಗಿದೆ ಎಂಬುದನ್ನು ಸೂಚಿಸುತ್ತವೆ. ಜಾಗತಿಕ ಬಂಡವಾಳಶಾಹಿಯು ಯಾವ ಅವಸ್ಥೆಯಲ್ಲಿದೆ ಎಂದರೆ, ಅದನ್ನು ಮೀರುವ ಹೊಸ ಸಾಧ್ಯತೆಗಳು ಸೃಷ್ಟಿಯಾಗುತ್ತವೆ. ಆದರೆ, ಈ ಅವಕಾಶವನ್ನು ಬಳಸಿಕೊಳ್ಳುವ ಬದಲು, ನಮ್ಮ ಸರಕಾರ ನವ ಉದಾರವಾದಿ ಧೋರಣೆಗಳಲ್ಲೇ ಸಿಲುಕಿಕೊಂಡಿದ್ದರೆ, ದೇಶವು ಈಗ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಭವಿಷ್ಯದಲ್ಲಿ ಇನ್ನಷ್ಟು ಉಲ್ಬಣಗೊಳ್ಳುತ್ತದಷ್ಟೇ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

2022–23ರ ಎರಡನೇ ತ್ರೈಮಾಸಿಕದಲ್ಲಿ (ಜುಲೈ–ಸೆಪ್ಟೆಂಬರ್) ಭಾರತದ ಚಾಲ್ತಿ ಖಾತೆಯ ಕೊರತೆಯು 36.4 ಬಿಲಿಯನ್ ಡಾಲರ್ ಮಟ್ಟವನ್ನು ತಲುಪಿದೆ. ಜಿಡಿಪಿಯ ಶೇ. 4.4 ರಷ್ಟಿರುವ ಈ ಕೊರತೆಯು ಕಳೆದ ಒಂಬತ್ತು ವರ್ಷಗಳಲ್ಲೇ ಅತಿ ಹೆಚ್ಚಿನದು. 2012ರ ಅಕ್ಟೋಬರ್–ಡಿಸೆಂಬರ್‌ನಲ್ಲೊಮ್ಮೆ ಮಾತ್ರ 32.6 ಬಿಲಿಯನ್ ಡಾಲರ್ ಮಟ್ಟದಲ್ಲಿದ್ದ ಈ ಕೊರತೆಯು ಜಿಡಿಪಿಯ ಶೇ.6.7ರಷ್ಟಿತ್ತು. ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಚಾಲ್ತಿ ಖಾತೆ ಕೊರತೆಯು 2022–23ರ ಮೊದಲ ತ್ರೈಮಾಸಿಕದಲ್ಲಿ 18.2 ಬಿಲಿಯನ್ ಡಾಲರ್ ಅಥವಾ ಜಿಡಿಪಿಯ ಶೇ. 2.2ರಷ್ಟಿತ್ತು ಮತ್ತು 2021–22ರ ಎರಡನೇ ತ್ರೈಮಾಸಿಕದಲ್ಲಿ 9.7 ಬಿಲಿಯನ್ ಡಾಲರ್‌ಗಳಷ್ಟಿತ್ತು ಅಥವಾ ಜಿಡಿಪಿಯ ಶೇ. 1.3ರಷ್ಟಿತ್ತು. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮೊದಲ ತ್ರೈಮಾಸಿಕದ ಕೊರತೆಗೆ ಹೋಲಿಸಿದರೆ ಚಾಲ್ತಿ ಖಾತೆ ಕೊರತೆಯು ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ದ್ವಿಗುಣಗೊಂಡಿದೆ ಮತ್ತು ಒಂದು ವರ್ಷದ ಹಿಂದಿನ ಎರಡನೇ ತ್ರೈಮಾಸಿಕಕ್ಕೆ ಹೋಲಿಸಿದರೆ ತ್ರಿಗುಣಗೊಂಡಿದೆ. ಚಾಲ್ತಿ ಖಾತೆಯ ಅಗಾಧ ಕೊರತೆಯಷ್ಟೇ ಅಲ್ಲ, ವಿದೇಶಗಳೊಂದಿಗೆ ನಮ್ಮ ವ್ಯಾಪಾರ ಮತ್ತು ಇತರ ವಹಿವಾಟುಗಳ ಸಂಬಂಧವಾಗಿ ಒಟ್ಟು ಒಳಹರಿದ ಮತ್ತು ಹೊರಹರಿದ ಹಣದ (ವಿದೇಶಿ ವಿನಿಮಯ) ಬಾಬ್ತು ಶಿಲ್ಕು ಗಾತ್ರವು ಕನಿಷ್ಟ ಮೂರು ಕಾರಣಗಳಿಗಾಗಿ ಕಳವಳಕಾರಿಯಾಗಿದೆ. ಮೊದಲನೆಯದಾಗಿ, ಹಿಂದಿನ ತ್ರೈಮಾಸಿಕಕ್ಕೆ ಹೋಲಿಸಿದರೆ, ಚಾಲ್ತಿ ಖಾತೆ ಕೊರತೆಯು 18.2 ಬಿಲಿಯನ್ ಡಾಲರ್‌ಗಳಷ್ಟು ಹೆಚ್ಚಾಗಲು ಕಾರಣವೆಂದರೆ, ನಮ್ಮ ವ್ಯಾಪಾರ ಕೊರತೆಯ ಹೆಚ್ಚಳವೇ. ಅಂದರೆ, ನಮ್ಮ ರಫ್ತಿಗಿಂತ ಆಮದುಗಳು ಹೆಚ್ಚಿವೆ. ಮೊದಲ ಮತ್ತು ಎರಡನೇ ತ್ರೈಮಾಸಿಕಗಳ ನಡುವೆ ವ್ಯಾಪಾರದ ಕೊರತೆಯು 63 ಬಿಲಿಯನ್ ಡಾಲರ್‌ನಿಂದ 83.5 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರಕಾರ, ಎರಡು ಅಂಶಗಳು ಈ ಕೊರತೆಯನ್ನು ಹೆಚ್ಚಿಸಿವೆ. ಮೊದಲನೆಯದು, ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಉಂಟಾದ ತೈಲ ಬೆಲೆಗಳ ಹೆಚ್ಚಳವು ನಮ್ಮ ಆಮದು ವೆಚ್ಚವನ್ನು ಹೆಚ್ಚಿಸಿದೆ. ಎರಡನೆಯದು, ಜಾಗತಿಕ ಅರ್ಥವ್ಯವಸ್ಥೆಯ ನಿಧಾನಗತಿಯಿಂದಾಗಿ ನಮ್ಮ ರಫ್ತುಗಳು ನೀರಸವಾಗಿವೆ. ವ್ಯಾಪಾರ ಕೊರತೆಯು ಈ ರೀತಿಯಲ್ಲಿ ವಿಸ್ತರಿಸಲು ರೂಪಾಯಿ ಮೌಲ್ಯದಲ್ಲಿನ ಕುಸಿತ ಮತ್ತು ದೇಶೀಯ ಬೇಡಿಕೆಯ ಚೇತರಿಕೆಯಂತಹ ಅಂಶಗಳನ್ನು ಮಾಧ್ಯಮಗಳ ಆರ್ಥಿಕ ವ್ಯಾಖ್ಯಾನಕಾರರು ಮಂಡಿಸುತ್ತಾರೆ. ಆದರೆ ಈ ಪ್ರತಿಪಾದನೆಗಳು ತಪ್ಪಾಗಿವೆ. ಏಕೆಂದರೆ, ರೂಪಾಯಿಯು ದುರ್ಬಲಗೊಂಡಾಗ ಅದು ವ್ಯಾಪಾರ ಕೊರತೆಯನ್ನು ತಗ್ಗಿಸುತ್ತದೆ. ಮೇಲಾಗಿ, ಆದಾಯದ ಪ್ರಾಥಮಿಕ ಮೂಲವಾದ ಜಿಡಿಪಿಯ ಬೆಳವಣಿಗೆಯೇ ಕುಗ್ಗಿರುವಾಗ ಬೇಡಿಕೆಯ ಚೇತರಿಕೆಯು ಕೊರತೆಯನ್ನು ಅಷ್ಟು ಮಟ್ಟಿಗೆ ವಿಸ್ತರಿಸುವುದು ಶಕ್ಯವಿಲ್ಲ.

> **ಭಾರತದ ಕೈಗಾರಿಕಾ ಜಡತೆಯು ಜಿಡಿಪಿಯ ಬೆಳವಣಿಗೆ ದರವನ್ನು ತಗ್ಗಿಸುತ್ತಿದೆ ಮತ್ತು ಮಂದಗತಿಯ ಜಿಡಿಪಿಯ ಬೆಳವಣಿಗೆಯ ಹೊರತಾಗಿಯೂ ವ್ಯಾಪಾರ ಕೊರತೆಯ ಗಾತ್ರ ಏರಿಕೆಯಾಗಿದೆ. ವ್ಯಾಪಾರ ಕೊರತೆಯ ಈ ಹೆಚ್ಚಳವು ಭಾರತದಲ್ಲಿ ಬಡ್ಡಿ ದರಗಳು ಖಂಡಿತವಾಗಿಯೂ ಮತ್ತಷ್ಟು ಏರಿಕೆಯಾಗಲು ಕಾರಣವಾಗುತ್ತದೆ. ಹಲವು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಬಡ್ಡಿ ದರಗಳನ್ನು ಮತ್ತಷ್ಟು ಏರಿಸಲಾಗುತ್ತದೆ.**

ಶೀಘ್ರದಲ್ಲೇ ಮರೆಯಾಗುವಂತಹ ಸಮಸ್ಯೆಗಳಲ್ಲ:

ರಿಸರ್ವ್ ಬ್ಯಾಂಕ್ ಗುರುತಿಸಿರುವ ಈ ಎರಡು ಅಂಶಗಳ ಸಮಸ್ಯೆಯೆಂದರೆ ಅವು ಶೀಘ್ರದಲ್ಲೇ ಮರೆಯಾಗುವಂತಹ ಸಮಸ್ಯೆಗಳಲ್ಲ. ಉಕ್ರೇನ್ ಯುದ್ಧವು ಕೆಲವು ದ್ವಿಪಕ್ಷೀಯ ವಿಷಯಗಳಿಗೆ ಸಂಬಂಧಿಸಿ ಕೇವಲ ಎರಡು ದೇಶಗಳ ನಡುವೆ ನಡೆಯುತ್ತಿರುವ ಒಂದು ಯುದ್ಧವಲ್ಲ. ಈ ಯುದ್ಧವು ಭವಿಷ್ಯದಲ್ಲಿ ಸಾಮ್ರಾಜ್ಯಶಾಹಿಯು ಯಾವ ರೂಪವನ್ನು ತಳೆಯುತ್ತದೆ ಎಂಬುದಕ್ಕೆ ಸಂಬಂಧಿಸಿರುವುದರಿಂದ ಅದು ಒಂದು ನಿರ್ಣಾಯಕ ಮಹತ್ವವನ್ನು ಪಡೆಯುತ್ತದೆ. ಈ ಕಾರಣದಿಂದಾಗಿ ಯುದ್ಧವು ಯಾವುದೇ ಸರಳವಾದ ಹಾಗೂ ಸೌಹಾರ್ದಯುತವಾದ ಪರಿಹಾರದ ಮೂಲಕ ಅಂತ್ಯವಾಗುವುದನ್ನು ಸಾಮ್ರಾಜ್ಯಶಾಹಿಯು ಪ್ರತಿರೋಧಿಸುತ್ತದೆ. ಅದೇ ರೀತಿಯಲ್ಲಿ, ಉಕ್ರೇನ್ ಯುದ್ಧ ಆರಂಭವಾಗುವ ಮುನ್ನವೇ ತಲೆದೋರಿದ ಹಣದುಬ್ಬರವು ಮೆಟ್ರೋಪಾಲಿಟನ್ ದೇಶಗಳಲ್ಲಿ ಈಗ ಒಂದು ಅತ್ಯಂತ ಗಂಭೀರ ಸ್ವರೂಪವನ್ನು ಪಡೆದಿದೆ. ಈ ಹಣದುಬ್ಬರವನ್ನು ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಸೃಷ್ಟಿಯ ಮೂಲಕ ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಈ ಪ್ರಯತ್ನವೂ ಸಹ, ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ಹಾಗಾಗಿ, ವಿದೇಶಿ ವ್ಯಾಪಾರ ಕೊರತೆಯು 2022–23ರ ಎರಡನೇ ತ್ರೈಮಾಸಿಕದಲ್ಲಿದ್ದ ರೀತಿಯಲ್ಲಿಯೇ ಇನ್ನೂ ಸ್ವಲ್ಪ ಸಮಯದವರೆಗೂ ಪ್ರತಿಕೂಲವಾಗಿಯೇ ಮುಂದುವರಿಯುತ್ತದೆ.

ಕಳವಳ ಉಂಟುಮಾಡುವ ಎರಡನೇ ಕಾರಣವೆಂದರೆ, 2022ರ ಕ್ಯಾಲೆಂಡರ್ ವರ್ಷದಲ್ಲಿ ರೂಪಾಯಿಯ ವಿನಿಮಯ ದರದಲ್ಲಿ ಉಂಟಾದ ಶೇ.ಹತ್ತರಷ್ಟು ತೀವ್ರ ಕುಸಿತದ ನಡುವೆ ಈ ಕೊರತೆ ಸಂಭವಿಸಿದೆ. ಸಾಮಾನ್ಯವಾಗಿ, ವಿನಿಮಯ ದರದ ಇಳಿಕೆಯು ವಿದೇಶ ವ್ಯಾಪಾರ–ವಹಿವಾಟುಗಳಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ ಎಂದು ಭಾವಿಸಲಾಗಿದೆ. ಸಮತೋಲನವನ್ನು ಕಾಪಾಡಿಕೊಳ್ಳುವ ಪ್ರಯತ್ನಗಳು ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ, ವ್ಯಾಪಾರ ಕೊರತೆ ಮತ್ತು ರೂಪಾಯಿಯ ಇಳಿಕೆ ಇವುಗಳು ಏಕಕಾಲದಲ್ಲೆ ಸಂಭವಿಸುವುದು ಆಶ್ಚರ್ಯದ ವಿಷಯವಾಗಬಾರದು ನಿಜ. ಆದರೆ, ವ್ಯಾಪಾರದ ಬೃಹತ್ ಕೊರತೆಯು ಒಂದು ಪಟ್ಟು ಹಿಡಿದ ರೀತಿಯಲ್ಲಿ ಮುಂದುವರೆಯುವ ಅಂಶವು ವಿನಿಮಯ ದರಗಳು ಇಳಿಯುತ್ತವೆ ಎಂಬ ನಿರೀಕ್ಷೆಯನ್ನು ಹುಟ್ಟಿಹಾಕುತ್ತದೆ. ಈ ನಿರೀಕ್ಷೆಯು, ಹಣಕಾಸು ಬಂಡವಾಳ ಹೊರಕ್ಕೆ ಹರಿಯುವಂತೆ ಮಾಡುವ ಮೂಲಕ ವಿನಿಮಯ ದರದ ವಾಸ್ತವ ಅಪಮೌಲ್ಯಕ್ಕೆ ಕಾರಣವಾಗುತ್ತದೆ. ಹೆಚ್ಚುತ್ತಿರುವ ವ್ಯಾಪಾರ ಕೊರತೆಗೆ ಕಾರಣವೆಂದು ರಿಸರ್ವ್ ಬ್ಯಾಂಕ್ ಉಲ್ಲೇಖಿಸಿದ ಎರಡರಲ್ಲಿ ಯಾವ ಅಂಶವೂ, ಸಾಕಷ್ಟು ಸಮಯದ ನಂತರವೂ, ವಿನಿಮಯ ದರ ಇಳಿಕೆಯ ಮೇಲೆ ಪರಿಣಾಮ ಬೀರುವುದಿಲ್ಲವಾದ್ದರಿಂದ, ಅಂತಹ ಒಂದು ಪರಿಸ್ಥಿತಿಯಲ್ಲಿ ರೂಪಾಯಿಯ ಕುಸಿತವು ತೀವ್ರಗೊಳ್ಳುತ್ತದೆ ಮತ್ತು ರೂಪಾಯಿ ಕರೆನ್ಸಿಯನ್ನು ಈಗಾಗಲೇ ಏಷ್ಯಾದ ದುರ್ಬಲ ಕರೆನ್ಸಿಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ರೂಪಾಯಿಯ ಕುಸಿತವು ಮುಂದುವರೆದಿದ್ದೇ ಆದರೆ, ಆಗ, ಆಮದು ಮಾಡಿಕೊಂಡ ಒಳಹರಿವುಗಳಿಂದ ಹೊಮ್ಮುವ ವೆಚ್ಚ–ತಳ್ಳಿಕೆಯ ಪರಿಣಾಮವು ದೇಶದಲ್ಲಿ ಹಣದುಬ್ಬರವನ್ನು ನಿರಂತರಗೊಳಿಸುತ್ತದೆ.

ಭಾರತವು ಹೊಂದಿರುವ ಅಪಾರ ಪ್ರಮಾಣದ ವಿದೇಶಿ ವಿನಿಮಯ ಸಂಗ್ರಹವು ರೂಪಾಯಿಯ ಕುಸಿತವನ್ನು ತಡೆಯುತ್ತದೆ ಎಂದು ಭಾವಿಸಬಹುದು. ಆದರೆ, ರೂಪಾಯಿಯ ಮೌಲ್ಯವನ್ನು ಸ್ಥಿರಗೊಳಿಸುವ ಪ್ರಯತ್ನದಲ್ಲಿ ರಿಸರ್ವ್ ಬ್ಯಾಂಕ್ ಈಗಾಗಲೇ ಸುಮಾರು ನೂರು ಬಿಲಿಯನ್ ಡಾಲರ್ ಹಣವನ್ನು ವೆಚ್ಚ ಮಾಡಿದ್ದರೂ ಸಹ, ರೂಪಾಯಿಯು ಕುಸಿಯುತ್ತಲೇ ಇದೆ. 2022–23ರ ಎರಡನೇ ತ್ರೈಮಾಸಿಕದಲ್ಲೇ ಮೀಸಲು ಸಂಗ್ರಹವು 25 ಶತಕೋಟಿ ಡಾಲರ್‌ಗಳಷ್ಟು ಇಳಿಕೆಯಾಗಿದೆ.

ಮೀಸಲುಗಳನ್ನು ಇಳಿಕೆಮಾಡಿಕೊಂಡರೂ ರೂಪಾಯಿಯ ಕುಸಿತವನ್ನು ತಡೆಯಲಾಗದು:

ಅದೂ ಅಲ್ಲದೆ, ಮೀಸಲುಗಳ ಗಾತ್ರವು ಕುಗ್ಗುತ್ತಿದ್ದಂತೆಯೇ, ರೂಪಾಯಿಯ ಸ್ಥಿರತೆಯ ಬಗ್ಗೆ ಊಹಾಪೋಹಗಳು ಉಲ್ಬಣಗೊಳ್ಳುತ್ತವೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ಆದ್ದರಿಂದ, ನಮ್ಮ ಬೃಹತ್ ಪ್ರಮಾಣದ ಮೀಸಲು ಸಂಗ್ರಹದ ಹೊರತಾಗಿಯೂ ಭಾರತದ ಪಾವತಿ ಶೇಷದ ಸಮಸ್ಯೆಯು ಕಳವಳಕಾರಿಯಾಗಿಯೇ ಉಳಿಯುತ್ತದೆ.

ಬಡ್ಡಿ ದರಗಳು ಮತ್ತಷ್ಟು ಏರಬಹುದು:

ವಿದೇಶ ವ್ಯಾಪಾರ–ವಹಿವಾಟುಗಳ ಈ ಪರಿಸ್ಥಿತಿಯು ಅರ್ಥವ್ಯವಸ್ಥೆಗೆ ಹಾನಿಯುಂಟು ಮಾಡುವ ಮೂರನೆಯ ಕಾರಣವು ಹೀಗಿದೆ: ಜಿಡಿಪಿಯ ಬೆಳವಣಿಗೆಯು ನಿಕೃಷ್ಟವಾಗಿರುವ ಪರಿಸ್ಥಿತಿಯಲ್ಲಿ ವ್ಯಾಪಾರ ಕೊರತೆ ಹೆಚ್ಚಿದೆ. 2022–23ರ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್–ಜೂನ್), 2021–22ರ ಅದೇ ತ್ರೈಮಾಸಿಕಕ್ಕೆ ಹೋಲಿಸಿದರೆ, ಶೇ. 13.5ರಷ್ಟಿದ್ದ ಜಿಡಿಪಿ ಬೆಳವಣಿಗೆಯು ಕೋವಿಡ್‌ನಿಂದಾಗಿ ಕೆಳಗೆ ಬಿದ್ದ ಪ್ರಪಾತದಿಂದ ಮೇಲೇರುತ್ತಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಆದರೆ, 2022–23ರ ಎರಡನೇ ತ್ರೈಮಾಸಿಕದ ಜಿಡಿಪಿಯ ಬೆಳವಣಿಗೆಯು, 2021–22ರ ಅದೇ ತ್ರೈಮಾಸಿಕಕ್ಕೆ ಹೋಲಿಸಿದರೆ, ಕೇವಲ ಶೇ. 6.3 ರಷ್ಟಿದೆ. ಆದರೆ, ಈ ತ್ರೈಮಾಸಿಕದಲ್ಲಿ ಸೇರ್ಪಡೆಯಾದ ಒಟ್ಟು ಮೌಲ್ಯವರ್ಧನೆಯ (ಜಿವಿಎ–ಉತ್ಪಾದನೆಯಲ್ಲಿನ ನೈಜ ಹೆಚ್ಚಳವನ್ನು ಅಳೆಯುವ ವಿಧಾನ) ಪ್ರಕಾರ, ಜಿಡಿಪಿಯು ಒಳಗೊಂಡಿರುವ ತೆರಿಗೆಗಳಲ್ಲಿ ಆಗಿರುವ ಬದಲಾವಣೆಗಳನ್ನು ನಿರ್ಲಕ್ಷಿಸಿದರೆ, ಜಿಡಿಪಿಯು ಕೇವಲ ಶೇ. 5.6ರಷ್ಟಾಗುತ್ತದೆ. ಬೆಳವಣಿಗೆಯ ಈ ಮಂದಗತಿಗೆ ಕಾರಣವೆಂದರೆ, ಉತ್ಪಾದನಾ ವಲಯವು ನಿಧಾನಗತಿಯಲ್ಲಿದೆ ಎಂಬುದು. ಈ ವಿದ್ಯಮಾನವು ಪ್ರಾಸಂಗಿಕವೇನಲ್ಲ. ಹಠಹಿಡಿದ ರೀತಿಯಲ್ಲಿ ಅದು ಮುಂದುವರಿಯುತ್ತಲೇ ಇದೆ (ಜನಶಕ್ತಿ, ಸಂಚಿಕೆ 1/2023). ಸಂಕ್ಷಿಪ್ತವಾಗಿ ಹೇಳುವುದಾದರೆ, ಭಾರತದ ಕೈಗಾರಿಕಾ ಜಡತೆಯು ಜಿಡಿಪಿಯ ಬೆಳವಣಿಗೆ ದರವನ್ನು ತಗ್ಗಿಸುತ್ತಿದೆ ಮತ್ತು ಮಂದಗತಿಯ ಜಿಡಿಪಿಯ ಬೆಳವಣಿಗೆಯ ಹೊರತಾಗಿಯೂ ವ್ಯಾಪಾರ ಕೊರತೆಯ ಗಾತ್ರ ಏರಿಕೆಯಾಗಿದೆ. ವ್ಯಾಪಾರ ಕೊರತೆಯ ಈ ಹೆಚ್ಚಳವು ಭಾರತದಲ್ಲಿ ಬಡ್ಡಿ ದರಗಳು ಖಂಡಿತವಾಗಿಯೂ ಮತ್ತಷ್ಟು ಏರಿಕೆಯಾಗಲು ಕಾರಣವಾಗುತ್ತದೆ. ಹಲವು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಬಡ್ಡಿ ದರಗಳನ್ನು ಮತ್ತಷ್ಟು ಏರಿಸಲಾಗುತ್ತದೆ. ವ್ಯಾಪಾರ ಕೊರತೆಗೆ ಹಣಕಾಸು ಒದಗಿಸಿಕೊಳ್ಳಲು ಜಾಗತಿಕ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ, ದೇಶೀಯ ಬೇಡಿಕೆಯನ್ನು ಮೊಟಕುಗೊಳಿಸುವ ಮೂಲಕ ಕೊರತೆಯನ್ನು ಕಡಿಮೆ ಮಾಡುವ ಸಲುವಾಗಿ, ಮತ್ತು ಕುಸಿಯುತ್ತಿರುವ ರೂಪಾಯಿಯಿಂದಾಗಿ ಅಂಕೆ ತಪ್ಪಿದ ಹಣದುಬ್ಬರವನ್ನು ನಿಗ್ರಹಿಸುವ ಸಲುವಾಗಿ. ಅನೇಕ ಆರ್ಥಿಕ ಸಂಕಷ್ಟಗಳನ್ನು ಎದುರಿಸಲು ನವ ಉದಾರೀ ಬಂಡವಾಳಶಾಹಿಯು ಹೊಂದಿದ ಏಕೈಕ ಸಾಧನವೆಂದರೆ, ಬಡ್ಡಿ ದರವೇ. ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗವನ್ನು ಸೃಷ್ಟಿಸುವ ಈ ಸಾಧನವನ್ನು ನವ ಉದಾರೀ ಬಂಡವಾಳಶಾಹಿಯು ಮುಂಬರುವ ದಿನಗಳಲ್ಲಿ ವ್ಯಾಪಕವಾಗಿ ಬಳಸಲಿದೆ. ಹಾಗಾಗಿ, ಜಿಡಿಪಿಯ ಬೆಳವಣಿಗೆಯ ದರ ಮತ್ತಷ್ಟು ಹಾಳಾಗುತ್ತದೆ. ನಿರುದ್ಯೋಗ ಉಲ್ಬಣಗೊಳ್ಳುತ್ತದೆ ಮತ್ತು ಸಂಕಷ್ಟಗಳು ಹೆಚ್ಚುತ್ತವೆ. ವಿಸ್ತಾರಗೊಳ್ಳುತ್ತಿರುವ ವ್ಯಾಪಾರ ಕೊರತೆಯು ಅರ್ಥವ್ಯವಸ್ಥೆಯ ಉತ್ಕರ್ಷದಿಂದ ಸಂಭವಿಸುತ್ತಿಲ್ಲ, ಬದಲಿಗೆ, ಕೈಗಾರಿಕಾ ಜಡತೆಯ ಅವಧಿಯಲ್ಲಿ ಸಂಭವಿಸುತ್ತಿದೆ ಎಂಬ ಅಂಶವು ಅರ್ಥವ್ಯವಸ್ಥೆಯು ಹದಗೆಡಲಿದೆ ಎಂಬುದರ ಮುನ್ಸೂಚನೆಯಾಗಿ ಕಾಣುತ್ತಿದೆ.

ಗಂಭೀರ ಕಾಳಜಿಯ ವಿಷಯ


ಪ್ರಸಕ್ತ ಪರಿಸ್ಥಿತಿ ಹೊಸದೇನಲ್ಲ ಎಂದು ಕೆಲವರು ಹೇಳಬಹುದು. 2012–13ರಲ್ಲಿ, ಅಮೆರಿಕಾ ಅನುಸರಿಸಲು ಹೊರಟ ಬಿಗಿ ಹಣಕಾಸು ನೀತಿಯ ಸೂಚನೆಯಾಗಿ, ಅದರ ಫೆಡರಲ್ ರಿಸರ್ವ್ ಬೋರ್ಡ್ ಬಾಂಡ್

ಖರೀದಿಯನ್ನು ಕ್ರಮೇಣ ಕಡಿಮೆ ಮಾಡಿದ ಪರಿಣಾಮವಾಗಿ, ಇದೇ ರೀತಿಯಲ್ಲಿ ನಮ್ಮ ವ್ಯಾಪಾರ ಕೊರತೆಯ ವಿಸ್ತರಣೆ ಮತ್ತು ರೂಪಾಯಿಯ ಕುಸಿತದಿಂದಾಗಿ ದೇಶವು ಇದೇ ರೀತಿಯ ದುಃಸ್ಥಿತಿಯನ್ನು ಎದುರಿಸಿತ್ತು. ದೇಶವು ಆರ್ಥಿಕ ಸಂಕಷ್ಟಗಳ ಅವಧಿಗೆ ಒಳಗಾಯಿತು ನಿಜ. ಆದರೆ ಅದು ದಾಟಲಾಗದ ರೀತಿಯ ಬಿಕ್ಕಟ್ಟನ್ನು ಸೃಷ್ಟಿಸಿರಲಿಲ್ಲ. ಹಾಗಾಗಿ, ಅದೇ ರೀತಿಯ ಒಂದು ಪರಿಸ್ಥಿತಿಯು ಈಗ ಒಂದು ಗಂಭೀರ ಕಾಳಜಿಯ ವಿಷಯವಾಗಬೇಕು ಏಕೆ?

ಅಂದಿನ ಮತ್ತು ಇಂದಿನ ಪರಿಸ್ಥಿತಿಗಳ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಜಾಗತಿಕ ಅರ್ಥವ್ಯವಸ್ಥೆಯ ಅಂದಿನಂತಲ್ಲದೆ ಇಂದು ಒಂದು ತೀವ್ರ ಹಣದುಬ್ಬರದ

ಪುಟ 15 ಕ್ಕೆ

ಬ್ರೆಜಿಲ್ ನಲ್ಲಿ ಉಗ್ರ ಬಲಪಂಥೀಯ ದಂಗೆ, ಕ್ಷಿಪ್ರಕ್ರಾಂತಿಗೆ ವಿಫಲ ಪ್ರಯತ್ನ



ಜನವರಿ 8 ರಂದು ಬ್ರೆಜಿಲ್ ರಾಧಾನಿಯಲ್ಲಿ ಭಾರೀ ದಂಗೆ ಮತ್ತು ಮಿಲಿಟರಿ ಕ್ಷಿಪ್ರಕ್ರಾಂತಿಗೆ ಪ್ರಯತ್ನ ನಡೆಯಿತು. ಅದನ್ನು ಹತ್ತಿಕ್ಕಲಾಗಿದೆ. ಜಾಗತಿಕವಾಗಿ ಈ ಪ್ರಜಾಪ್ರಭುತ್ವ–ವಿರೋಧಿ ದಂಗೆ ತೀವ್ರ ಖಂಡನೆಗೆ ಒಳಗಾಗಿದೆ. ಈ ದಂಗೆಯ ವಿಲಕ್ಷಣತೆಯೆಂದರೆ, ಇದು 2 ವರ್ಷಗಳ ಹಿಂದೆ ಯು.ಎಸ್ ನ ರಾಜಧಾನಿ ವಾಶಿಂಗಟನ್ ನಲ್ಲಿ ನಡೆದ ಇಂತಹುದೇ ದಂಗೆಯ 'ಆಕ್ಶನ್ ರಿಪ್ಲೇ' ಇದ್ದಂತಿತ್ತು. 'ಲುಲಾ–ವಿರೋಧಿ ಆಂತರಿಕ ಮತ್ತು ವಿದೇಶೀ ಶಕ್ತಿಗಳು ಈ ದಂಗೆಗಳ ಹಿಂದೆಯಿವೆ. ಬೋಲ್ಸನಾರೋ ಸೋತಿದ್ದರೂ ಬೋಲ್ಸನಾರೋ ವಾದ ಸೋತಿಲ್ಲ' ಎಂಬುದನ್ನು ಈ ಘಟನೆ ನೆನಪಿಸಿದೆ. ಲುಲಾ ಆಡಳಿತ ಮತ್ತು ಬ್ರೆಜಿಲ್ ಜನತೆ ಈ ಸವಾಲನ್ನು ಹೇಗೆ ಎದುರಿಸುತ್ತಾರೆ ಎನ್ನುವುದರ ಮೇಲೆ ಬ್ರೆಜಿಲ್ ಪ್ರಜಾಪ್ರಭುತ್ವ ಮತ್ತು ಲ್ಯಾಟಿನ್ ಪ್ರಗತಿಪರರ ಮುನ್ನಡೆ ಆಧರಿಸಿರುತ್ತದೆ.



ವಸಂತರಾಜ ಎನ್.ಕೆ.

ಬ್ರೆಜಿಲ್ ನ ರಾಜಧಾನಿ ಬ್ರೆಸಿಲಿಯಾ ದಲ್ಲಿ ಜನವರಿ 8 ಭಾನುವಾರದಂದು ಸಾವಿರಾರು ಮಾಜಿ ಅಧ್ಯಕ್ಷ ಬೋಲ್ಸನಾರೊ ಬೆಂಬಲಿಗರು ಅಧ್ಯಕ್ಷೀಯ ಸದನ, ಪಾರ್ಲಿಮೆಂಟ್ ಮತ್ತು ಸುಪ್ರೀಂ ಕೋರ್ಟ ಇರುವ ಕಟ್ಟಡಗಳಿಗೆ ನುಗ್ಗಿ ಕೆಲವು ಗಂಟೆಗಳ ಕಾಲ ದಾಂದಲೆ ಮಾಡಿದರು, ಪೀಠೋಪಕರಣಗಳನ್ನು ಧ್ವಂಸ ಮಾಡಿದರು. ಗಾಜುಗಳನ್ನು ಒಡೆದರು. ಭಾನುವಾರವಾದ್ದರಿಂದ ಈ ಕಚೇರಿಗಳಲ್ಲಿ ಸಿಬ್ಬಂದಿ ಇಲ್ಲವಾದ್ದರಿಂದ ಯಾರೂ ಗಾಯಗೊಂಡಿಲ್ಲ. ಆದರೆ ಕಟ್ಟಡದಲ್ಲಿದ್ದ ಕಚೇರಿಗಳಲ್ಲಿ ವ್ಯಾಪಕ ಹಾನಿ ಮಾಡಲಾಯಿತು. ಬ್ರೆಜಿಲ್ ನ ಹಲವು ಪ್ರದೇಶಗಳಿಂದ ನೂರಾರು ಬಸ್ ಗಳಲ್ಲಿ ಬಂದ ಸಾವಿರಾರು ಜನ ರಾಜಧಾನಿಯಲ್ಲಿದ್ದ ದೊಡ್ಡ ಗುಂಪಿನೊಂದಿಗೆ ಸೇರಿಕೊಂಡರು. ಈ ಕಟ್ಟಡಗಳನ್ನು ಕಾವಲು ಕಾಯುತ್ತಿದ್ದ ಮಿಲಿಟರಿ ಪೋಲಿಸ್ ದಂಗೆಕೋರರು ಅದನ್ನು ಪ್ರವೇಶಿಸಲು ತೀವ್ರ ಅಡೆತಡೆ ಒಡ್ಡಲಿಲ್ಲ. ದಂಗೆಕೋರರ ದಾಂಧಲೆ ತಡೆಯುವುದರಲ್ಲೂ ವಿಫಲರಾದರು. ಕೆಲವು ಕಡೆ ಪೋಲಿಸರು ದಂಗೆಕೋರರರಿಗೆ ದಾರಿ ಮಾಡಿಕೊಡುವ, ಮತ್ತು ದಾರಿ ತೋರಿಸುವ, ಅವರ ಜತೆ ಪರಿಚಿತ ಸ್ನೇಹಿತರಂತೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ವಿಡಿಯೊಗಳೂ ಹೊರಬಂದಿದ್ದು, ಪೋಲೀಸರ ಕನಿಷ್ಠ ಒಂದು ವಿಭಾಗ ದಂಗೆಕೋರರ ಜತೆ ಶಾಮೀಲಾಗಿದ್ದರು ಎಂಬ ಸಂಶಯಕ್ಕಡೆ ಮಾಡಿದೆ.

ಪ್ರಜಾಪ್ರಭುತ್ವದ ಮೇಲೆ ದಾಳಿ

ಕಳೆದ ತಿಂಗಳು ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯ ಗಳಿಸಿದ್ದ ಎಡಪಂಥೀಯ ನಾಯಕ ಲುಲಾ ಡಿ ಸಿಲ್ವಾ ಜನವರಿ 1 ರಂದು ಅಧಿಕಾರ ವಹಿಸಿಕೊಂಡಿದ್ದರು. ಚುನಾವಣೆಯಲ್ಲಿ ಸೋತಿದ್ದ ನಿಕಟಪೂರ್ವ ಅಧ್ಯಕ್ಷ ಬೋಲ್ಸನಾರೊ ಲುಲಾ ಗೆಲುವನ್ನು ಸ್ವೀಕರಿಸಿ ಔಪಚಾರಿಕವಾಗಿಯೂ ಅಭಿನಂದಿಸಿರಲಿಲ್ಲ. ಲುಲಾ ಅವರ ಪದಗ್ರಹಣದ 2 ದಿನ ಮೊದಲು ಯು.ಎಸ್ ಗೆ ತೆರಳಿದ್ದರು. ರಾಜಧಾನಿಯಲ್ಲಿ ದಂಗೆಯೆಬ್ಬಿಸಿದ ಜನ ರಾಷ್ಟ್ರಧ್ವಜದ ಬಣ್ಣಗಳ ಉಡುಪು ತೊಟ್ಟಿದ್ದು ಬೊಲ್ಸನಾರೊ ಚುನಾವಣಾ ಚಿಹ್ನಗಳನ್ನು ತಂದಿದ್ದರು. ಬೊಲ್ಸನಾರೊ ಅವರು ದಂಗೆಯಲ್ಲಿ ನೇರವಾಗಿ ಪಾಲುಗೊಳ್ಳದಿದ್ದರೂ, ದೇಶದಲ್ಲೇ ಇಲ್ಲದಿದ್ದರೂ ಅವರ ಬೆಂಬಲಿಗರು ಅವರ ಹೆಸರಿನಲ್ಲೇ ಈ ದಂಗೆ ನಡೆಸಿದ್ದರು. ಕೆಲವು ಗಂಟೆಗಳ ಕಾಲ ದಂಗೆ ಅವ್ಯಾಕತವಾಗಿ ನಡೆದಿದ್ದು ಮತ್ತು ಅದನ್ನು ತಡೆಯುವಲ್ಲಿ ಪೋಲಿಸರ ವೈಫಲ್ಯ ಕಂಡು, ಅಧ್ಯಕ್ಷ ಲುಲಾ ಅವರ ಫೆಡೆರಲ್ ಸರಕಾರ ತನ್ನ ಪಡೆಗಳನ್ನು ಕಳಿಸಿತು. ಆ ನಂತರ ಕೆಲವೇ ಹೊತ್ತಲ್ಲಿ ದಂಗೆ ಅಡಗಿಸಲು ಸಾಧ್ಯಂವಾಯಿತು. ಈ ಕಟ್ಟಡಗಳಲ್ಲಿ ಇನ್ನೂ ಇದ್ದ 600ಕ್ಕೂ ಹೆಚ್ಚು ದಂಗೆಕೋರರನ್ನು ಬಂಧಿಸಲಾಗಿದೆ. ಮಿಲಿಟರಿ ಕಚೇರಿಯ ಮುಂದೆ ಟೆಂಟ್ ಹಾಕಿಕೊಂಡು ಲುಲಾ ಚುನಾಯಿತರಾದಂದಿನಿಂದ ಪ್ರತಿಭಟನೆ ನಡೆಸುತ್ತಿದ್ದ ಬೊಲ್ಸನಾರೊ ಬೆಂಬಲಿಗರನ್ನೂ ಬಂಧಿಸುವ ಮಿಂಚಿನ ಕ್ರಮವನ್ನು ಫೆಡೆರಲ್ ಪಡೆಗಳು ಕೈಗೊಂಡಿವೆ. ದಂಗೆಕೋರರಿಗೆ ಬಸ್ ಮತ್ತಿತರ ಮೂಲಸೌಕರ್ಯ ಒದಗಿಸಿದವರು, ದಂಗೆಕೋರರಿಗೆ ಧನಸಹಾಯ ಮತ್ತಿತರ ಬೆಂಬಲ ನೀಡಿದವರ ಕುರಿತು, ತನಿಖೆ ನಡೆಸಿ ಕಟು ಕ್ರಮಕೈಗೊಳ್ಳುವುದಾಗಿ ಲುಲಾ ಹೇಳಿದ್ದಾರೆ.

ಬ್ರೆಸಿಲಿಯಾದ ಫೆಡೆರಲ್ ಜಿಲ್ಲೆಯ ಗವರ್ನರ್ ಮತ್ತು ಸಾರ್ವಜನಿಕ ಭದ್ರತೆಯ ಸಚಿವ ಇಬ್ಬರೂ ಬೊಲ್ಸನಾರೊ ಬೆಂಬಲಿಗರಾಗಿದ್ದು ದಂಗೆ ಅಡಗಿಸುವಲ್ಲಿ ಮುತುವರ್ಜಿ ತೋರಿಸಲಿಲ್ಲ. ಗವರ್ನರ್ ಯು.ಎಸ್ ಪ್ರವಾಸದಲ್ಲಿದ್ದರೆ, ಭದ್ರತಾ ಸಚಿವ ರಜೆಯಲ್ಲಿದ್ದ!. ಅಧಯಿಸಕ್ಷ ಲುಲಾ ಸಚಿವರನ್ನು ವಜಾ ಮಾಡಿದ್ದು, ಗವರ್ನರನ್ನು ಅಮಾನತಿನಲ್ಲಿ ಇಟ್ಟಿದ್ದಾರೆ. ಈ ದಂಗೆಯನ್ನು ಸಂಘಟಿಸುವಲ್ಲಿ ನೆರವು ನೀಡಿದವರನ್ನು ಪತ್ತೆ ಹಚ್ಚಿ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲೆ ಮಾಡಲು ಆಜ್ಞೆ ಮಾಡಿದ್ದಾರೆ. ದಂಗೆಕೋರರ ಮೇಲೆ ಕಟು ಕ್ರಮಕ್ಕೆ ಆಜ್ಞೆ ಮಾಡಿದ್ದು ಅವರ ರಾಜಕೀಯ ಅಭಿವ್ಯಕ್ತಿ ಹತ್ತಿಕ್ಕಲು ಅಲ್ಲ. ಬದಲಾಗಿ ಅವರು ಬ್ರೆಜಿಲ್ ನ ಸಾಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ದಾಳಿ ಮಾಡಿದ್ದಕ್ಕಾಗಿ ಎಂದು ಅಧ್ಯಕ್ಷ ಲುಲಾ ಸ್ಪಷ್ಟ ಪಡಿಸಿದ್ದಾರೆ. ಬೊಲ್ಸನಾರೊ ಅವರ ಪಕ್ಷ ಬಿಟ್ಟು ಬ್ರೆಜಿಲ್ ನ ಹೆಚ್ಚಿನ ಪಕ್ಷಗಳು ಈ ದಾಳಿಯನ್ನು ಖಂಡಿಸಿವೆ. ನ್ಯಾಯಾಂಗದ ಪ್ರಮುಖ ವ್ಯಕ್ತಿಗಳೂ ಈ ದಂಗೆಯನ್ನು ಖಂಡಿಸಿದ್ದಾರೆ. ಅದೇ ರೀತಿ ಲ್ಯಾಟಿನ್ ಅಮೆರಿನ್ ದೇಶಗಳ ಮತ್ತು ಹೆಚ್ಚಿನ ಅಂತರ್ರಾಷ್ಟ್ರೀಯ ನಾಯಕರು ಈ ದಂಗೆಯನ್ನು ಬ್ರೆಜಿಲ್ ನ ಸಾಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ದಾಳಿ ಎಂದು ಬಣ್ಣಿಸಿ ಖಂಡಿಸಿದ್ದಾರೆ. ಹಲವು ನಾಯಕರು ಪ್ರಜಾಪ್ರಭುತ್ವವನ್ನು ಮನ್ನಿಸದ ಫ್ಯಾಸಿಸ್ಟ್ ಮನೋಭಾವವೆಂದೂ ಹೇಳಿದ್ದಾರೆ. ಈ ಹಿನ್ನಲೆಯಲ್ಲಿ ಯು.ಎಸ್ ಅಧ್ಯರಕ್ಷ ಬಿಡೆನ್ ಮತ್ತು ಸ್ಪಾನಿಷ್ ಪ್ರಧಾನಿ ಸಹ ಈ ದಂಗೆಯನ್ನು ಖಂಡಿಸಿದ್ದಾರೆ. ಯು.ಎಸ್ ನ 43 ಡೆಮೊಕ್ರಾಟಿಕ್ ಸಂಸದರು ಬೊಲ್ಸನಾರೋ ವೀಸಾ ರದ್ದು ಮಾಡಿ ಬ್ರೆಜಿಲ್ ಗೆ ವಾಪಸು ಕಳಿಸಬೇಕೆಂದು ಒತ್ತಾಯಿಸಿದ್ದಾರೆ. ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಅಂಟೋನಿಯೋ ಗುಟೆರಸ್ ಈ ದಾಳಿಯನ್ನು ಖಂಡಿಸುತ್ತಾ 'ಬ್ರೆಜಿಲ್ ನ ಪ್ರಜಾಪ್ರಭುತ್ವ ಮತ್ತು ಅದರ ಸಂಸ್ಥೆಗಳನ್ನು ಗೌರವಿಸಬೇಕು' ಎಂದು ಹೇಳಿದ್ದಾರೆ. ಬ್ರೆಜಿಲ್ ನಲ್ಲಿ ಒಂದು ಕಡೆ ಬೊಲ್ಸನಾರೊ ಬೆಂಬಲಿಗರ ಪ್ರದರ್ಶನಗಳು ಮುಂದುವರೆದಿವೆ. ಆದರೆ ಅಧ್ಯಕ್ಷ ಲುಲಾ ಬೆಂಬಲಿಸಿ ಈ ದಂಗೆಯನ್ನು ಖಂಡಿಸಿ ಭಾರೀ ಪ್ರದರ್ಶನಗಳು ದೇಶದಾದ್ಯಂತ ವ್ಯಾಪಕವಾಗಿ ನಡೆಯುತ್ತಿವೆ.

ವಾಶಿಂಗ್ಟನ್ ದಂಗೆಗಳ 'ಆಕ್ಶನ್ ರಿಪ್ಲೇ'?!

ಈ ದಂಗೆಯ ಇನ್ನೊಂದು ವಿಲಕ್ಷಣೆತೆಯೆಂದರೆ, ಇದು 2 ವರ್ಷಗಳ ಹಿಂದೆ ಯು.ಎಸ್ ನ ರಾಜಧಾನಿ ವಾಶಿಂಗಟ್ನ್ ನಲ್ಲಿ ನಡೆದ ಇಂತಹುದೇ ದಂಗೆಯ 'ಆಕ್ಶನ್ ರಿಪ್ಲೇ' ಇದ್ದಂತಿತ್ತು. ಟ್ರಂಪ್ ಚುನಾವಣೆ ಸೋತು 2021 ರ ಜನವರಿ 6ರಂದು ಪಾರ್ಲಿಮೆಂಟ್ ನ ಔಪಚಾರಿಕ ಅನುಮೋದನೆಯ ನಂತರ ಬಿಡೆನ್ ಗೆ ಅಧಿಕಾರವನ್ನು ವಹಿಸುವ ದಿನ, ಟ್ರಂಪ್ ಬೆಂಬಲಿಗರು ಪಾರ್ಲಿಮೆಂಟ್ ಕಟ್ಟಡಕ್ಕೆ ನುಗ್ಗಿ ಹಿಂಸಾತ್ಮಕ ದಾಂಧಲೆ ನಡೆಸಿದ್ದರು. ಔಪಚಾರಿಕ ಅನುಮೋದನೆಯನ್ನು ನಿಲ್ಲಿಸಲು ಪ್ರಯತ್ನಿಸಿದ್ದರು. ವಾಶಿಂಗ್ ಟನ್ ದಂಗೆಗಳಲ್ಲಿ ಹಿಂಸಾಚಾರ ಇನ್ನೂ ತೀವ್ರವಾಗಿತ್ತು. ತಮಗೆ ಪ್ರತಿಕೂಲ ಫಲಿತಾಂಶ ಬಂದಾಗ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಶ್ನಿಸುವುದು, ಹಿಂಸಾತ್ಮಕವಾಗಿ ಸಾಂವಿಧಾನಿಕ ಪ್ರಕ್ರಿಯೆಯನ್ನು ನಿಲ್ಲಿಸಲು ಪ್ರಯತ್ನಿಸುವುದು, ಹಿಂದಿನ ಅಧ್ಯಕ್ಷರ ಪರೋಕ್ಷ ಕುಮ್ಮಕ್ಕು ಬೆಂಬಲ – ಎರಡೂ ಕಡೆ ಸಾಮಾನ್ಯ ಅಂಶಗಳಾಗಿದ್ದವು. ಎರಡೂ ಯೋಜಿತ ಸಂಘಟಿತ ಹಿಂಸಾತ್ಮಕ ದಂಗೆಗಳಾಗಿದ್ದವು. ಎರಡರಲ್ಲೂ ದಂಗೆಯ ಮುನ್ಸೂಚನೆಯಿದ್ದರೂ ಅದನ್ನು ತಡೆಯಲು ಪೋಲಿಸ್ ವೈಫಲ್ಯ ಮತ್ತು ಭಾಗಶಃ ಶಾಮೀಲು ಇತ್ತು. ಚುನಾವಣೆಯ ಮೊದಲು ಸಹ ಸೋಲಿನ ಸಾಧ್ಯತೆಯನ್ನು ಮುಂಗಂಡು, 'ಚುನಾವಣಾ ಅಕ್ರಮ ನಡೆಯಲಿದೆ', 'ವಿರೋಧಿ ಅಭ್ಯರ್ಥಿ ಅಕ್ರಮಗಳನ್ನು ಮಾಡಿ ಚುನಾವಣೆಯಲ್ಲಿ ಗೆಲುವು ಸಾಧ್ಯತೆಯಿದೆ',' ಹಾಗೆ ಆದರೆ ಚುನಾವಣಾ ಫಲಿತಾಂಶವನ್ನು ಒಪ್ಪುವುದಿಲ್ಲ' ಎಂದು ಟ್ರಂಪ್, ಬೊಲ್ಸನಾರೊ ಇಬ್ಬರೂ ಹೇಳಿದ್ದರು. ತಾವು ಅಧಿಕಾರದಲ್ಲಿದ್ದುಕೊಂಡು, ವಿರೋಧ ಪಕ್ಷ ಅಕ್ರಮ ಮಾಡಲಿದೆ ಎಂಬ ಹಾಸ್ಯಾಸ್ಪದ ಹುಯಿಲೆಬ್ಬಿಸುವ ವಿಲಕ್ಷಣತೆ, ಚುನಾವಣಾ ಫಲಿತಾಂಶ ವನ್ನು ಪ್ರಶ್ನಿಸಿದಾಗ ಅದನ್ನು ತನಿಖೆ ಮಾಡಿ 'ಅಕ್ರಮ ನಡೆದಿಲ್ಲ' ವೆಂದು ಸಂಬಂಧಿತ ಸಾಂವಿಧಾನಿಕ ಸಂಸ್ಥೆ ತೀರ್ಪು ಕೊಟ್ಟ ಮೇಲೂ ಈ ವಿವಾದವನ್ನು ಮುಂದುವರೆಸುವುದು ಸಹ ಇಬ್ಬರಿಗೂ ಸಾಮಾನ್ಯವಾಗಿತ್ತು.

ಬೊಲ್ಸನಾರೊ ರನ್ನು 'ಲ್ಯಾಟಿನ್ ಅಮೆರಿಕದ ಟ್ರಂಪ್' ಎಂದು ಕರೆಯುವಷ್ಟು ಅವರ ನಡುವೆ ಸಾಮ್ಯವಿತ್ತು. ವೈಯಕ್ತಿಕ ಹಿತಾಸಕ್ತಿಗಾಗಿ ಭ್ರಷ್ಟಾಚಾರ, ಎಲ್ಲದಕ್ಕೂ ಹಿಂದಿನ ಸರಕಾರಗಳನ್ನು ಹಳಿಯುವುದು, ಶ್ರೀಮಂತರ ತೆರಿಗೆ ಕಡಿತ ಮುಂತಾದ ಶ್ರೀಮಂತ–ಪರ ನೀತಿಗಳನ್ನು ಎಗ್ಗಿಲ್ಲದೆ ಪಾಲಿಸುತ್ತಲೇ ಬಡವರ ಪರವೆಂದು ಬಡವರನ್ನು ನಂಬಿಸುವುದು, ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಅಪನಂಬಿಕೆ ಹುಟ್ಟಿಸುವುದು, ಸಾಮಾಜಿಕ ಸಂಪ್ರದಾಯ–ಶರಣತೆಗೆ ಮತ್ತು (ಕೊವಿದ್ ಮಹಾಸೋಂಕು ಇಲ್ಲವೇ ಇಲ್ಲ, ವ್ಯಾಕ್ಸೀನ್ ಅಗತ್ಯವೇ ಇಲ್ಲ ಮುಂತಾದ) ಅವೈಜ್ಞಾನಿಕ ಧೋರಣೆಗಳಿಗೆ ಬೆಂಬಲ, ಗನ್ ನಿಯಂತ್ರಣಕ್ಕೆ ವಿರೋಧ, ಪರಿಸರ ಸಮಸ್ಯೆಗಳ ಪೂರ್ಣ ನಿರಾಕರಣೆ – ಮುಂತಾದ ಉಗ್ರ ಬಲಪಂಥೀಯ ನೀತಿಗಳೂ ಇಬ್ಬರಿಗೂ ಸಾಮಾನ್ಯವಾಗಿದ್ದವು.

ಈ ಎರಡು ದಂಗೆಗಳ ನಡುವೆ ಪ್ರಮುಖ ವ್ಯತ್ಯಾಸಗಳು ಸಹ ಇದ್ದವು. ಟ್ರಂಪ್ ದಂಗೆಯ ಮೊದಲು ದಂಗೆಕೋರರನ್ನು ಉದ್ದೇಶಿಸಿ ಮಾತನಾಡಿ ನೇರವಾಗಿಯೇ ದಂಗೆಗೆ ಹುರಿದುಂಬಿಸಿದ್ದರು. ಆದರೆ ಬೊಲ್ಸನಾರೋ ಕೆಲವು ದಿನಗಳ ಮೊದಲೇ ದೇಶ ಬಿಟ್ಟು ಯು. ಎಸ್ ತೆರಳಿದ್ದರು. ಇದಕ್ಕೆ ಕಾರಣ, ಹಿಂಸಾಚಾರಕ್ಕೆ ನಾಯಕತ್ವ ಕೊಡುವುದಕ್ಕೆ ಹಿಂಜರಿಕೆಯಲ್ಲ, ಅವರ ವಿರುದ್ಧ ಇದ್ದ ಹಲವು ಭ್ರಷ್ಟಾಚಾರ ಮತ್ತು ಅಪರಾಧದ ಪ್ರಕರಣಗಳಲ್ಲಿ ಬಂಧಿಸಿ ಜೈಲಿಗೆ ಹಾಕಬಹುದು ಎಂಬ ಭಯ. ಬ್ರೆಜಿಲ್ ನಲ್ಲಿ ಮಿಲಿಟರಿ ಯನ್ನು ಕ್ಷಿಪ್ರಕ್ರಾಂತಿಯನ್ನು ನಡೆಸುವಂತೆ ದಂಗೆಕೋರರು ಕರೆದ ವ್ಯತ್ಯಾಸವಿತ್ತು. ದಂಗೆಕೋರರು ದಂಗೆಯ ಮೊದಲೇ ಹಲವು ದಿನಗಳ ಕಾಲ ರಾಜಧಾನಿ ಬ್ರೆಸಿಲಿಯ ಸೇರಿದಂತೆ ಮಿಲಿಟರಿ ನೆಲೆಗಳ ಎದುರು ಕ್ಯಾಂಪ್ ಮಾಡಿ ಪ್ರದರ್ಶನ ನಡೆಸಿದ್ದರು. ದಂಗೆಯ ದಿನ ಸಹ 'ಕೂಡಲೆ ಮಿಲಿಟರಿ ಮಧ್ಯಪ್ರವೇಶ ಮಾಡಬೇಕು' ಎಂದು ಬರೆದ ಭಿತ್ತಿಫಲಕಗಳನ್ನು ದಂಗೆ ಕೋರರು ಹಿಡಿದಿದ್ದರು. ಬ್ರೆಜಿಲ್ ನ ಮಿಲಿಟರಿಯಲ್ಲೂ ರಾಜಕೀಯ ಆಕಾಂಕ್ಷೆಯಿರುವ ಹಲವು ಉನ್ನತ ಅಧಿಕಾರಿಗಳು ಇದ್ದರು. ಬೊಲ್ಸನಾರೋ ರ ಆಡಳಿತದಲ್ಲಿ ಹಲವಾರು ಮಾಜಿ ಮಿಲಿಟರಿ ಅಧಿಕಾರಿಗಳನ್ನು ಸಚಿವರಾಗಿ ಸೇರಿಸಿಕೊಂಡಿದ್ದರು. 1960–70ರ ದಶಕದ ಮಿಲಿಟರಿ ಸರ್ವಾಧಿಕಾರವನ್ನು ಬಹಿರಂಗವಾಗಿಯೇ ಸಮರ್ಥಿಸಿದ್ದರು. ಆದ್ದರಿಂದ ಬ್ರೆಜಿಲ್ ನಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿಯ ಸಾಧ್ಯತೆ ಖಂಡಿತ ಇತ್ತು. ಆದರೆ ಯು.ಎಸ್ ನಲ್ಲಿ ಮಿಲಿಟರಿ ಅಧಿಕಾರಿಗಳು ದಂಗೆಯನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸಿದ್ದರು.

'ಬೊಲ್ಸನಾರೋ ಸೋತಿದ್ದರೂ ಬೊಲ್ಸನಾರೋ ವಾದ ಸೋತಿಲ್ಲ'

ಯು.ಎಸ್ ನಲ್ಲಿ 'ಟ್ರಂಪ್ ಸೋತಿದ್ದರೂ ಟ್ರಂಪ್ ವಾದ ಸೋತಿಲ್ಲ' ಎಂದ ಹಾಗೆ ಬ್ರೆಜಿಲ್ ನಲ್ಲೂ 'ಬೊಲ್ಸನಾರೋ ಸೋತಿದ್ದರೂ ಬೊಲ್ಸನಾರೋ ವಾದ ಸೋತಿಲ್ಲ' ಎಂಬುದು ನಿಜವಾಗಿದೆ. ಎಡ–ಪ್ರಜಾಪ್ರಭುತ್ವ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳು ಮತ್ತು ಬಲಪಂಥೀಯ ಶಕ್ತಿಗಳ ರಾಜಕೀಯ ಬೆಂಬಲ ಹೆಚ್ಚು ಕಡಿಮೆ (ಅಧ್ಯಕ್ಷೀಯ ಮತದಾನವನ್ನು ಪರಿಗಣಿಸಿದರೆ) ಸಮನಾಗಿದ್ದು, ಈ ವ ೕ ು ು ಖ ಾ ವ ೕ ು ು ಖ ಮುಂದುವರೆಯುತ್ತದೆ. ಲುಲಾ ರನ್ನು ಬಲವಾಗಿ ವಿರೋಧಿಸುತ್ತಿರುವುದು ಭಾರೀ ಭೂಮಾಲಕರು ಮತ್ತು ಅಮೆಝಾನ್ ಸಂಪತ್ತನ್ನು ಕೊಳ್ಳೆ ಹೊಡೆಯಬಯಸುವ ಕೃಷಿ–ಉದ್ಯಮ ಕಾರ್ಪೊರೆಟ್ ಕಂಪನಿಗಳು. ಅವರೇ ಉಗ್ರ ಬಲಪಂಥೀಯ ಶಕ್ತಿಗಳಿಗೆ ಪ್ರೋತ್ಸಾಹ ಕೊಡುತ್ತಿರುವುದು. ಮಿಲಿಟರಿಯ ಒಂದು ವಿಭಾಗ ಮತ್ತು ಕಾರ್ಪೊರೆಟ್ ಮಾಧ್ಯಮ ಸಹ ಇವರಿಗೆ ಕುಮ್ಮಕ್ಕು ಕೊಡುತ್ತಿದೆ. ಬ್ರೆಜಿಲಿನ ಈ ಬಲಪಂಥೀಯ ಶಕಿಗಳಿಗೆ ಯು.ಎಸ್ ಸರಕಾರ ಮತ್ತು ಆಳುವ ವರ್ಗಗಳ ಪರೋಕ್ಷ ಬೆಂಬಲವಿದೆ. ಇಂದಿನ ಪರಿಸ್ಥಿತಿಯಲ್ಲಿ ಬ್ರೆಜಿಲ್ ನಲ್ಲಿ ಲುಲಾ ಅಧ್ಯಕ್ಷತೆ ಇವರಿಗೆ ಆತಂಕ ತಂದಿದೆ. ತೈಲದ ಬಿಕ್ಕಟ್ಟು ಮತ್ತು ಅದರ ಭೂ–ರಾಜಕೀಯ ಪರಿಣಾಮಗಳು, ಡಾಲರ್ ಪ್ರಧಾನ್ಯಕ್ಕೆ ಬ್ರಿಕ್ಸ್ (ಬ್ರೆಜಿಲ್ ಬ್ರಿಕ್ಸ್ ಸದಸ್ಯ) ಸವಾಲು – ಇವುಗಳ ಹಿನ್ನೆಲೆಯಲ್ಲಿ ಲುಲಾ ಅವರು ವಹಿಸಬಹುದಾದ ಅಂತರ್ರಾಷ್ಟ್ರೀಯ ಪಾತ್ರ ಯು.ಎಸ್ ಗೆ ಆತಂಕ ತಂದಿದೆ. ಇಡೀ ಲ್ಯಾಟಿನ್ ಅಮೆರಿಕವನ್ನು ಒಗ್ಗೂಡಿಸುವ ಅವುಗಳ ನಡುವೆ ಸಹಕಾರ ಸೌಹಾರ್ದತೆ ಹೆಚ್ಚಿಸುತ್ತಾ ಯು.ಎಸ್ ಯಜಮಾನಿಕೆಯನ್ನು ಪ್ರಶ್ನಿಸುವ ಲುಲಾ ಸಾಮರ್ಥ್ಯ ಸಹ ಯು.ಎಸ್ ಗೆ ಆತಂಕಕಾರಿ. ಹೀಗಾಗಿ ಲುಲಾ ಅವರನ್ನು ಬ್ರೆಜಿಲ್ ಒಳಗೆ ರಾಜಕೀಯವಾಗಿ ಕಟ್ಟಿ ಹಾಕಲು ಯು.ಎಸ್ ಹುನ್ನಾರ ನಡೆಸಿ ಈ ಶಕಿಗಳಿಗೆ ದಂಗೆಗೆ ಯೋಜಿಸುವಂತೆ ಪ್ರೇರೇಪಿಸಿರಬಹುದು.

ಜನಾರ್ಧನ ರೆಡ್ಡಿ ಅವರ ಹೊಸ ಪಕ್ಷ ಯಾಕಾಗಿ?... ಪುಟ 3 ರಿಂದ

ಎನ್ನುವ ನಂಬಿಕೆ ಬಳ್ಳಾರಿ ಭಾಗದಲ್ಲಿ ಇದೆ ಎನ್ನೋಣ. ಜೊತೆಗೆ ಬಳ್ಳಾರಿಯ ಸಮಾರಂಭದಲ್ಲಿ ಬುರ್ಖಾ ಹಾಕಿದ ಮುಸ್ಲಿಂ ಮಹಿಳೆಯರ ಬಹುದೊಡ್ಡ ತಂಡ ಸಾಲು ಸಾಲಾಗಿ ಬಂದು ಅರುಣಮ್ಮನಿಗೆ ಗುಲಾಬಿ ಹೂಗಳನ್ನು ಕೊಟ್ಟು ಅಭಿನಂದಿಸಿದರು. ಇತ್ತ ಗಂಗಾವತಿಯಲ್ಲಿ ಕುಳಿತು ಜನಾರ್ದನ ರೆಡ್ಡಿ ಅವರು ಅಲ್ಲಿಯೂ ಕುರುಬರು ಮತ್ತು ಮುಸ್ಲಿಂ ಅಲ್ಪಸಂಖ್ಯಾತ ನಾಯಕರುಗಳನ್ನು ತನ್ನ ಕಡೆಯಲ್ಲಿ ಸೆಳೆದು ಅವರುಗಳಿಂದ ಶುಭ ಹಾರೈಕೆಗಳನ್ನು ಪಡೆಯುತ್ತಿದ್ದರು. ಈಗ ದೊರೆತ ಮಾಹಿತಿಯಂತೆ ಬಹುತೇಕವಾಗಿ ಅವರು ಕುರುಬರು ಮತ್ತು ಮುಸ್ಲಿಮ್ ಈ ಸಮುದಾಯಗಳ ಕಡೆಗೆ ಗಮನವನ್ನು ನೀಡಿದ್ದಾರೆ. ಅವರು ಕೈ ಹಾಕಿದ ಪ್ರದೇಶಗಳ ಮತದಾರರು ಕಾಂಗ್ರೆಸ್ಸಿಗೆ ಅಂದರೆ ಬಿಜೆಪಿಗೆ ವಿರೋಧವಾಗಿ ಇದ್ದ ಮತದಾರರು. ಇವುಗಳನ್ನು ಗಮನಿಸಿದರೆ ಸಿದ್ದರಾಮಯ್ಯ ಮತ್ತು ಸಿದ್ದರಾಮಯ್ಯನವರ ಜೊತೆಗಿನ ಕಾಂಗ್ರೆಸ್ಸಿನ ಬೆಂಬಲಿಗರ ತಲೆಗೇ ರೆಡ್ಡಿ ಕೈಚಾಚಿದ್ದಾರೆಯೇ ಎಂಬ ಅನುಮಾನ ಸಹಜವಾಗಿ ಮೂಡುತ್ತದೆ. ಅಂದರೆ ಚುನಾವಣೆಯಲ್ಲಿ ಬಿಜೆಪಿ ವಿರೋಧಿ ಸೆಕ್ಯುಲರ್ ಮತಗಳನ್ನು ಒಡೆಯಲು ಜನಾರ್ಧನ ರೆಡ್ಡಿ ಅವರ ಕಲ್ಯಾಣ ರಾಜ್ಯ ಪಕ್ಷ ಪಾತ್ರ ವಹಿಸುತ್ತದೆಯೇ ಎನ್ನುವ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ?

ಬಿಜೆಪಿಯಿಂದ ಹೊರಗೆ ನಿಂತು ಕಲ್ಯಾಣ ರಾಜ್ಯ ಪಕ್ಷವನ್ನು ಕಟ್ಟಿದರ ಬಗ್ಗೆ ಬಿಜೆಪಿಯ ಪ್ರತಿಕ್ರಿಯೆ ಅಷ್ಟು ಆಕ್ರಮಣಕಾರಿಯಾಗಿಲ್ಲ. ಈ ಪ್ರಯೋಗದ ಪರಿಣಾಮಗಳನ್ನು ಕಾದು ನೋಡುವಂತಹ ರೀತಿಯಲ್ಲಿ ಬಿಜೆಪಿ ಇದ್ದಂತೆಯೂ ಕಾಣುತ್ತದೆ. ಬಿಜೆಪಿಯೊಳಗೆ ಮೂಲೆಗೆ ತಳ್ಳಲ್ಪಡುತ್ತಿರುವ ಅತೃಪ್ತ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಮತ್ತು ಜನಾರ್ಧನ ರೆಡ್ಡಿ ಅವರ ನಡುವೆ ಏನಾದರೂ ಒಳ ರಾಜಕೀಯ ಸಂಬಂಧಗಳು ಇವೆಯೇ ಎನ್ನುವ ಪ್ರಶ್ನೆಯು ಸುಳಿದಾಡಿ ಹೋಗಿದೆ. ಬಿಜೆಪಿಯೊಳಗೆ ಗಟ್ಟಿಯಾಗಿ ನಿಂತು ಮಾತನಾಡುತ್ತಿರುವ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ಅವರ ನಡುವೆ ಹಾಗೂ ಜನಾರ್ದನ ರೆಡ್ಡಿ ಅವರ ಕುಟುಂಬದ ಒಳಗೆ ಬಿರುಕು ಬಂದಿದೆ ಎಂದು ಹೇಳುವ ಮಾತುಗಳಿಗೆ ಅಷ್ಟಾಗಿ ಬಲವಿಲ್ಲ. ಸಹೋದರರ ನಡುವೆ ಭಿನ್ನಾಭಿಪ್ರಾಯಗಳು ಇವೆಯಾದರೂ ರಾಜಕೀಯ ಸಂಘರ್ಷದ ಮಟ್ಟದಲ್ಲಿ ಅವು ವ್ಯಕ್ತಗೊಳ್ಳುವ ಸಾಧ್ಯತೆಗಳಿಲ್ಲ. ಇವರು ಯಾರೂ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇರಲಾರರು ಎನ್ನುವುದೇ ವಾಸ್ತವ ಸ್ಥಿತಿ.

ಶ್ರೀರಾಮುಲು ಬಿಜೆಪಿಯಲ್ಲಿ ಗಟ್ಟಿಯಾಗಿ ನಿಂತಿದ್ದಾರೆ ಎಂದು ಹೇಳಿದೆ ಅಲ್ಲವೇ? ಅವರ ಮೂಲಕ ಆ ಪ್ರದೇಶದ ಹಲವು ಜಿಲ್ಲೆಗಳಲ್ಲಿ ಇರುವ ಪ್ರಬಲವಾಗಿ ಇರುವ ವಾಲ್ಮೀಕಿ ಸಮುದಾಯದ ಮತಗಳನ್ನು ಮತ್ತೆ ಸೆಳೆಯಲು ಬಿಜೆಪಿ ಪ್ರಯತ್ನ ಆರಂಭಿಸಿದೆ. ಮತ್ತು ಸ್ವತಃ ಬೊಮ್ಮಾಯಿ ಯವರೇ 'ಶ್ರೀರಾಮುಲು ಮುಂದೆ ಮುಖ್ಯಮಂತ್ರಿ ಯಾಕೆ ಆಗಬಾರದು? ಎಂದು ಎಸ್.ಟಿ.ಸಮಾವೇಶದಲ್ಲಿ ಮಾತನ್ನಾಡಿ ಅವರ ಮೂಗಿಗೆ ತುಪ್ಪವನ್ನು ಹಚ್ಚಿದ್ದಾರೆ! ಈ ಸುವಾಸನೆಯನ್ನು ಶ್ರೀರಾಮುಲು ಅಥವಾ ರೆಡ್ಡಿ ಬಳಗ ಅಷ್ಟು ಸುಲಭವಾಗಿ ಕಳೆದುಕೊಂಡೀತೇ?.

ಹೈಕೋರ್ಟ್ ಮತ್ತು ಸಿಬಿಐ ಒತ್ತಡದ ಬಳಿಕ ಇದೀಗ ಕರ್ನಾಟಕ ಸರ್ಕಾರ ಜನಾರ್ಧನ ರೆಡ್ಡಿ ಅವರ 19 ಕೋಟಿ ರೂ ಗಳ ಮೌಲ್ಯದ ರೂ. 219 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಿದೆ. ಬಳ್ಳಾರಿಯ ಗಣಿ ಹಗರಣದಲ್ಲಿ ಸುಮಾರು ಒಂದು ಲಕ್ಷ ಕೋಟಿಗೂ ಮೀರಿ ಹಣವನ್ನು ಕರ್ನಾಟಕ ಸರ್ಕಾರಕ್ಕೆ ವಂಚಿಸಲಾಗಿದೆ ಎನ್ನುವ ವರದಿಯನ್ನು ಜಸ್ಟಿಸ್ ಸಂತೋಷ್ ಹೆಗ್ಡೆ ಯವರ ಆಯೋಗ ವರದಿ ನೀಡಿತ್ತು. ಇದರಲ್ಲಿ ರೆಡ್ಡಿ ಅವರದು ಬಹುದೊಡ್ಡ ಪಾಲಿದೆ. ಮುಟ್ಟುಗೋಲಿಗೆ ಒಪ್ಪಿರುವ ಮೊತ್ತ 19 ಕೋಟಿ ರೂ.ಗಳು! ತುಂಬಿದ ಕೆರೆಯಲ್ಲಿ ಇದು ಒಂದು ಬೊಗಸೆ ನೀರು ಮಾತ್ರ!

ಕರ್ನಾಟಕದ ವಿಧಾನಸಭೆಗೆ ಚುನಾವಣೆಗಳು ಹತ್ತಿರವಾಗುತ್ತಿರುವ ಸಂದರ್ಭದಲ್ಲಿ ಆಮ್ ಆದ್ಮಿ ಪಕ್ಷವನ್ನು ಒಳಗೊಂಡಂತೆ ಇತರೆ ಸಣ್ಣಪುಟ್ಟ ಹೊಸ ರಾಜಕೀಯ ಪಕ್ಷಗಳು ತಲೆ ಎತ್ತುತ್ತಿವೆ, ಗುಂಪುಗಳು ಕ್ರಿಯಾಶೀಲವಾಗುತ್ತಿವೆ. ಅಂತಿಮ ವಾಗಿ, ಇವೆಲ್ಲವುಗಳ ಪರಿಣಾಮ ಏನು ಎನ್ನುವುದನ್ನು ಮುಂದೆ ನೋಡಬೇಕು. ವಿಶೇಷವಾಗಿ, ಜನಾರ್ಧನರೆಡ್ಡಿ ಅವರ ನಡೆ ರಾಜಕೀಯ ಕುತೂಹಲ ಹೊಂದಿದೆ ಎನ್ನುವುದು ನಿಜ.

ಆರ್‌ಎಸ್‌ಎಸ್ ಮುಖ್ಯಸ್ಥರ ಆಕ್ರೋಶಕಾರೀ ಹೇಳಿಕೆಗಳು ಸಂವಿಧಾನಕ್ಕೆ ಒಡ್ಡಿರುವ ಬಹಿರಂಗ ಸವಾಲು

ಆರ್‌ಎಸ್‌ಎಸ್ ವಾರಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮಾಡಿರುವ ಟಿಪ್ಪಣಿಗಳು ಆಕ್ರೋಶಕಾರಿ, ಅವು ಭಾರತದ ಸಂವಿಧಾನಕ್ಕೆ, ಎಲ್ಲಾ ನಾಗರಿಕರ ಸಮಾನ ಹಕ್ಕುಗಳಿಗೆ ಮತ್ತು ಕಾನೂನಿನ ಆಳ್ವಿಕೆಗೆ ಒಡ್ಡಿರುವ ಬಹಿರಂಗ ಮತ್ತು ನಾಚಿಕೆಗೆಟ್ಟ ಸವಾಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಅವರು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯವು ಸುರಕ್ಷಿತವಾಗಿ ಉಳಿಯಬೇಕಾದರೆ 'ಶ್ರೇಷ್ಠತೆ'ಯ ವಿಚಾರಗಳನ್ನು ಬಿಡಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ. ಹಿಂದೂಗಳು "ಯುದ್ಧ"ದಲ್ಲಿದ್ದಾರೆ ಎಂದು ಹೇಳುವ ಅವರು, ಐತಿಹಾಸಿಕ ತಪ್ಪುಗಳ ಹೆಸರಿನಲ್ಲಿ "ಹಿಂದೂ ಸಮಾಜ"ದ ಆಕ್ರಮಣವನ್ನು ಸಮರ್ಥಿಸುತ್ತಾರೆ, ಅವರು ಈ ಮೂಲಕ ಭಾರತೀಯ ನಾಗರಿಕರ ಒಂದು ವಿಭಾಗದ ವಿರುದ್ಧ ಮತೀಯ ಸಂಯೋಜನೆಯ ಆಧಾರದ ಮೇಲೆ ಹಿಂಸಾಚಾರಕ್ಕೆ ಕರೆ ನೀಡಿದಂತಾಗಿದೆ ಎಂದು ಪೊಲಿಟ್ ಬ್ಯುರೊ ಅಭಿಪ್ರಾಯ ಪಟ್ಟಿದೆ.

ವಾಸ್ತವವಾಗಿ ಇದು "ಹಿಂದೂ ಸಮಾಜ"ದ್ದಲ್ಲ, ಬದಲಾಗಿ ಭಾಗವತ್‌ರಂತಹ ಮುಖಂಡರ ಬೆಂಬಲದೊಂದಿಗೆ ಆರ್.ಎಸ್.ಎಸ್. ಸಿದ್ಧಾಂತ ದಿಂದ ಪ್ರೇರಿತವಾದ ಹಿಂದುತ್ವ ಪಡೆಗಳ ಕೆಲಸ, ಅವು ವಿವಿಧ ಹಂತಗಳಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಸಾಂವಿಧಾನಿಕ ಮತ್ತು ಕಾನೂನು ಹಕ್ಕುಗಳ ಮೇಲೆ ನಿರಂತರ ದಾಳಿ ಮಾಡುವ ಮೂಲಕ ಅಲ್ಪಸಂಖ್ಯಾತ ಸಮುದಾಯದಲ್ಲಿ ತಾವು ಮುತ್ತಿಗೆಗೆ ಒಳಗಾಗಿದ್ದೇವೆ ಎಂಬ ಭಾವನೆಯನ್ನು ಸೃಷ್ಟಿಸಿವೆ. ಭಾಗವತ್‌ರವರ ಹೇಳಿಕೆಗಳು ಮುಸ್ಲಿಮರು ಅಧೀನ ಸ್ಥಾನವನ್ನು ಸ್ವೀಕರಿಸಿದರೆ ಮಾತ್ರ ಭಾರತದಲ್ಲಿ ಬದುಕಲು ಸಾಧ್ಯ ಎಂಬ ಆರ್‌ಎಸ್‌ಎಸ್ ಆರಾಧಿಸುವ ಹೆಡ್ಗೆವಾರ್ ಮತ್ತು ಗೋಲ್ವಾಲ್ಕರ್ ರ ದ್ವೇಷತುಂಬಿದ ಕೋಮುವಾದಿ ಬರಹಗಳ ಸಮಕಾಲೀನ ಆವೃತ್ತಿಯಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಅವರ ಈ ಮಾತುಗಳನ್ನು ಬಲವಾಗಿ ಖಂಡಿಸಿದೆ ಮತ್ತು ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವದ ಆಧಾರಭೂತ ಸಾಂವಿಧಾನಿಕ ಮೌಲ್ಯಗಳ ಮೇಲಿನ ಈ ದಾಳಿಯ ವಿರುದ್ಧ ದೇಶಪ್ರೇಮೀ ನಾಗರಿಕರು ಮತ್ತು ಶಕ್ತಿಗಳು ಒಗ್ಗಟ್ಟಿನಿಂದ ತಮ್ಮ ದನಿ ಎತ್ತಬೇಕು ಎಂದು ಕರೆ ನೀಡಿದೆ.

ಕೋಮುವಾದವನ್ನು ಕಿತ್ತೆಸೆದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯ.......... ಪುಟ 16 ರಿಂದ

ಅಲ್ಪಸಂಖ್ಯಾತರು ಒಪ್ಪಿ ಪಾಲಿಸಬೇಕಾದ ಒತ್ತಡವನ್ನು ಸೃಷ್ಟಿಸಲಾಗುತ್ತಿದೆ. 80ರ ದಶಕದಿಂದೀಚೆಗೆ ದೇಶದಲ್ಲಿ ಉದ್ಯೋಗಕ್ಕೆ ಪ್ರಾಧಾನ್ಯತೆ ನೀಡದೆ ಉದ್ಯಮಕ್ಕೆ ಪ್ರಾಧಾನ್ಯತೆ ನೀಡುವ ಆರ್ಥಿಕ ನೀತಿಯನ್ನು ಅನುಸರಿಸಲಾಗುತ್ತಿದೆ. ಬಂಡವಾಳ ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಸಂಚರಿಸಲು ಅವಕಾಶ ಇರುವ ನೀತಿ ಬಂದಿದೆ. ಇದರಿಂದ ಜನರು ಕೃಷಿ ಆರ್ಥಿಕತೆಯನ್ನು ಕೈಬಿಟ್ಟು, ಕೈಗಾರಿಕಾ ಕಾರ್ಮಿಕತನಕ್ಕೆ ಒಳಗಾಗಿ ವಲಸೆ ಹೋಗುತ್ತಿದ್ದಾರೆ. ಈ ವಲಸೆಯಿಂದ ಉದ್ಯೋಗ ಒಂದಲ್ಲ ಒಂದೆಡೆ ಲಭ್ಯವಾಗುತ್ತಿದೆ ಎಂದು ಪ್ರಚಾರ ಹುಟ್ಟಿಸಲಾಗಿದೆ. ಆದರೆ ವಾಸ್ತವವಾಗಿ ಗ್ರಾಮಗಳ ಜನರು ಭೂಮಿ ಕಳೆದುಕೊಂಡು ನಗರಗಳಲ್ಲಿ ಉದ್ಯೋಗ ನಿರೀಕ್ಷೆಯಲ್ಲಿ ಕಾಯುವಂತಾಗಿದೆ ಎಂದು ವಿವರಿಸಿದರು.

ಉದ್ಯೋಗಿ ಎಂಬ ಪದಕ್ಕೆ ಅಸ್ತಿತ್ವವಿರುವುದು ಮಾಲಿಕ–ಕಾರ್ಮಿಕ ಸಂಬಂಧಗಳಲ್ಲಿ. ಇವತ್ತಿನ ಕೈಗಾರಿಕಾ ನೀತಿಯಲ್ಲಿ ಯುವಜನರನ್ನು ಉದ್ಯೋಗಾರ್ಹರಾಗಿ ತರಬೇತಿ ನೀಡಿ ಕೂಡಿಸಲಾಗುತ್ತಿದೆಯೇ ಹೊರತು ಅವರನ್ನು ಉದ್ಯೋಗಿಗಳಾಗಿ ಮಾಡುವ ಭದ್ರತೆ ಒದಗಿಸುವುದಿಲ್ಲ. 26 ಕಾನೂನುಗಳನ್ನು ರದ್ದುಪಡಿಸಿ ಕೇಂದ್ರ ಸರಕಾರವು ಪರ್ಯಾಯವಾಗಿ 4 ಸಂಹಿತೆಗಳನ್ನು ಜಾರಿಗೆ ತರಲಿದೆ. ಇವು ಯಾವುವೂ ತರಬೇತಿ ಹೊಂದಿದ ಕಾರ್ಮಿಕರಿಗೂ ಭದ್ರತೆಯನ್ನು ನೀಡುವುದಿಲ್ಲ. ಅಲ್ಲದೆ ಮಾಲಿಕನಿಗೆ ಕಾರ್ಮಿಕ ಯಾರು ಎಂದು ತಿಳಿದಿರದ ವ್ಯವಸ್ಥೆಯೊಂದು ನಿರ್ಮಾಣವಾಗಲಿದೆ. ಈ ಹಿನ್ನೆಲೆಯಲ್ಲಿ ಕರಾವಳಿಯಲ್ಲಿ ನಶಿಸಿ ಹೋಗುತ್ತಿರುವ ಕೃಷಿ ಕೈಗಾರಿಕೆಗಳಿಗೆ ಪರ್ಯಾಯವಾದ ಕೈಗಾರಿಕೆ, ತಂತ್ರಜ್ಞಾನ ಯಾವ ರೀತಿ ಬರಬೇಕಾಗಿದೆ ಎಂಬುದನ್ನು ನಾವೆಲ್ಲ ಚರ್ಚಿಸುವ ಅಗತ್ಯ ಇದೆ ಎಂಬುದಾಗಿ ಮೀನಾಕ್ಷಿ ಸುಂದರಂ ಹೇಳಿದ್ದಾರೆ.

ರಾಷ್ಟ್ರೀಯ ಸಮ್ಮೇಳನದ ಸ್ವಾಗತ ಸಮಿತಿಯ ದ.ಕ. ಜಿಲ್ಲಾ ಘಟಕವು ಈ ಸಮ್ಮೇಳನವನ್ನು ಏರ್ಪಡಿಸಿತ್ತು. ಮುಂಬಯಿ ಉದ್ಯಮಿ ಹಾಗೂ ಕರಾವಳಿ ಪರಿಸರ ಪ್ರೇಮಿ ಸಮಿತಿಯ ತೋನ್ಸೆ ಜಯಕೃಷ್ಣ ಶೆಟ್ಟಿ, ಸಿಐಟಿಯು ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ–ಕರಾವಳಿಯ ಕೃಷಿ ಹಾಗೂ ಕೈಗಾರಿಕಾ ಸಮಸ್ಯೆಗಳ ಬಗ್ಗೆ ವಿಚಾರ ಮಂಡಿಸಿದರು. ಸಿಐಟಿಯು ಸಮ್ಮೇಳನ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಹಾಗೂ ಅಖಿಲ ಭಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷರೂ ಆದ ಯಶವಂತ ಮರೋಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ವಿಚಾರ ಸಂಕಿರಣದ ಮಂಗಳೂರು ಆಸುಪಾಸಿನ ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕ ಹಾಗೂ ನೌಕರ ಸಂಘಗಳ ಕಾರ್ಯಕರ್ತರು, ಮಧ್ಯಮವರ್ಗಕ್ಕೆ ಸೇರಿದ ಶ್ರೋತೃಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ವೇದಿಕೆಯಲ್ಲಿ ರೈತ ಸಂಘದ ಮುಖಂಡರಾದ ಕೆ.ಯಾದವ ಶೆಟ್ಟಿ, ದಸಂಸ ರಾಜ್ಯ ಮುಖಂಡರಾದ ಎಂ. ದೇವದಾಸ್, ಸಿಐಟಿಯು ಮುಖಂಡರಾದ ವಸಂತ ಆಚಾರಿ, ಪದ್ಮಾವತಿ ಶೆಟ್ಟಿ, ಸುಕುಮಾರ್, ಸಮಾಜಿಕ ಚಿಂತಕರಾದ ಡಾ. ಕೃಷ್ಣಪ್ಪ ಕೊಂಚಾಡಿ ಉಪಸ್ಥಿತರಿದ್ದರು. ಸಿಐಟಿಯು ದ.ಕ. ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕೋಶಾಧಿಕಾರಿ ಯೋಗೀಶ್ ಜಪ್ಪಿನಮೊಗರು ಸ್ವಾಗತಿಸಿದರು. ಸುಕುಮಾರ್ ವಂದಿಸಿದರು. ಜಿಲ್ಲೆಯ ಕಾರ್ಮಿಕ ಮುಖಂಡರಾದ ಇಂಟಕ್‌ನ ಬೊಂಡಾಲ ಜಗನ್ನಾಥ ಶೆಟ್ಟಿ, ಎಐಟಿಯುಸಿಯ ಸೀತಾರಾಮ ಬೇರಿಂಜೆ, ಸಿಐಟಿಯುವಿನ ಹಿರಿಯ ನಾಯಕ ಯು.ಬಿ. ಲೋಕಯ್ಯ, ಪ್ರಾಂತ ರೈತ ಸಂಘದ ಕೃಷ್ಣಪ್ಪ ಸಾಲ್ಯಾನ್, ಮಾಜಿ ಶಾಸಕ ಕಾಂಗ್ರೆಸ್‌ನ ಜೆ.ಆರ್. ಲೋಬೋ ಮೊದಲಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಸೌಹಾರ್ದ ಗೀತೆಗಳನ್ನು ಕವಿ ಹುಸೇನ್ ಕಾಟಿಪಳ್ಳ, ಹೇಮಾ ಪಚ್ಚನಾಡಿ, ಇಸ್ಮಾಯಿಲ್ ಉಳ್ಳಾಲ ಹಾಡಿ ಕಾರ್ಯಕ್ರಮಕ್ಕೆ ಚಾಲನೆ ನಿಡಿದರು.

ವರದಿ: ವಾಸುದೇವ ಉಚ್ಚಿಲ್

ಅರ್ಥವ್ಯವಸ್ಥೆಯ ಮೇಲೆ ವಿದೇಶ ವ್ಯಾಪಾರ ಕೊರತೆಯ... ಪುಟ 13 ರಿಂದ

ಬಾಧೆಯಿಂದ ಬಳಲುತ್ತಿದೆ. ಹಣದುಬ್ಬರದ ಕಾರಣದಿಂದಾಗಿ ಎಲ್ಲೆಡೆ ಬಡ್ಡಿ ದರಗಳು ಏರಿಕೆಯಾಗಿವೆ. ಅದರಿಂದಾಗಿ ಇಡೀ ವಿಶ್ವವೇ ಒಂದು ತೀವ್ರ ಆರ್ಥಿಕ ಹಿಂಜರಿತಕ್ಕೆ ಒಳಗಾಗುತ್ತಿದೆ. ಅಂದು ಭಾರತದ ಬಡ್ಡಿ ದರಗಳನ್ನು ಏರಿಸುವ ಮೂಲಕ ಪರಿಸ್ಥಿತಿಗೆ ರಿಸರ್ವ್ ಬ್ಯಾಂಕ್ ಸ್ಪಂದಿಸಿತ್ತು. ಅಂದು ಇತರ ದೇಶಗಳು ಬಡ್ಡಿ ದರಗಳನ್ನು ಏರಿಸಲಿಲ್ಲ. ಹಾಗಾಗಿ, ರಿಸರ್ವ್ ಬ್ಯಾಂಕ್‌ನ ಸ್ಪಂದನೆಯು ಬಿಕ್ಕಟ್ಟನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿತ್ತು.

ಆದರೆ ಈಗ, ಎಲ್ಲಾ ಬಂಡವಾಳಶಾಹಿ ದೇಶಗಳೂ ಬಡ್ಡಿ ದರಗಳನ್ನು ಏರಿಸುತ್ತಿರುವುದರಿಂದ ರಿಸರ್ವ್ ಬ್ಯಾಂಕ್‌ನ ಬಡ್ಡಿ ದರ ಏರಿಕೆಯ ನೀತಿಯು ಕೆಲಸ ಮಾಡುವುದಿಲ್ಲ. ಬಡ್ಡಿ ದರಗಳ ಈ ಏರಿಕೆಯು ಜಾಗತಿಕ ಆರ್ಥಿಕ ಹಿಂಜರಿತವನ್ನು ಉಂಟುಮಾಡುತ್ತದೆ. ಆದ್ದರಿಂದ ನಮ್ಮ ವ್ಯಾಪಾರ ಕೊರತೆಯು ಇನ್ನೂ ಕೆಲ ಕಾಲ ಮುಂದುವರಿಯುತ್ತದೆ. ಮತ್ತು ಹೆಚ್ಚುತ್ತಿರುವ ವ್ಯಾಪಾರ ಕೊರತೆಯು ಮುಂದುವರೆಯುತ್ತಿರುವ ಭಾರತದ ಆರ್ಥಿಕ ಬಿಕ್ಕಟ್ಟನ್ನು ರಭಸಗೊಳಿಸುತ್ತದೆ ಎಂಬ ಅಂಶವನ್ನು ಈ ಹಿಂದೆ ಸೂಚಿಸಲಾಗಿದೆ.

ಈ ಎಲ್ಲ ಅಂಶಗಳೂ ನವ ಉದಾರವಾದಿ ಬಂಡವಾಳಶಾಹಿಯು ಮುಂದಿನ ದಾರಿ ಕಾಣದ ಪರಿಸ್ಥಿತಿಯಲ್ಲಿದೆ ಎಂಬುದನ್ನು ಮತ್ತು ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರಾಬಲ್ಯಕ್ಕೆ ತೀವ್ರವಾದ ಸವಾಲು ಎಸೆಯಲಾಗಿದೆ ಎಂಬುದನ್ನು ಸೂಚಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಾಗತಿಕ ಬಂಡವಾಳಶಾಹಿಯು ಯಾವ ಅವಸ್ಥೆಯಲ್ಲಿದೆ ಎಂದರೆ, ಅದನ್ನು ಮೀರುವ ಹೊಸ ಸಾಧ್ಯತೆಗಳು ಸೃಷ್ಟಿಯಾಗುತ್ತವೆ. ಈ ಅವಕಾಶವನ್ನು ಬಳಸಿಕೊಳ್ಳುವ ಬದಲು, ನಮ್ಮ ಅರ್ಥವ್ಯವಸ್ಥೆಯು ನವ ಉದಾರವಾದಿ ಬಂಡವಾಳಶಾಹಿಯ ಆಳ್ವಿಕೆಯೊಳಗೇ ಸಿಲುಕಿದ್ದುಕೊಂಡು ಸಾಲ ಪಡೆಯುವ ಮೂಲಕ ತನ್ನ ದುಃಸ್ಥಿತಿಯಿಂದ ಪಾರಾಗಲು ಪ್ರಯತ್ನಿಸಿದರೆ, ದೇಶವು ಈಗ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಭವಿಷ್ಯದಲ್ಲಿ ಉಲ್ಬಣಗೊಳ್ಳುತ್ತದಷ್ಟೇ.

➘ ಆದರೆ ಈ ದಂಗೆಯೇ ಲುಲಾ ಅವರನ್ನು ಬಹಳ ಮಟ್ಟಿಗೆ ಬಲಪಡಿಸಲಿದೆಯೆನ್ನಬಹುದು. ಈ ಉಗ್ರ ಬಲಪಂಥೀಯ ಶಕ್ತಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತು ತೋರಿದ ಅವಿಶ್ವಾಸ ನಡು, ಬಲ–ನಡು ಮತ್ತು ಬಲಪಂಥೀಯ ಶಕ್ತಿಗಳನ್ನು ಅವರಿಂದ ದೂರ ಮಾಡುವ ಸಾಧ್ಯತೆಯಿದೆ. ಈ ಶಕ್ತಿಗಳು ಅಧ್ಯಕ್ಷೀಯ ಚುನಾವಣೆಯಲ್ಲಿ ತೋರಿದ ಐಕ್ಯತೆ ಮುರಿದು ಬೀಳಬಹುದು. ಲುಲಾ ಆಡಳಿತ ಜನಪರ ನೀತಿಗಳನ್ನು ಜಾರಿ ಮಾಡಿದಂತೆ, ಖಂಡ ಮತ್ತು ಅಂತರ್‍ರಾಷ್ಟ್ರೀಯ ವ್ಯವಹಾರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಹೋದಂತೆ ಲುಲಾ–ವಿರೋಧ ರಾಜಕೀಯ ಪಕ್ಷಗಳಲ್ಲೂ, ಜನತೆಯಲ್ಲೂ ಕಡಿಮೆಯಾಗಬಹುದು. ದಂಗೆಕೋರರಿಗೆ ಅದರ ಬೆಂಬಲಿಗರಿಗೆ ಶೀಘ್ರ, ಕಟುಶಿಕ್ಷೆ ಸಹ ಈ ಶಕ್ತಿಗಳ ಬಲ ಮುರಿಯಬಹುದು. ಆದರೆ ಉಗ್ರಬಲಪಂಥೀಯ ಶಕ್ತಿಗಳು ತಮ್ಮ ದುಸ್ಸಾಹಸವನ್ನು ಮರುಕಳಿಸಲಿಕ್ಕಿಲ್ಲ ಎಂದು ಹೇಳುವಂತಿಲ್ಲ. ಲುಲಾ ಆಡಳಿತ ಮತ್ತು ಬ್ರೆಜಿಲ್ ಜನತೆ ಈ ಸವಾಲನ್ನು ಹೇಗೆ ಎದುರಿಸುತ್ತಾರೆ ಎನ್ನುವುದರ ಮೇಲೆ ಬ್ರೆಜಿಲ್ ಪ್ರಜಾಪ್ರಭುತ್ವ ಮತ್ತು ಲ್ಯಾಟಿನ್ ಪ್ರಗತಿಪರರ ಮುನ್ನಡೆ ಆಧರಿಸಿರುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 16-22, 2023 Price: Rs. 10/- Date of Publication: 13 January 2023 RNI No. KARKAN /2006/17926 Posted on 17-01-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಕೋಮುವಾದವನ್ನು ಕಿತ್ತೆಸೆದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯ: ಡಾ.ಟಿ.ಆರ್. ಚಂದ್ರಶೇಖರ್

'ಕೇಂದ್ರ ಮತ್ತು ರಾಜ್ಯ ಸರಕಾರವು ಕಾರ್ಮಿಕರ, ಅಲ್ಪಸಂಖ್ಯಾಕರ, ದಲಿತರ ಹಿತವನ್ನೇ ಕಡೆಗಣಿಸಿದೆ. ಕೋಮುವಾದ ಬಂಡವಾಳಶಾಹಿಗೆ ಮಣೆ ಹಾಕಿದೆ. ಅಭಿವೃದ್ಧಿಗೆ ಪದಮಾನವೇ ಮಾಪನವಲ್ಲ. ಜನರು ಸಮೃದ್ಧಿಯಿಂದ, ನೆಮ್ಮದಿಯಿಂದ ಬದುಕುವುದು ಕೂಡಾ ಅಭಿವೃದ್ಧಿಯ ಸಂಕೇತವಾಗಿದೆ. ಬಿಜೆಪಿ ಸರಕಾರ ಬಂದ ಬಳಿಕ ಜನರ ಗೌರವಕ್ಕೆ ದಕ್ಕೆಯಾಗಿದೆ. ಇಂತಹ ಸರಕಾರಗಳನ್ನು ಕಿತ್ತೊಗೆಯಬೇಕಾಗಿದೆ. ಜನರ ಬದುಕಿಗೆ ಕಂಟಕವಾಗಿರುವ ಕೋಮುವಾದವನ್ನು ಕಿತ್ತೆಸೆದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯವಿದೆ' ಎಂದು ಹಂಪಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ.ಟಿ.ಆರ್. ಚಂದ್ರಶೇಖರ್ ಹೇಳಿದರು.

ಬೆಂಗಳೂರಿನಲ್ಲಿ ನಡೆಯಲಿರುವ 17ನೇ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಅಂಗವಾಗಿ "ಕೃಷಿ, ಕೈಗಾರಿಕೆ, ಉದ್ಯೋಗಗಳಲ್ಲಿ ಜನಪರ ಪರ್ಯಾಯ ನೀತಿಗಳು" ಎಂಬ ವಿಷಯವಾಗಿ ಜನವರಿ 8 ರಂದು ಮಂಗಳೂರಿನ ಪುರಭವನದಲ್ಲಿ ನಡೆದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಆರ್ಥಿಕ ಅಸಮಾನತೆಯ ಜೊತೆಗೆ ಸನಾತನ ಅಸಮಾನತೆಯೂ ಹೆಚ್ಚುತ್ತಿದೆ. ಇದು ದೇಶದ ಅಭಿವೃದ್ಧಿಗೆ ಮಾತ್ರವಲ್ಲ ವ್ಯಕ್ತಿಯ ಘನತೆಯ ಬದುಕಿಗೂ ಅಡ್ಡಿಯಾಗಿದೆ. ಅದರಲ್ಲೂ ಕರಾವಳಿ ಕರ್ನಾಟಕದಲ್ಲಿ ಆಧುನಿಕತೆಗೆ ಕೋಮುವಾದವು ಮುಸುಕು ಹಾಕಿದೆ. ಬದುಕಿಗೆ ಕಂಟಕವಾಗಿರುವ ಸಾಂಪ್ರದಾಯತೆಯನ್ನು ಕೋಮುವಾದದಿಂದ ಮುಕ್ತಗೊಳಿಸಬೇಕು ಎಂದ ಅವರು, ಪ್ರಜಾಪ್ರಭುತ್ವ ಇದ್ದೂ, ಜನರ ಹಕ್ಕುಗಳನ್ನು ಹತ್ತಿಕ್ಕಲಾಗುತ್ತಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಜನರನ್ನು ವಿಂಗಡಿಸಲಾಗುತ್ತಿದೆ. ಹಲಾಲ್, ಹಿಜಾಬ್, ಮತಾಂತರ, ಗೋಹತ್ಯೆ ನಿಷೇಧ, ವ್ಯಾಪಾರ ನಿರ್ಬಂಧದಂತಹ ಸೂಕ್ಷ್ಮ ವಿಚಾರಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ದೇಶದ 50 ಕೋಟಿ ಕಾರ್ಮಿಕರ ಆದಾಯ ಕುಸಿಯುತ್ತಿದೆ. ಬೆರಳೆಣಿಕೆಯ ಬಂಡವಾಳಶಾಹಿಗಳ ವರಮಾನ ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ ಎಂದು ಡಾ.ಟಿ.ಆರ್. ಚಂದ್ರಶೇಖರ್ ನುಡಿದರು.

ಶೇ.70ರಷ್ಟು ಜನರು 3 ಹೊತ್ತಿನ ಅನ್ನಕ್ಕೆ ಪರದಾಡುತ್ತಿದ್ದಾರೆ:

ಮುಖ್ಯ ಅತಿಥಿಯಾಗಿ ಹಂಪಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಎಂ. ಚಂದ್ರಪೂಜಾರಿ ಮಾತನಾಡುತ್ತಾ, ಸ್ವಾತಂತ್ರ್ಯ ಲಭಿಸಿ 75 ವರ್ಷ ಕಳೆದರೂ ಶೇ.70ರಷ್ಟು ಜನರು ದಿನದ 3 ಹೊತ್ತಿನ ಅನ್ನಕ್ಕೆ ಪರದಾಡುತ್ತಿರುವುದು ದೇಶದ ದಾರಿದ್ರ್ಯಕ್ಕೆ ಸಾಕ್ಷಿಯಾಗಿದೆ. ಆಹಾರ ಭದ್ರತಾ ಯೋಜನೆಯಲ್ಲಿ ದೇಶದ 80 ಕೋಟಿ ಜನಕ್ಕೆ ಇಂದಿನ ಸರಕಾರ ತಿಂಗಳಿಗೆ ತಲಾ 5 ಕೆ.ಜಿ.ಅಕ್ಕಿ ಪೂರೈಕೆಗಾಗಿ ಕಾದಿರಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ದೇಶದಲ್ಲಿ ಪ್ರಜಾಪ್ರಭುತ್ವ ಸಂಪೂರ್ಣ ಸೋತಿದೆ. ಹೀಗಾಗಿ ಜ್ವಲಂತ ಸಮಸ್ಯೆಗಳು ಪರಿಹಾರವಾಗುತ್ತಿಲ್ಲ. ರಸ್ತೆ, ಚರಂಡಿಗಳ ಬಗ್ಗೆ ಮಾತನಾಡಬೇಡಿ, ಲವ್ ಜಿಹಾದ್ ಬಗ್ಗೆ ಮಾತನಾಡಿ ಎಂದು ಮಂಗಳೂರಿನ ಸಂಸದರೇ ಹೇಳುತ್ತಿದ್ದಾರೆ. ಹಳೆ ಆಶ್ವಾಸನೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಿಲ್ಲ. ಅವುಗಳಿಂದ ತಪ್ಪಿಸಿಕೊಳ್ಳಲು ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ಕೋಟ್ಯಾಂತರ ಜನರ ಬದುಕಿನ ಜೊತೆ ಚೆಲ್ಲಾಟವಾಡಿದ ನೋಟು ಅಮಾನ್ಯೀಕರಣವನ್ನು ಸುಪ್ರೀಂ ಕೋರ್ಟ್ ಕೂಡಾ ಸಮರ್ಥಿಸುತ್ತಿದೆ. ಚುನಾವಣೆಗಳು ಸಮೀಪಿಸುವಾಗ ದ.ಕ. ಜಿಲ್ಲೆಯಲ್ಲಿ ಕೊಲೆ ರಾಜಕೀಯಗಳು ನಡೆಯುತ್ತಿವೆ. ಸಂಸತ್ತಿನಲ್ಲಿ ವಿಧಾನಸಭೆಗಳಲ್ಲಿ ಜನರ ಪ್ರತಿನಿಧಿಗಳಾಗಿರುವವರಲ್ಲಿ ಅರ್ಧಾಂಶ ಜನರು ಕೋಟ್ಯಾಧೀಶರೂ ಕ್ರಿಮಿನಲ್‌ಗಳೂ ಆಗಿದ್ದಾರೆ. ಅವರು ದೇಶದ 99% ಜನರ ಪ್ರತಿನಿಧಿಗಳಾಗಿಲ್ಲ. ಅವರು 1% ಕಡಿಮೆ ಜನರ ಹಿತರಕ್ಷಕರಾಗಿ ಶಾಸನಸಭೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಕಾರ್ಮಿಕರು, ದುಡಿಯುವ ವರ್ಗದವರು ಇನ್ನೂ ತನಕ ಸಂಸತ್ ತಲುಪಲು ಸಾಧ್ಯವಾಗಿಲ್ಲ. ಹೀಗಾಗಿ ಕಾರ್ಮಿಕರ ಸಮಸ್ಯೆಗಳು ಇನ್ನೂ ಜೀವಂತವಾಗಿಯೇ ಉಳಿದಿವೆ ಎಂದು ಪ್ರೊ. ಚಂದ್ರಪೂಜಾರಿ ಹೇಳಿದರು.

ಉದ್ಯೋಗ ಸೃಷ್ಟಿಗೆ ಪ್ರಾಧಾನ್ಯತೆ ಇಲ್ಲ:

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ, ಕರಾವಳಿಯ ಜನರು ಕರ್ನಾಟಕದ ಹಾಗೂ ರಾಷ್ಟ್ರದ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡಿದ್ದಾರೆ. ಆದರೆ ಅಭಿವೃದ್ಧಿಯ ಪ್ರಯೋಜನವು ಅವರ ಕೊಡುಗೆಗೆ ತಕ್ಕುದಾಗಿ ಕರಾವಳಿಗೆ ಲಭ್ಯವಾಗಿಲ್ಲ. ಇವತ್ತೂ ಬಹುಸಂಖ್ಯಾತರು ಹೇಳಿದ್ದನ್ನು

ಪುಟ 15 ಕ್ಕೆ

ಸತ್ಯಾಗ್ರಹ ನಿರತ ರೈತರೊಂದಿಗೆ ಬೀದಿಗೆ ಬಂತು ಕಾವ್ಯ



'ಕಣ್ಣುಗಳು ಕತ್ತಲ ಬಂಧಿಯಾದಾಗ ರೆಪ್ಪೆಗಳು ಸತ್ತ ಕನಸಿನ ಶೃತಿ ನುಡಿಸುತ್ತವೆ. .'

ತಲೆತಲಾಂತರದಿಂದ ಹೊಲ ನಂಬಿ ಕನಸುಗಳ ಬಿತ್ತಿ ಬದುಕ ಕಟ್ಟಿದ ಬೆವರಿನ ಜನ ಈಗ ಅದೇ ಹೊಲ ಕೈತಪ್ಪಿ ಕಂಪನಿಗಳ ಪಾಲಾಗಿ ಬಿಕೋ ಎಂದು ಕಣ್ಣೆದುರಿದ್ದಾಗ ರೈತನ ಎದೆಯಲ್ಲಿ ಎಂತಹ ಸಂಕಟ ಚುರುಗುಟ್ಟುತ್ತದೆ. ಆ ಸಂಕಟ ಕಲ್ಪನೆಯ ಜಾಡಿಗೆ ಸಿಗಲು ಸಾಧ್ಯವೆ?

ಆಗ
ಬೆವರಿನ ಕಣ್ಣುಗಳು ಕತ್ತಲ ಬಂಧಿಯಾಗುತ್ತವೆ.
ರೆಪ್ಪೆಗಳು ಸತ್ತ ಕನಸಿನ ಶೃತಿಯನ್ನು ಮೀಟುತ್ತವೆ. . . .

ಬಳ್ಳಾರಿಯ ಕುಡಿತಿನಿ ಪಟ್ಟಣ ಸೇರಿದಂತೆ ಸುತ್ತಮುತ್ತ ಗ್ರಾಮದ ರೈತರ ಕಣ್ಣಲ್ಲಿ ಕೈತುಂಬು ಪರಿಹಾರ, ಮಕ್ಕಳಿಗೆ ಉದ್ಯೋಗದ ನಾನಾ ಭರವಸೆಗಳನ್ನು ಬಿತ್ತುವ ಮೂಲಕ ಕರ್ನಾಟಕ ಸರಕಾರವು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ- ಕೆಐಡಿಬಿ ಮೂಲಕ ರೈತರಿಂದ ಹೊಲಗಳನ್ನು ಅಗ್ಗದ ಪರಿಹಾರ ನೀಡಿ ವಶಪಡಿಸಿಕೊಂಡು ಬರೋಬ್ಬರಿ 12 ವರ್ಷಗಳು ಕಳೆದಿವೆ. ಆದರೆ ಇದುವರೆಗೆ ಕಾರ್ಖಾನೆ ಸ್ಥಾಪನೆಗೊಂಡಿಲ್ಲ. ಕೊಟ್ಟ ಪರಿಹಾರ ರೈತರ ಹೆಗಲೇರಿದ ಸಾಲ, ಮನೆ ನಿರ್ಮಾಣ, ಮಕ್ಕಳ ಮದುವೆಗಳು ನುಂಗಿವೆ.

ಈಗ ಕೆಐಡಿಬಿ ಭರವಸೆಗಳು ಮಣ್ಣುಪಾಲಾಗಿವೆ.

ಕೈಯಲ್ಲಿ ಖಾಲಿತನ, ಮನೆತುಂಬ ಹಸಿವು, ನಿರುದ್ಯೋಗ ತಾಂಡವಾಡುತ್ತಿವೆ. ರೈತರ ಬದುಕು ಬೀದಿಗೆ ಬಂದಿದೆ.

ಜನರ ಬದುಕಿನ ದನಿಯಾದ ಸಾಹಿತ್ಯವು ಬೀದಿಗೆ ಬಂದಿದೆ.
ಬೀದಿಗೆ ಬಂದಿದೆ, ಬದುಕಿನ ದನಿಯಾಗಿದೆ.
ಸಾಹಿತಿ, ಕಲಾಕಾರ ಜನರಿಂದ ಮನ್ನಣೆ ಬಯಸುತ್ತಾರೆ,

ಜನರು ಇವರಿಂದ ಜವಾಬ್ದಾರಿ ಬಯಸುತ್ತಾರೆ ಎನ್ನುವ ರಷ್ಯಾದ ಖ್ಯಾತ ಸಾಹಿತಿ ಪ್ಲೆಖನ್ನೋವ್ ಮಾತಿನ ಸತ್ಯವನ್ನು ಅರಿತ ಬಂಡಾಯ ಸಾಹಿತ್ಯ ಸಂಘಟನೆ ಬಳ್ಳಾರಿ ಜಿಲ್ಲಾ ಘಟಕ ತನ್ನ ಜವಾಬ್ದಾರಿಯನ್ನು ಕಳೆದವಾರ ನಿರ್ವಹಿಸಲು ಮುಂದಾಯಿತು.

ದೇಶದ ಅಭಿವೃದ್ಧಿಗೆಂದೇ ಬದುಕಿಗೆ ಆಸರೆಯಾಗಿದ್ದ ಭೂಮಿ ನೀಡಿ ಬದುಕು ಕಳಕೊಂಡ ರೈತರು, 'ಕಾರ್ಖಾನೆ ಸ್ಥಾಪಿಸಿ ಇಲ್ಲವೆ ನಮ್ಮ ಭೂಮಿ ನಮಗೆ ಹಿಂತಿರುಗಿ ನೀಡಿ' ಎಂಬ ನ್ಯಾಯಯುತ ಹಕ್ಕನ್ನು ಪಡೆಯಲು ಕುಡಿತಿನಿ ಗ್ರಾಮದ ಹೆದ್ದಾರಿಯಲಿ ಕಳೆದ 22 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. 17 ನೇ ದಿನದಂದು ಇದೇ ಧರಣಿಯಲ್ಲಿ ರಾಷ್ಟ್ರ ಕವಿ ಕುವೆಂಪು ಜನ್ಮ ದಿನಾಚರಣೆಯನ್ನು ಕವಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಬಂಡಾಯ ಕವಿಗಳು ಹೋರಾಟಕ್ಕೆ ಬೆಂಬಲ ನೀಡಿ ರೈತರ ಧರಣಿಗೆ ಕಾವ್ಯ ಸ್ಪಂದನೆಯ ಕಾರ್ಯಕ್ರಮವನ್ನು ನಡೆಸಿದರು.

ಒಟ್ಟು 20 ಕವಿಗಳು ತಮ್ಮ ಕವಿತೆಯ ಮೂಲಕ ಧರಣಿಗೆ ಸ್ಫೂರ್ತಿ ನೀಡಿದರು. ಪ್ರಾರಂಭದಲ್ಲಿ ಡಿ.ವೈ.ಎಫ್.ಐ. ನ ಹಿರಿಯ ಮುಖಂಡ ಸಂಗಾತಿ ಕೆ.ರಮೇಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೊದಲಿಗೆ ಕಾವ್ಯ ವಾಚಿಸಿದ ಎನ್.ಡಿ.ವೆಂಕಮ್ಮ ನವರು

"ಅನ್ನದಾತನ ಅಳಲಿನಲ್ಲಿ ಕೈ ತೊಳೆದ ಸರಕಾರ" ವನ್ನು ಖಂಡಿಸಿದರು. ಭಾರತಿ ಮೂಲಿಮನಿ "ರೈತ ಬಾರಿಕೋಲಿಗೆ ಸಿಟ್ಟು ಬಂದರೆ

ಕಲ್ಲೆದೆಯ ಕಟುಕರೆದೆಗೆ ಸಿಡಿಮದ್ದಿನ ಛಡಿಏಟು" ಎಂದು ರೈತ ಹೋರಾಟಕ್ಕೆ ಕಾವು ಕೊಟ್ಟರು. ನೂರ್ ಜಹಾನ್ ರೈತರ ತ್ಯಾಗವನ್ನು ವರ್ಣಿಸಿದರೆ. ಸೋದಾ ವಿರುಪಾಕ್ಷಗೌಡ

"ರೈತರಿಲ್ಲದ ನೆಲ ಎಲ್ಲಿದೆ? ಅವನ ಬೆವರು ಹೆತ್ತ ಅನ್ನ ಉಣ್ಣದ ಜನ ಯಾರಿದ್ದಾರೆ?" ಎಂದು ಸರಕಾರದ ನಿರ್ಲಕ್ಷ್ಯಕ್ಕೆ ಸವಾಲು ಎಸೆದರು.

ಯುವ ಕವಿ ವಿಶಾಲ್ ಮ್ಯಾಸರ್,
"ನಾವು ನಿಮ್ಮದೆಗೆ ನೇಗಿಲನ್ನು ನಾಟಿಸುತ್ತೇವೆ......
ಬಂಜರು. ನೆಲ ಉತ್ತು ಬಿತ್ತವರಿಗೆ
ಸರಕಾರದ ಕಠಿಣ ಎದೆಗೆ ನೇಗಿಲು ನಾಟಿಸುವುದು ದೊಡ್ಡದೇನಲ್ಲ"
ಎಂದು ಸವಾಲು ಹಾಕುವ ಮೂಲಕ

ಭೋರ್ಗರಿಸಿ ಬೆವರು ಹರಿಸಿದವರು ನಾವು ನಮ್ಮ ರಕ್ತಹರಿಸಿಯಾದರೂ ನಮ್ಮ ಹಕ್ಕು ಪಡೆಯುತ್ತೇವೆ" ಎನ್ನುವ ಮೂಲಕ ಸರಕಾರವನ್ನು ಎಚ್ಚರಿಸಿದರು. ನಂತರ ಹಾರಕಬಾವಿ ತಿಪ್ಪೇಸ್ವಾಮಿ 'ಬುಡುಬುಡುಕೆ ದೊರೆ' ಎನ್ನುವ ಕವನದ ಮೂಲಕ ಸರಕಾರಕ್ಕೆ ವ್ಯಂಗದ ಚಾಟಿ ಬೀಸಿದರು.

ಬಿ.ಡಿ.ರಾಜಪ್ಪ ತಮ್ಮ ಕವಿತೆಯ ಮೂಲಕ ಅಂಬೇಡ್ಕರ್ ಚಿಂತನೆಯೊಂದಿಗೆ ಹೋರಾಟದ ತಾತ್ವಿಕತೆಗೆ ಮೆರಗು ನೀಡಿದರು.

ನಂತರ ಸಿರಿಗೆರೆಯ ಕುಮಾರ್ ಹಾಗೂ ಉಮಾ ಮಹೇಶ್ವರ ಕವಿಗಳು ರಚಿಸಿದ ಕ್ರಾಂತಿ ಗೀತೆಗಳನ್ನು ಹಾಡಿದರು. ಮಾರುತಿ ಬಗರಿಕಾರ್ ತಬಲ ಸಾಥ್ ನೀಡಿದರು.

ನಂತರ ಅಬ್ದುಲ್ ಹೈ ತೋರಣಗಲ್ಲು ತಾವೇ ರಚಿಸಿದ 'ಲುಚ್ಚರಯ್ಯ ಲುಚ್ಚರು' ಎಂಬ ಕವಿತೆಯ ಮೂಲಕ ಸರಕಾರದ ಜನ ವಿರೋಧಿ, ರೈತ ವಿರೋಧಿ ನೀತಿಗಳನ್ನು ಬಯಲಿಗೆಳೆದರು.

ಕೊನೆಯಲ್ಲಿ ಬಂಡಾಯ ಜಿಲ್ಲಾ ಸಂಚಾಲಕರಾದ ಪಿ.ಆರ್. ವೆಂಕಟೇಶ್ ರೈತ ಹೋರಾಟದ ಇತಿಹಾಸ ಹಾಗೂ ಸಾಹಿತ್ಯದಲ್ಲಿ ಅದರ ಪ್ರತಿಫಲನ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ ಭೀಮ್ ಅರ್ಮಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ರಘು ಮಾತನಾಡಿ 'ರೈತರು ನಡೆಸುವ ಎಲ್ಲ ಹೋರಾಟಕ್ಕೆ ಹೆಗಲಿಗೆ ಹೆಗಲು ನೀಡಿ ಬೆಂಬಲಿಸುತ್ತೇವೆ' ಎಂದರು.

ಕೊನೆಯಲ್ಲಿ ಸಿಐಟಿಯುನ ಮುಖಂಡ ಜೆ.ಸತ್ಯಬಾಬು ಧರಣಿ ಮುಂದುವರೆಸುವ ರೂಪುರೇಷೆಗಳ ಕುರಿತು ಮಾತನಾಡಿದರು.

–ಪಿ.ಆರ್.ವೆಂಕಟೇಶ್, ಬಳ್ಳಾರಿ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**